Editor: NITYANANDASWAMI Publisher: U. BASAVARAJA

RNI No. KARKAN/2006/17926

ಜನಶಕ್ತಿ ಕನ್ನಡ ವಾರ ಪತ್ರಿಕೆ

JANASHAKTHI KANNADA VARA PATRIKE

ದುಡಿಯುವ ಜನರ ಪ್ರಾಣಮಿತ್ರ

ಸಂಪುಟ : 16	ಸಂಚಿಕೆ : 50	ಡಿಸೆಂಬರ್ 5-11, 2022	ಪುಟ : 16	ಬೆಲೆ ರೂ. 10/-
Volume: 16	Issue: 50	December 5-11, 2022	Pages: 16	Price Rs 10/-



ಟೋಲ್ ಸಂಗ್ರಹ ಎನ್ನುವ ಹಗಲು ದರೋಡೆ



ಕೃಷಿ ಕಾರ್ಮಿಕರಿಗೆ ಸಮಾನ ನ್ಯಾಯ ಎಂಬುದೆಲ್ಲಿ?




"ನಮಸ್ಕಾರ್, ಮೈಂ ರವೀಶ್‌ಕುಮಾರ್"

ಈ ದನಿ ಇನ್ನು ಟಿವಿ ಚಾನೆಲ್‌ನಲ್ಲಿ ಇರುವುದಿಲ್ಲ

ಹವಾಮಾನ ಬದಲಾವಣೆ: ಹೆಚ್ಚಿನ ಕಷ್ಟಕಾದಿದೆಯೇ?

ಬ್ರಿಟಿಷರ 'ಒಡೆದು ಆಳು' ನೀತಿಯ ಜಾರಿಗೆ ಅತ್ಯುತ್ತಮ ಆಯ್ಕೆ

'ವೀರ' ಸಾವರ್ಕರ್– ಏಳು ಮಿಥ್ಯೆಗಳು



ಮಿಥ್ಯೆಗಳನ್ನು ಸತ್ಯಸಂಗತಿಗಳಿಂದ ಬೇರ್ಪಡಿಸುವ ಒಂದು ಪ್ರಾಮಾಣಿಕ ಆಕಾಂಕ್ಷೆಯಿಂದ ರಚಿಸಿರುವ ಡಾ.ಶಮ್ಸುಲ್ ಇಸ್ಲಾಮ್‌ರವರ 'ಸಾವರ್ಕರ್ ಅನ್ ಮಾಸ್ಕ್ಡ್' ಪ್ರಸ್ತಾವನೆಯಲ್ಲಿ ಸಾವರ್ಕರ್ ಅವರನ್ನು ರಾಷ್ಟ್ರೀಯ ನೇತಾರನನ್ನಾಗಿ ಬಿಂಬಿಸುವ ಯಾವುದೇ ಯೋಜನೆ 1998 ಕ್ಕೂ ಮುಂಚೆ ಹಿಂದುತ್ವ ಬ್ರಿಗೇಡಿಗೆ ಇರಲಿಲ್ಲ, ನಂತರ ಅದು ಮುನ್ನೆಲೆಗೆ ಬರುವಲ್ಲಿ ಕಾಂಗ್ರೆಸ್ ಪಕ್ಷದ ಪಾತ್ರವೂ ಇದೆ ಎಂಬುದನ್ನು ಪರಿಶೀಲಿಸುತ್ತ ಸಾವರ್ಕರ್ ಅವರ ಹೊಗಳುಭಟರ ತಂಡದಲ್ಲಿ ಕಾಂಗ್ರೆಸ್ ಕೂಡ ಸೇರಿಕೊಂಡದ್ದು ವಿಷಾದದ ಸಂಗತಿ ಎನ್ನುತ್ತಾರೆ. ಮುಂದೆ ಅವರು ಸಾವರ್ಕರ್ ರವರನ್ನು ಕುರಿತ ಏಳು ಮಿಥ್ಯೆಗಳನ್ನು ಒಂದೊಂದಾಗಿ ಈ ದಾಖಲೆಗಳ ಬೆಳಕಿನಲ್ಲಿ ಪರಿಶೀಲಿಸುತ್ತಾರೆ.

ಡಾ.ಶಮ್ಸುಲ್ ಇಸ್ಲಾಂ

ಅನು: ಟಿ.ಸುರೇಂದ್ರರಾವ್

ಸಾವರ್ಕರ್‌ರವರ ಬದುಕಿನ ಈ ಆಯಾಮವನ್ನು ಎತ್ತಿತೋರಿಸುತ್ತಾ, ಪ್ರಸಿದ್ಧ ಅಂಕಣಕಾರ್ತಿ ಮಾನಿನಿ ಚಟರ್ಜಿ ಹೀಗೆ ಬರೆಯುತ್ತಾರೆ:

ಜೈಲಿನಿಂದ ಬಿಡುಗಡೆಯಾದ ನಂತರ, ಸಾವರ್ಕರ್ ಅವರು ತಮ್ಮ ಹಿಂದಿನ ಜೀವನವನ್ನು ತ್ಯಜಿಸಿದರು ಮತ್ತು ಹಿಂದೂರಾಷ್ಟ್ರದ ನೀಲ ನಕ್ಷೆಯನ್ನು ರೂಪಿಸಲು ತಮ್ಮನ್ನು ತಾವು ಮುಡುಪಾಗಿಟ್ಟರು. ವಿದೇಶಿ ಆಳ್ವಿಕೆಯ ವಿರುದ್ಧದ ತಮ್ಮ ಹಿಂದಿನ ಕೋಪದ ಸ್ಥಾನದಲ್ಲಿ 'ಪುಣ್ಯಭೂಮಿ' ಮತ್ತು 'ಪಿತೃಭೂಮಿ' ಎಂಬ ವಿನಾಶಕಾರಿ ವಾದವನ್ನು ಶುರುಮಾಡಿದರು; ಅದು ಹಿಂದೂಗಳಲ್ಲದವರನ್ನು ಭಾರತದ 'ಪರಕೀಯ'ರೆಂದು ನಿರೂಪಿಸಿತು. ಮತ್ತು ಸ್ವಾತಂತ್ರ್ಯ ಚಳುವಳಿಗೆ ಸೇರಿಕೊಳ್ಳಲು ಯುವ ಪೀಳಿಗೆಯವರಿಗೆ ಸ್ಫೂರ್ತಿ ನೀಡಿದ ಖುದಿರಾಮ್ ಬೋಸ್, ಅಥವಾ ಸೂರ್ಯ ಸೇನ್, ಆಶ್ಫಕುಲ್ಲಾಖಾನ್ ಅಥವಾ ಭಗತ್ ಸಿಂಗ್ ಅವರಂಥವರಿಗಿಂತ ಭಿನ್ನವಾಗಿ ಅಂಡಮಾನಿನ ನಂತರದ ಸಾವರ್ಕರ್ ಅವರು ಈ ನಾಡಿನ ನಾಥೂರಾಮ್ ಗೋಡ್ಸೆಯಂಥವರನ್ನು ಮಾತ್ರವೇ ಹುರಿದುಂಬಿಸಿದರು.

ಎಲ್ಲಾ ಧಾರ್ಮಿಕ ಕೋಮಿನವರು ಸಾಮರಸ್ಯದಿಂದ ಬದುಕುವ ಸ್ವತಂತ್ರ ಭಾರತದ ಆದರ್ಶಕ್ಕಾಗಿ ತುಡಿಯುತ್ತಿದ್ದ ಕ್ರಾಂತಿಕಾರಿ ಸಾವರ್ಕರ್ ಆಗಿ ಈಗ ಉಳಿಯಲಿಲ್ಲ. ಸಾವರ್ಕರ್ ಅವರ ಅಧಿಕೃತ ಜೀವನಚರಿತ್ರಕಾರರ ಪ್ರಕಾರ, ಅವರು ಅಂಡಮಾನ್ ಜೈಲಿನಿಂದ ವಿದಾಯ ಹೇಳುವಾಗಲೇ ಸೆಲ್ಯುಲರ್ ಜೈಲಿನ ಕೆಲವು ಆಯ್ದ ಖೈದಿಗಳಿಗೆ ಪವಿತ್ರ ಪ್ರಮಾಣವಚನ ಬೋಧಿಸಿದಾಗಲೇ ಅವರ ಚಿಂತನೆಯಲ್ಲಿನ ಬದಲಾವಣೆ ಗೋಚರಿಸಿತ್ತು. ಆ ಪ್ರಮಾಣ ವಚನ ಹೀಗಿತ್ತು:

ಒಬ್ಬ ದೇವರು, ಒಂದು ದೇಶ,
ಒಂದು ಗುರಿ, ಒಂದು ಜನಾಂಗ,
ಒಂದು ಜೀವನ, ಒಂದು ಭಾಷೆ

ಸಾವರ್ಕರ್ ಅವರು ಸಮ್ಮಿಶ್ರ ರಾಷ್ಟ್ರೀಯವಾದ ಮತ್ತು ಮುಸ್ಲಿಮರ ಒಬ್ಬ ಕಟ್ಟಾ ವಿರೋಧಿಯಾಗಿ ಬದಲಾಗಿದ್ದನ್ನು ಹಿಂದುತ್ವ ಪಾಳೆಯದವರು ಹೀಗೆ ಸಮರ್ಥಿಸುತ್ತಾರೆ: ಸೆಲ್ಯುಲರ್ ಜೈಲಿನಲ್ಲಿ ಮುಸ್ಲಿಂ ಜೈಲು ಅಧಿಕಾರಿಗಳ ಕೈಯಲ್ಲಿ ಅವರು ಅನುಭವಿಸಿದ ಹಿಂಸೆ, ಕಿರುಕುಳಗಳೇ ಅವರ ಪರಿವರ್ತನೆಗೆ ಕಾರಣ ಎಂದು. ಪ್ರಮುಖ ಸಾವರ್ಕರ್ ವಾದಿಯಾದ ವೈ.ಡಿ.ಫಡ್ಕೆ ಹೇಳುತ್ತಾರೆ:


ಸೆಲ್ಯುಲರ್ ಜೈಲಿನಲ್ಲಿ ಪಠಾಣರು ನೀಡುತ್ತಿದ್ದ ಅಮಾನವೀಯ ಕಿರುಕುಳವು ಸಾವರ್ಕರ್ ಅವರ ಚಿಂತನೆಯಲ್ಲಿ ಅನಿರೀಕ್ಷಿತ ಪರಿವರ್ತನೆಯನ್ನು ಉಂಟುಮಾಡಿತು. 'ನನ್ನ ಜೀವಾವಧಿ ಶಿಕ್ಷೆ' ಎಂಬ ಅವರ ಆತ್ಮಕಥೆಯಲ್ಲಿ ಅವರು ಅನುಭವಿಸಿದ ದೈಹಿಕ ಹಾಗೂ ಮಾನಸಿಕ ಹಿಂಸೆಯ ಘಾಸಿಗೊಳಿಸುವ ವಿವರಗಳು ಇವೆ.

ಸಾವರ್ಕರ್ ಅವರ ಸ್ವಂತ ಬರವಣಿಗೆಯು ಈ ಸಂಗತಿಯನ್ನು ಪುಷ್ಟೀಕರಿಸುತ್ತದೆ:

ದೊಡ್ಡ ಸಂಖ್ಯೆಯ ದುಷ್ಟ ವಾರ್ಡರುಗಳು ಮುಸಲ್ಮಾನರಾಗಿದ್ದರು ಮತ್ತು ಅವರು ಸಿಂಧ್, ಪಂಜಾಬ್ ಮತ್ತು ವಾಯುವ್ಯಗಡಿ ಪ್ರಾಂತದವರಾಗಿದ್ದರು. ಅವರ ಅಡಿಯಲ್ಲಿನ ಬಹುತೇಕ ಖೈದಿಗಳು ಹಿಂದೂಗಳಾಗಿದ್ದರು. ಹಿಂದೂ ಖೈದಿಗಳು ಹಿಂಸೆಗೊಳಗಾಗಿದ್ದರು..

ಸೆಲ್ಯುಲರ್ ಜೈಲಿನಲ್ಲಿ ಸಾವರ್ಕರ್ ಅವರ ಸಮಕಾಲೀನ ಖೈದಿಗಳಾಗಿದ್ದ ಬರೀಂದ್ರಕುಮಾರ್ ಘೋಷ್ (ಅಲಿಪುರ್ ಬಾಂಬ್ ಪ್ರಕರಣದಲ್ಲಿ ಶಿಕ್ಷೆಗೆ ಒಳಗಾದವರು) ಕೂಡ ತಮ್ಮ ಆತ್ಮಕಥೆಯಲ್ಲಿ (ನನ್ನ ಗಡೀಪಾರಿನ ಕತೆ – ದಿ ಟೇಲ್ ಆಫ್ ಮೈ ಎಕ್ಸೈಲ್) ಮುಸ್ಲಿಂ ವಾರ್ಡರುಗಳು ನೀಡುತ್ತಿದ್ದ ಹಿಂಸೆಯ ಬಗ್ಗೆ ಚರ್ಚೆ ಮಾಡಿದ್ದಾರೆ. ಹಿಂದೂಗಳ ರೀತಿಯಲ್ಲಿಯೇ ಮುಸ್ಲಿಂ ಖೈದಿಗಳು ಕೂಡ ಹಿಂಸೆಗೊಳಗಾಗಿದ್ದರು ಎನ್ನುವುದನ್ನು ಉದಾಹರಣೆಗಳ ಸಹಿತ ಸ್ಪಷ್ಟವಾಗಿ ಹೇಳಿದ್ದರು. ಅವರ ಪ್ರಕಾರ:

ಅಂಡಮಾನಿನಲ್ಲಿ ಅವರು (ವಾರ್ಡರ್, ಸಣ್ಣ ಅಧಿಕಾರಿ, ಜಮಾದಾರ್ ಇತ್ಯಾದಿಗಳು) ಎಲ್ಲದರ ಮೇಲ್ವಿಚಾರಣೆ ನೋಡಿಕೊಳ್ಳುತ್ತಿದ್ದರು ಮತ್ತು ಅವರ ಕೈಗಳಲ್ಲೇ ಅಧಿಕಾರವಿತ್ತು. ಅವರೆಲ್ಲಾ ದೊಡ್ಡ ಧಣಿಗಳ–ಜೈಲರನ–ಅಂಗರಕ್ಷಕರಾಗಿದ್ದರು. ಹೊಡೆಯುವ ಮತ್ತು ಬೈಯುವ ಕಲೆಯಲ್ಲಿ ಅವರು ನಿಪುಣರಾಗಿದ್ದರು. ಸಾಲಿನಲ್ಲಿ ಸ್ವಲ್ಪ ಅಡ್ಡ ಕುಳಿತುಕೊಳ್ಳುವ ರಾಮ್‌ಲಾಲ್‌ನ ಕುತ್ತಿಗೆ ಮೇಲೆ ಎರಡು ಹೊಡೆತ ಹಾಕು. ಮುಸ್ತಫಾ ಹೇಳಿದ ಕೂಡಲೇ ಎದ್ದು ನಿಲ್ಲಲಿಲ್ಲ, ಅವನ ಮೀಸೆ ಕಿತ್ತುಹಾಕು. ಬಕಾಉಲ್ಲಾ ಶೌಚಾಲಯದಿಂದ ತಡವಾಗಿ ಬರುತ್ತಾನೆ, ಮೋಟುದೊಣ್ಣೆ ತಗೊಂಡು ಅವನ ಅಂಡಿನ ಚರ್ಮವನ್ನು ಸಡಿಲ ಮಾಡು–ಇಂತಹ ಸುಂದರ ಕಲಾಪಗಳ ಮೂಲಕ ಅವರು ಜೈಲಿನಲ್ಲಿ ಶಿಸ್ತನ್ನು ಕಾಪಾಡುತ್ತಿದ್ದರು.



ಅಲ್ಲಿ ಹಲವಾರು ಸಂದರ್ಭಗಳಲ್ಲಿ ಕರುಣಾಮಯಿ ವಾರ್ಡರುಗಳೂ ಇದ್ದರು ಎಂದು ಬರೀಂದ್ರ ಅವರು ಉದಾಹರಣೆಗಳ ಸಹಿತ ಹೀಗೆ ಹೇಳುತ್ತಾರೆ:

ಯಾರಿಗೂ ಗೊತ್ತಾಗದ ಹಾಗೆ ಗುಟ್ಟಾಗಿ ಮಾಂಸದ ಊಟ ತರುತ್ತಿದ್ದರು.. .. ಪ್ರಸಿದ್ಧ ದ್ರೌಪದಿಯಿಂದಲೇ ತಯಾರಾದ ಆಹಾರ ಕೂಡ ಅಷ್ಟು ರುಚಿಯಾಗಿರತ್ತಿತ್ತೋ ನನಗೆ ಗೊತ್ತಿಲ್ಲ, ಅಷ್ಟು ಸವಿಯಾದ ಆಹಾರವನ್ನು ನಾನು ಗಬಗಬನೆ ಆತುರದಿಂದ ಮುಕ್ಕುತ್ತಿದ್ದೆ.

ಅದೇ ಅಲಿಪುರ ಬಾಂಬ್ ಪ್ರಕರಣದಲ್ಲಿ ಬರೀಂದ್ರಕುಮಾರ್ ಘೋಷ್ ಜತೆಯಲ್ಲಿ ಉಪೇಂದ್ರ ನಾಥ್ ಬ್ಯಾನರ್ಜಿಯವರನ್ನೂ ಜೈಲಿಗೆ ಹಾಕಿದ್ದರು. ಅವರೂ ಕೂಡ ಬಂಗಾಳಿಯಲ್ಲಿ ತಮ್ಮ ಆತ್ಮಕಥೆ–'ನಿರ್ವಸಿತೆರ್ ಆತ್ಮಕಥಾ' (ಗಡೀಪಾರಿನ ಆತ್ಮಕತೆ) ಬರೆದಿದ್ದರು. ಪಠಾಣ್ ಹಾಗೂ ಬಲೂಚಿ ವಾರ್ಡರುಗಳು ಭೀಕರ ಹಿಂಸೆಯನ್ನು ಅದರಲ್ಲಿ ವಿವರಿಸಿದ್ದರು. ತ್ರೈಲೋಕ್ಯನಾಥ್ ಚಕ್ರವರ್ತಿ ಮತ್ತು ಉಲ್ಲಾಸ್ ಕರ್‌ದತ್ ಮುಂತಾದ ಖೈದಿಗಳು ಕೂಡ ತಮ್ಮ ಸೆಲ್ಯುಲರ್ ಜೈಲಿನ ಅನುಭವಗಳನ್ನು ಬರೆದಿದ್ದಾರೆ, ಆದರೆ ಅವರ್ಯಾರೂ ಸಾವರ್ಕರ್ ಅವರು ತಮ್ಮ 'ಗಡೀಪಾರು ಜೀವನದಕಥೆ'ಯ ರೀತಿಯಲ್ಲಿ ಜೈಲು ಅಧಿಕಾರಿಗಳ ವರ್ತನೆಯ ಬಗ್ಗೆ ಕೋಮುವಾದಿ ಬಣ್ಣ ಹಚ್ಚಲಿಲ್ಲ.


ಸತ್ಯ ಸಂಗತಿಯೆಂದರೆ ಸಾವರ್ಕರ್ ಮತ್ತವರ ಅನುಯಾಯಿಗಳು ಸ್ವಾತಂತ್ರ್ಯ ಚಳುವಳಿಯಿಂದ ತಮ್ಮನ್ನು ದೂರವಿರಿಸಿಕೊಳ್ಳುವ ಉದ್ದೇಶದಿಂದ ತಮ್ಮ ಆಕ್ರಮಣಕಾರಿ ಮುಸ್ಲಿಂ–ವಿರೋಧಿ ರಾಜಕೀಯವನ್ನು ಸಮರ್ಥಿಸಿಕೊಳ್ಳಲು ಸೆಲ್ಯುಲರ್ ಜೈಲಿನಲ್ಲಿ ಮುಸ್ಲಿಂ ವಾರ್ಡರುಗಳ ಹಿಂಸೆಯ ವಿಷಯವನ್ನು ಎತ್ತಿದ್ದರು. ಈ ರೀತಿಯ ವಾದವು ಗ್ರಹಣಶಕ್ತಿ ಹಾಗೂ ಸಾಮಾನ್ಯ ತಿಳುವಳಿಕೆಯನ್ನು ಮೀರಿದ್ದು. ಆ ಸೆಲ್ಯುಲರ್ ಜೈಲಿನಲ್ಲಿ ಹಿಂದೂ, ಸಿಖ್ ಮತ್ತು ಕ್ರಿಶ್ಚಿಯನ್ ವಾರ್ಡರುಗಳು ಹಾಗೂ ಅಧಿಕಾರಿಗಳೂ ಇದ್ದರೆಂಬ ಸತ್ಯವನ್ನು ಅದು ನಿರಾಯಾಸವಾಗಿ ಮರೆಮಾಚಿತ್ತು. ಕೆಲವು ಮುಸ್ಲಿಮರಾಗಿದ್ದ ವಾರ್ಡರುಗಳು ಹಿಂಸಾತ್ಮಕ ಹಾಗೂ ಅಮಾನುಷ ಚಟುವಟಿಕೆಗಳಲ್ಲಿ ತೊಡಗಿದ್ದರೆಂಬ ಒಂದೇ ಕಾರಣದಿಂದ ಸಾವರ್ಕರ್ ಅವರಂತಹ ಉನ್ನತ ಶಿಕ್ಷಣ ಪಡೆದವರು ಮುಸ್ಲಿಂ–ವಿರೋಧಿಯಾಗುತ್ತಾರೆ ಎನ್ನುವುದು ನಿಜಕ್ಕೂ ಅಚ್ಚರಿಯ ಸಂಗತಿಯೇ ಸರಿ. ಇದೇ ವಾದವನ್ನು ಮುಂದುವರಿಸಿದರೆ, ಸೀತೆಯನ್ನು ರಾವಣ ಅಪಹರಿಸಿದ ಹಾಗೂ ಕೌರವನಿಂದಾಗಿ ಮಹಾಭಾರತ ಘಟಿಸಿತು ಎಂಬ ಕಾರಣಕ್ಕಾಗಿ ಎಲ್ಲಾ ಹಿಂದೂಗಳನ್ನು ಶತ್ರುಗಳು ಎಂದು ಘೋಷಿಸಬೇಕಾಗುತ್ತದೆ!

ವಾಸ್ತವದಲ್ಲಿ, ಈ ರೀತಿಯ ಮುಸ್ಲಿಂ–ವಿರೋಧಿ ಸಿದ್ಧಾಂತವನ್ನು ಬೆಳೆಸಿದ್ದಕ್ಕಾಗಿ ಸಾವರ್ಕರ್ ಅವರನ್ನು ಪುರಸ್ಕರಿಸಬೇಕೆಂದು ಬ್ರಿಟಿಷರು ನಿರ್ಧರಿಸುತ್ತಾರೆ ಮತ್ತು ಅದಕ್ಕಾಗಿಯೇ ಸಾವರ್ಕರ್ ಅವರನ್ನು ಬಿಡುಗಡೆ ಮಾಡುತ್ತಾರೆ. ಎಂತಹ ವಿಶಿಷ್ಟ ಪರಿಸ್ಥಿತಿಯಲ್ಲಿ ಬಿಡುಗಡೆ ಮಾಡುತ್ತಾರೆ ಎನ್ನುವುದನ್ನು ಗಮನಿಸಬೇಕು:

ಹಿಂದೂ–ಮುಸ್ಲಿಂ ಐಕ್ಯತೆಯ ಅತ್ಯುನ್ನತ ಸ್ಥಿತಿಯ ಕಾರಣ ಅಸಹಕಾರ ಚಳುವಳಿಯು ಉತ್ತುಂಗ ಸ್ಥಿತಿ ತಲುಪಿತ್ತು. ಈ ಬೆಳವಣಿಗೆಯಿಂದ ಗಾಬರಿಗೊಂಡಿದ್ದ ಬ್ರಿಟಿಷರು ಈ ಐಕ್ಯತೆಯನ್ನು ನುಚ್ಚುನೂರು ಮಾಡಬಹುದಾದಂತಹ ಮುಖಂಡರಿಗಾಗಿ ಹುಡುಕಾಡುತ್ತಿದ್ದರು. ಹಿಂದುತ್ವ ಸಿದ್ಧಾಂತದ ತಯಾರಿಯಲ್ಲಿದ್ದ ಸಾವರ್ಕರ್ ಅವರಿಗೆ ಅತ್ಯುತ್ತಮ ಆಯ್ಕೆಯಾಗಿತ್ತು.



1921 ರಲ್ಲಿ ಸೆಲ್ಯುಲರ್ ಜೈಲಿನಿಂದ ಹೊರಗೆ ಬಂದಕೂಡಲೇ, ಸಾವರ್ಕರ್ ಅವರು ಹಿಂದೂರಾಷ್ಟ್ರ ನಿರ್ಮಾಣಕ್ಕಾಗಿ ತಮ್ಮ ಇಡೀ ಬದುಕನ್ನು ಮೀಸಲಾಗಿಟ್ಟರು. ಅಚ್ಚರಿಯ ಸಂಗತಿಯೆಂದರೆ, ಸರ್ಕಾರದ ಷರತ್ತುಗಳ ಪ್ರಕಾರ ಸಾವರ್ಕರ್ ಅವರು ಯಾವುದೇ ರಾಜಕೀಯ ಚಟುವಟಿಕೆಗಳಲ್ಲಿ ತೊಡಗದಂತೆ ನಿಷೇಧವಿದ್ದಾಗ್ಯೂ, ರತ್ನಗಿರಿಯಲ್ಲಿ ಹಿಂದೂ ಮಹಾಸಭಾವನ್ನು ಸಂಘಟಿಸಲು ಅವಕಾಶ ಮಾಡಿಕೊಡಲಾಯಿತು; ಅದು ಶುದ್ಧೀಕರಣ (ಮುಸ್ಲಿಮರು/ಕ್ರಿಶ್ಚಿಯನರನ್ನು ಹಿಂದೂಗಳಾಗಿ ಶುದ್ಧೀಕರಣ ಅಥವ ಮರುಮತಾಂತರ ಮಾಡುವ) ಕಾರ್ಯದಲ್ಲಿ ತೊಡಗಿತ್ತು ಮತ್ತು ಮಸೀದಿಗಳ ಮುಂದೆ ಹಾಡುಗಳನ್ನು ಹೇಳಲಾಗುತ್ತಿತ್ತು. ಸಾವರ್ಕರ್ ಅವರು ಕೆ.ಬಿ.ಹೆಡ್ಗೇವಾರ್ ಜತೆಯಲ್ಲಿ ದೀರ್ಘ ಸಭೆಗಳನ್ನು ನಡೆಸಿದರು, ಅದು ಆರ್.ಎಸ್.ಎಸ್. ನ ಸ್ಥಾಪನೆಗೆ ಕಾರಣವಾಯಿತು. ಬ್ರಿಟಿಷ್ ದೊರೆಗಳು ಸಹಜವಾಗಿಯೇ ಈ ರಾಜಕೀಯ ಚಟುವಟಿಕೆಗಳನ್ನು ಉದ್ದೇಶಪೂರ್ವಕವಾಗಿ ಕಡೆಗಣಿಸಿದರು, ಏಕೆಂದರೆ ಭಾರತದ ವಸಾಹತುಶಾಹಿಗಳ ಭವಿಷ್ಯವು ಈ ಕೋಮುವಾದಿ ವಿಭಜನೆಯ ಮೇಲೆ ನಿಂತಿತ್ತು ಮತ್ತು ಕೋಮು ಪರಿಸ್ಥಿತಿಯನ್ನು ಉಲ್ಬಣಗೊಳಿಸುವ ಕೆಲಸದಲ್ಲಿ ಸಾವರ್ಕರ್ ಅವರು ಸಂಪೂರ್ಣವಾಗಿ ಮುಳುಗಿದ್ದರು.



ಈ ಹಿಂದೆ, 1923 ರಲ್ಲಿ ರತ್ನಗಿರಿ ಜೈಲಿನಲ್ಲಿ ಬಂಧನದಲ್ಲಿದ್ದಾಗ ಸಾವರ್ಕರ್ ತನ್ನ ವಿವಾದಾತ್ಮಕ ಕೃತಿ ಹಿಂದುತ್ವ ವನ್ನು ಬರೆಯಲು ಮತ್ತು ಅದನ್ನು ಗುಟ್ಟಾಗಿ ಜೈಲಿನಿಂದ ಹೊರಗೆ ಕಳಿಸಲು ಸಾಧ್ಯವಾಗಿತ್ತು. ಈ ಕೆಲಸವು ಬ್ರಿಟಿಷ್ ಆಡಳಿತದ ನೇರ ಶಾಮೀಲು ಇಲ್ಲದೆ ಆಗಲು ಸಾಧ್ಯವಿರಲಿಲ್ಲ. ಅದನ್ನು 'ಒಬ್ಬ ಮರಾಠಾ' ಎಂಬ ಕಾಲ್ಪನಿಕ ಹೆಸರಿನಲ್ಲಿ ಪ್ರಕಟಿಸಲಾಗಿತ್ತು, ಏಕೆಂದರೆ ಸಾವರ್ಕರ್ ಅವರು ಜೈಲಿನಲ್ಲಿದ್ದು ಇಂತಹ ಕೃತಿಗಳನ್ನು ಬರೆಯಲು ಅವಕಾಶವಿರಲಿಲ್ಲ. ಆಸಕ್ತಿದಾಯಕ ವಿಷಯವೆಂದರೆ, ಲೇಖಕನ ಹಾಗೂ ಕೃತಿಯ ವಸ್ತುವು ಭಾರತೀಯರ ಹಿಂದೂ ಅಸ್ಮಿತೆಗೆ ಮಾತ್ರವೇ ಹೆಚ್ಚು ಪ್ರಾಮುಖ್ಯತೆ ನೀಡಿತ್ತಾದರೂ, ಆಯ್ದುಕೊಂಡಿದ್ದ ಕಾಲ್ಪನಿಕ ಹೆಸರು ಮಾತ್ರ ಪ್ರಾದೇಶಿಕ ಅಸ್ಮಿತೆಯನ್ನು ಸೂಚಿಸುತ್ತಿತ್ತು, ಧಾರ್ಮಿಕ ಅಸ್ಮಿತೆಯನ್ನಲ್ಲ. ಈ ಪುಸ್ತಕವು ಮುಸ್ಲಿಮರು ಮತ್ತು ಕ್ರಿಶ್ಚಿಯನ್ನರಿಗೆ ಮಾತ್ರ ಕಳಂಕ ಹಚ್ಚದೇ, ಪ್ರಾಚೀನ ಭಾರತದಲ್ಲಿ ಬೌದ್ಧರನ್ನು ಹಿಂಸಾತ್ಮಕವಾಗಿ ಚೊಕ್ಕಟಗೊಳಿಸಿದ್ದನ್ನು ಕೂಡ ಸಮರ್ಥಿಸಿದೆ. ಅಚ್ಚರಿಯ ಸಂಗತಿಯೆಂದರೆ, ಲೇಖಕನ ನಿಜವಾದ ಗುರುತು ಗುಟ್ಟಾಗಿರಲಿಲ್ಲವಾದರೂ, ಬ್ರಿಟಿಷ್ ಸರ್ಕಾರವು ಸಾವರ್ಕರ್ ಅವರ ವಿರುದ್ಧ ಯಾವುದೇ ರೀತಿಯ ಶಿಕ್ಷೆ ವಿಧಿಸುವ ಕಾರ್ಯಕ್ಕೆ ಮುಂದಾಗಲಿಲ್ಲ. ಅಸಹಕಾರ ಚಳುವಳಿ ಮತ್ತು ಖಿಲಾಫತ್ ಚಳುವಳಿಯ ಸಂದರ್ಭದಲ್ಲಿನ ಹಿಂದೂ–ಮುಸ್ಲಿಂ ಐಕ್ಯತೆಯು ಬ್ರಿಟಿಷ್ ದೊರೆಗಳನ್ನು ಗಲಿಬಿಲಿಗೊಳಿಸಿದ್ದರಿಂದಾಗಿ ಸಾವರ್ಕರ್ ಅಂಥವರ ಕೋಮುವಾದಿ ಹಸ್ತಕ್ಷೇಪಗಳು ಕೋಮುವಾದಿ ವಿಭಜನೆಗಳನ್ನು ಹೆಚ್ಚು ಮಾಡುವಲ್ಲಿ ಅವರಿಗೆ ಸಹಾಯಕವಾಗಿತ್ತು ಎನ್ನುವುದನ್ನು ಯಾರೂ ಅರ್ಥಮಾಡಿಕೊಳ್ಳಬಲ್ಲರು.

ಮಿಥ್ಯೆ 1 –'ಸಾವರ್ಕರ್ ಒಬ್ಬ ದಂತಕತೆಯಾದ ಸ್ವಾತಂತ್ರ್ಯ ಹೋರಾಟಗಾರ'!

ಸಾವರ್ಕರ್ ಒಬ್ಬ ದಂತಕತೆಯಾದ ಸ್ವಾತಂತ್ರ್ಯ ಹೋರಾಟಗಾರ. ಸಾವರ್ಕರ್ ಅಸಾಧಾರಣ ಧೈರ್ಯ ಪ್ರದರ್ಶಿಸಿದರು. ಬ್ರಿಟಿಷ್ ಆಳರಸರೊಂದಿಗೆ ಅವರು ಎಂದೂ ಶಾಮೀಲಾಗಲಿಲ್ಲ ಎಂದು ಹಿಂದುತ್ವ ಪ್ರಚಾರಕರ ಮಿಥ್ಯೆಯನ್ನು ಪರಿಶೀಲಿಸುತ್ತ ಕಾಲಾಪಾನಿ ಅಥವಾ ಕರಿನೀರು ಎಂದು ಕರೆಯಲ್ಪಡುವ ಅಂಡಮಾನಿನ ಭಯಂಕರ ಸೆಲ್ಯುಲರ್ ಜೈಲಿನಲ್ಲಿ. ಗೂಡಿನಂತಿರುವ ಸಣ್ಣಕೋಣೆಯಲ್ಲಿ ಭೀಕರ ಕ್ರೌರ್ಯಗಳಿಗೆ ಒಳಗಾದವರು ಸಾವರ್ಕರ್ ಒಬ್ಬರೇ ಎಂದು ಬಿಂಬಿಸಲು ಬಿಜೆಪಿ ನೇತೃತ್ವದ ಸರ್ಕಾರವು ಶತಪ್ರಯತ್ನ ಮಾಡುತ್ತಿರುವಂತೆ ಕಾಣುತ್ತಿದೆ ಎನ್ನುವ ಲೇಖಕರು, ಸೆಲ್ಯುಲರ್ ಜೈಲು ಅಂದರೆ ಕೇವಲ ಸಾವರ್ಕರ್ ಕತೆ ಅಲ್ಲ ಎನ್ನುತ್ತಾರೆ. ಸ್ವತಃ ಸಾವರ್ಕರ್ ತಮ್ಮ ರಾಜಕೀಯ ಜೀವನದ ಮೊದಲ ಘಟ್ಟದಲ್ಲಿ, ಭಾರತವು ಹಿಂದೂ ಮತ್ತು ಮುಸ್ಲಿಮರ ನಡುವಿನ ಘರ್ಷಣೆಯ ಕಣವಾಗಿತ್ತು ಎಂಬ ವಾದವನ್ನಾಗಲೀ ಅಥವಾ ಹಿಂದೂಗಳು ಮಾತ್ರ ಭಾರತದ ಸಹಜ ದೇಶಪ್ರೇಮಿಗಳು ಎಂಬ ನಂಬಿಕೆಯನ್ನಾಗಲೀ ಹೊಂದಿರಲಿಲ್ಲ. ಆದರೆ ಸೆಲ್ಯುಲರ್ ಜೈಲಿನಲ್ಲಿನ ಕಾರಾಗೃಹವಾಸ ಮತ್ತು ಅವರು ಅಲ್ಲಿ ಪಡಬೇಕಾದ ಘೋರಯಾತನೆಯು ಅವರನ್ನು ಸಂಪೂರ್ಣವಾಗಿ ಕುಗ್ಗಿಸಿತು. ಅದು ಅವರನ್ನು ರಾಜಕೀಯ ಬದುಕಿನ ಎರಡನೇ ಘಟ್ಟಕ್ಕೆ ಎಳೆದೊಯ್ಯಿತು. ನವಂಬರ್ 14, 1913 ರಂದು ಸಾವರ್ಕರ್ ಸ್ವತಃ ಒಂದು ಕ್ಷಮಾಯಾಚನೆಯ ಅರ್ಜಿಯನ್ನು ಸರ್ ರೆಜಿನಾಲ್ಡ್ ಅವರಿಗೆ ಸಲ್ಲಿಸಿದರು.

(ಮುಂದುವರೆಯುವುದು)

ಸಂಪಾದಕೀಯ

ಎಸ್.ಸಿ.ಪಿ. ಮತ್ತು ಟಿ.ಎಸ್.ಪಿ. ಉಪ ಯೋಜನೆ ಜಾರಿ ನಿರ್ಲಕ್ಷ್ಯ: ಸರಕಾರವೇ ತಪ್ಪಿತಸ್ಥ

ಪರಿಶಿಷ್ಟ ಜಾತಿ ಮತ್ತು ಪ.ಪಂಗಡಗಳ ಅಭಿವೃದ್ದಿಗೆಂದೇ ರೂಪಿಸಲಾದ ಎಸ್.ಸಿ.ಎಸ್.ಪಿ ಮತ್ತು ಟಿ.ಎಸ್.ಪಿ ಉಪಯೋಜನೆಯ ಅನುಷ್ಠಾನದಲ್ಲಿ ಕರ್ನಾಟಕ ತೀರಾ ಹಿಂದುಳಿದಿರುವುದು ಅತ್ಯಂತ ಗಂಭೀರ ವಿಚಾರ. ಇದನ್ನು ಜಾರಿಗೊಳಿಸಿ ಸಮುದಾಯಗಳನ್ನು ಸಬಲೀಕರಿಸುವ ಹೊಣೆಗಾರಿಕೆಯ ಅಧಿಕಾರಿಗಳು, ಒಟ್ಟಾರೆ ಕರ್ನಾಟಕ ಸರಕಾರ ತೀವ್ರತರ ನಿರ್ಲಕ್ಷ್ಯತನ ತೋರಿರುವುದು ಸ್ಪಷ್ಟ. ಈ ವೈಫಲ್ಯದ ಹೊಣೆಯನ್ನು ಸಂಬಂಧಿಸಿದ ಅಧಿಕಾರಿಗಳು, ಮುಖ್ಯವಾಗಿ ಸಮಾಜ ಕಲ್ಯಾಣ ಸಚಿವರು ಹೊರಬೇಕು.

ರಾಜ್ಯ ಸರಕಾರದ ಬಜೆಟ್ ಅಂಗೀಕಾರವಾಗಿ ಏಳು ತಿಂಗಳೇ ಕಳೆದವು. 2022-23 ನೆಯ ಸಾಲಿನ ಬಜೆಟ್ ಗೆ ಪೂರ್ವ ಸಿದ್ದತೆಗಳೂ ಇನ್ನೇನು ಆರಂಭಗೊಳ್ಳಲಿವೆ. ಈ ಅಕ್ಟೋಬರ್ ಅಂತ್ಯದಲ್ಲಿ ಮಂಜೂರಾದ ಹಣದ ಶೇ. 14 ರಷ್ಟು ಮಾತ್ರ ಖರ್ಚು ಮಾಡಲಾಗಿದೆ. ಉಳಿದ ಒಟ್ಟು ಮೊತ್ತಕ್ಕೂ ನಿಖರ ಕಾರ್ಯ ಯೋಜನೆ ರೂಪಿಸಿಲ್ಲ ಎನ್ನುವ ಮಾಹಿತಿಳು ಪ್ರಕಟವಾಗಿವೆ. ವಿಚಿತ್ರವೆಂದರೆ ಇದೇ ಡಿಸೆಂಬರ್ 1 ರಂದು ಸಂಬಂಧಿಸಿದ 35 ಇಲಾಖೆಗಳ ನೋಡಲ್ ಅಧಿಕಾರಿಗಳ ಸಭೆಯ ಬಳಿಕ ಸಚಿವ ಕೋಟ ಶ್ರೀನಿವಾಸ ಪೂಜಾರಿಯವರು ಪ್ರಕಟಿಸಿದಂತೆ ಈ ಹಂತದಲ್ಲಿ ಮಂಜೂರಾದ ರೂ. 20843 ರಲ್ಲಿ ರೂ.9298 ಖರ್ಚಾಗಿದೆ. ಉಪಯೋಜನೆಯ ಈ ಹಣ ಶೇ 45 ರಷ್ಟು ವೆಚ್ಚವಾಗಿರುವುದಾಗಿ ಹೇಳಿದ್ದಾರೆ. ಒಟ್ಟು ಮೀಸಲಿಟ್ಟ 29,165 ಕೋ.ರೂಗಳಲ್ಲಿ 12,,229 ಕೋ.ರೂಗಳು ಖರ್ಚಾಗಿದೆ. ಅಂದರೆ ಆರು ತಿಂಗಳಲ್ಲಿ ಆಗಲಾರದ್ದು ಸಭೆ ನಿಗದಿಯಾದ ಒಂದು ತಿಂಗಳಲ್ಲಿಯೇ ಅಂದಾಜು ಸುಮಾರು ಶೇ 30 ರಷ್ಟು ಹೆಚ್ಚುವರಿ ಪ್ರಗತಿ ಸಾಧಿಸಿರುವುದು ಸಾಧನೆಯೇ ಸರಿ. ಸಚಿವರ ಹಾಗೂ ಅಧಿಕಾರಿಗಳ ಕಾರ್ಯದಕ್ಷತೆಗೆ ಅಭಿನಂದಿಸಬೇಕೋ ಅಥವಾ ಅನುಮಾನಿಸಬೇಕೋ ನಿರ್ಧರಿಸಬೇಕಾದ ವಿಚಾರ.

ಈ ಹಿಂದಿನ ವರ್ಷಗಳ ಅನುಭವವನ್ನು ಅವಲೋಕಿಸಿದರೆ ಈ ಉಪ ಯೋಜನೆಯ ಹಣವನ್ನು ಸಮರ್ಥವಾಗಿ, ಸಮರ್ಪಕವಾಗಿ ಹಾಗೂ ಸಮಗ್ರವಾಗಿ ಬಳಸಿರುವುದು ತುಂಬಾ ಕಡಿಮೆ. ಪ್ರತಿ ವರುಷವೂ ಏನಿಲ್ಲವೆಂದರೂ ಶೇ.20-25 ರಷ್ಟು ಹಣ ಖರ್ಚಾಗದೇ ಉಳಿಯುತ್ತಿತ್ತು. ಅಂಹಹ ಸ್ಥಿತಿಯಲ್ಲಿ ಕೊನೆ ಗಳಿಗೆಯಲ್ಲಿ ಅವಸರವಾಗಿ ಖರ್ಚು ಮಾಡುವುದು ನಡೆಸು ಬಂದಿರುವ ಸಂಪ್ರದಾಯ. ಅಂದರೆ ಉದ್ದೇಶಿತ ಗುರಿ ತಲುಪುವ ಇರಾದೆ ಇರುವುದಿಲ್ಲ. ಕಳೆದ ವರುಷದಲ್ಲೂ ಮೀಸಲಿಟ್ಟಿದ್ದ ಒಟ್ಟು ಮೊತ್ತ ರೂ. 27,021.62 ಕೋಟಿಯಲ್ಲಿ ಸುಮಾರು 1000 ಕೋಟಿಯಷ್ಟು ಹಣ ಉಳಿದಿತ್ತು. ಅದನ್ನು ಈ ವರ್ಷದ ಸಾಲಿಗೆ ಸೇರಿಸಲಾಯಿತು. ಇಲ್ಲಿ ಸರಕಾರಗಳು ಬಜೆಟ್ ನಲ್ಲಿ ಭಾರೀ ಮೊತ್ತ ಮೀಸಲಿಟ್ಟಿರುವುದಾಗಿ ನಂಬಿಸಿ ನಂತರ ಜಾರಿ ಮಾಡದೇ ಲ್ಯಾಪ್ಸ್ ಆಗುವಂತೆ, ಆ ಹಣ ಹಿಂದೆ ಖಜಾನೆಗೆ ವಾಪಾಸು ಹೋಗುವಂತೆ ಮಾಡಲಾಗುತ್ತಿತ್ತು. ಇಂತಹ ವಂಚನೆಯ ವಿರುದ್ಧ ಧ್ವನಿ ಎತ್ತಿದ್ದರಿಂದ ಮತ್ತು ವಿಶೇಷವಾಗಿ ಅವಿಭಜಿತ ಆಂದ್ರಪ್ರದೇಶದಲ್ಲಿ ಸಿಪಿಐ(ಎಂ) ಪಕ್ಷ ನಡೆಸಿದ ಹೋರಾಟದ ಫಲವಾಗಿ ಕಾಯ್ದೆಯೊಂದು ರೂಪುಗೊಂಡಂತೆ ಇಲ್ಲಿಯೂ ಅದರ ಅಗತ್ಯವನ್ನು ಸಂಘಟನೆಗಳು ಸರಕಾರಕ್ಕೆ ಮನವರಿಕೆ ಮಾಡಿದ್ದವು. ಪರಿಣಾಮವಾಗಿ 2013 ರಲ್ಲಿ ಕರ್ನಾಟಕ ಸರಕಾರ ಕಾಯ್ದೆಯನ್ನು ಅಂಗೀಕರಿಸಿತು. ಇದರಲ್ಲಿ ಹಂಚಿಕೆಯಾದ ನಿಗದಿತ ಹಣವನ್ನು ಖರ್ಚು ಮಾಡದೇ ಉಳಿದ ಹಣ ಮುಂದಿನ ವರ್ಷಕ್ಕೆ ಸೇರಬೇಕೆಂದು, ಜಾರಿ ಮಾಡದ ಅಧಿಕಾರಿಗಳ ಮೇಲೆ ಕ್ರಿಮಿನಲ್ ಮೊಕದ್ದಮೆ ಹೂಡಿ ಆರು ತಿಂಗಳು ಜೈಲಿಗೂ ತಳ್ಳಬಹುದಾದ ಅವಕಾಶವನ್ನು ಕಲ್ಪಿಸಲಾಗಿತ್ತು. ಆದರೆ ಈ ಉಪಯೋಜನೆಗಳ ಹಣ ಪ್ರತಿ ವರ್ಷವೂ ಆರಂಭದಲ್ಲಿಯೇ ಖರ್ಚಾಗದೇ ಉಳಿಯುವುದು ನಡೆದೇ ಇದ್ದರೂ ಸರಕಾರ ಕಣ್ಣು ಮುಚ್ಚಿ ಕುಳಿತಿರುವುದರ ಅರ್ಥವೇನು? ಮತ್ತು ಕೊನೆಯಲ್ಲಿ ತರಾತುರಿಯಲ್ಲಿ ಖರ್ಚು ಮಾಡಿದಂತೆ ಆಡುವುದೇನು? ಹಾಗೆ ಅಪರಾಧ ಎಸಗಿದ ಅಧಿಕಾರಿಯ ಮೇಲೆ ಇಲ್ಲಿಯವರೆಗೂ ಏನೊಂದು ವಿಚಾರಣೆ, ಕಠಿಣ ಕಾನೂನಿನ ಕ್ರಮ ಕೈಗೊಳ್ಳಲಿಲ್ಲವೇಕೆ? ಇಲ್ಲಿ ಇಚ್ಛಾಶಕ್ತಿಯ ಕೊರತೆ ಮಾತ್ರವಲ್ಲ, ಈ ಸಮುದಾಯಗಳನ್ನು ವಂಚಿಸುವ, ಅದೇ ದುಸ್ಥಿತಿಯಲ್ಲಿ ಉಳಿಸುವ ಬಹುಬದೊಡ್ಡ ಹುನ್ನಾರ ಇರುವುದನ್ನು ನಿರಾಕರಿಸುವಂತಿಲ್ಲ. ಈಗಲಾದರೂ ಸರಕಾರ, ಅದರ ಸಚಿವರು ಬಿಗಿ ಕ್ರಮ, ಮುಂಜಾಗೃತಿ ಕೈಗೊಳ್ಳಲು ಮುಂದಾಗಲಿ.

ಇನ್ನೂ ಒಂದು ಅಂಶವೆಂದರೆ ಎಸ್.ಸಿ.ಪಿ ಮತ್ತು ಟಿ.ಎಸ್.ಪಿ ಉಪ ಯೋಜನೆಯ ಹಣ ಯಾವುದಕ್ಕೆ ಖರ್ಚಾಗಿದೆ, ಅದರ ಉಪಯುಕ್ತತೆ, ಪ್ರಯೋಜನ, ಉದ್ದೇಶ ಈಡೇರಿಕೆಯಲ್ಲಿ ಸಫಲವಾಗಿದೆಯೇ ಎಂಬ ಬಗ್ಗೆ ಸಮಗ್ರವಾದ ವಿಮರ್ಶೆಯೇ ನಡೆದಿಲ್ಲ. ಈಗಲೂ ಈ ವರ್ಷದ ಅಕ್ಟೋಬರ್ ತಿಂಗಳ ಮದ್ಯಂತರ ವರದಿಯಲ್ಲಿ ತಿಳಿದು ಬಂದಂತೆ ಮುಂಜೂರಾದ ಹಣದಲ್ಲಿ ಮೀನುಗಾರಿಕೆ ಶೇ.78.73, ಕಾರ್ಮಿಕ ಇಲಾಖೆ ಶೇ. 75 ಪ್ರಗತಿ ಸಾಧಿಸಿದ್ದರೆ, ಉನ್ನತ ಶಿಕ್ಷಣ ಶೇ.2.. 20, ಕೌಶಲಾಭಿವೃದ್ಧಿಗೆ ಶೇ.4. 65 ಮಾತ್ರ ವಿನಿಯೋಗಿಸಿವೆ. ಮೂಲತಃ ಈ ಉಪ ಯೋಜನೆ ಮಾನವ ಸಂಪನ್ಮೂಲದ ಅಭಿವೃದ್ಧಿ ಇದರ ಆದ್ಯತೆಗಳಲ್ಲೊಂದು. ಆದರೆ ಅದೇ ನಿರ್ಲಕ್ಷ್ಯಕ್ಕೆ ಒಳಗಾಗಿರುವುದು ಸರಳ ವಿಷಯವಲ್ಲ. ಈ ಬಗ್ಗೆ ಸಂಬಂಧಿಸಿದ ಇಲಾಖೆಯ ಅಧಿಕಾರಿಗಳು, ಸಚಿವರೂ ಮೌನವಾಗಿರುವುದು ಸರಿಯಲ್ಲ. ಉನ್ನತ ಶಿಕ್ಷಣ ಕ್ಷೇತ್ರದಲ್ಲಿ ವಿದ್ಯಾರ್ಥಿಗಳಿಗೆ ಹಣಕಾಸಿನ ನೆರವಿಲ್ಲದೆ ಸಂಕಟದಲ್ಲಿ ಒದ್ದಾಡುತ್ತಿರುವ ನೋವಿನ ಕೂಗು ಈ ಮಹೋದಯರಿಗೆ ಕೇಳಿಸುತ್ತಲೇ ಇಲ್ಲ. ಮೇಲಾಗಿ ಈ ಸಮುದಾಯಗಳ ಬಗ್ಗೆ ಮುತುವರ್ಜಿ, ಸಂರಕ್ಷಣಾ ಕ್ರಮಗಳನ್ನು ಕೈಗೊಳ್ಳಬೇಕಿರುವ ಜವಾಬ್ದಾರಿ ಮಾನ್ಯ ಮುಖ್ಯಮಂತ್ರಿಗಳು ಹಾಗೂ ರಾಷ್ಟಪತಿಗಳ ಪ್ರತಿನಿಧಿಯಾದ ರಾಜ್ಯಪಾಲರ ಮೇಲೂ ಇದೆ.

ಈ ಎಲ್ಲಾ ಅಂಶಗಳ ಹಿನ್ನೆಲೆಯಲ್ಲಿ ಸರಕಾರ ಈ ಕ್ಷೇತ್ರದ ಆರ್ಥಿಕ ತಜ್ಞರು, ಸಮುದಾಯಗಳ ಪ್ರಮುಖರು, ಕ್ಷೇತ್ರ ಅಧ್ಯಯನಕಾರರು, ವಿವಿಧ ಸಂಘಟನೆಗಳ ಪ್ರತಿನಿಧಿಗಳ ಸಭೆ ಕರೆದು ಪಾರದರ್ಶಕ ವಿಮರ್ಶೆಯ ಅವಲೋಕನ ನಡೆಸಲಿ. ತಪ್ಪಿತಸ್ಥ ಅಧಿಕಾರಿಗಳ ಮೇಲೆ ಕಠಿಣ ಕ್ರಮ ಜರುಗಿಸಲಿ. ಇಲ್ಲವಾದರೆ ಅಧಿಕಾರಶಾಹಿಗಳ ಮಾತುಗಳು ಸಚಿವರು, ಮುಖ್ಯಮಂತ್ರಿಗಳ ಬಾಯಿಯಲ್ಲಿ ಬಣ್ಣದ ಕಥೆಗಳಾಗಿ ಭಿತ್ತರವಾಗಬಹುದಷ್ಟೆ.

ಮಂಗಳೂರುಃ ಕುಕ್ಕರ್ ಸ್ಫೋಟದ ಸುತ್ತ ಒಂದು ನೋಟ

ಮಂಗಳೂರು ನಗರದ ನಾಗುರಿ ಸಮೀಪ ನವೆಂಬರ 19 ರಂದು ಸಂಜೆ ಹೊತ್ತು ಚಲಿಸುತ್ತಿದ್ದ ಅಟೋರಿಕ್ಷಾವೊಂದರಲ್ಲಿ ನಿಗೂಢ ವಸ್ತುವೊಂದು ಸ್ಫೋಟಗೊಂಡು ಇಬ್ಬರು ಗಾಯಗೊಂಡಿರುವ ಪ್ರಕರಣ ನಡೆದಿದೆ. ಹಿಂದಿನ ಸೀಟಲ್ಲಿ ಕುಳಿತಿದ್ದ ಪ್ರಯಾಣಿಕನು ತಂದಿದ್ದ ಕುಕ್ಕರ್ ಎನ್ನಲಾದ ವಸ್ತು ಸ್ಫೋಟಗೊಂಡುದಾಗಿ ನಂತರ ತಿಳಿದು ಬಂದಿದೆ. ಇದರಿಂದಾಗಿ ಅಟೋರಿಕ್ಷಾವು ಹಾನಿ ಗೊಂಡು ಅದರ ಚಾಲಕ ಮತ್ತು ಆ ಪ್ರಯಾಣಿಕನಿಗೂ ತೀವ್ರ ಗಾಯಗಳಾಗಿವೆ. ಅವರಿಬ್ಬರನ್ನೂ ನಗರದ ಫಾದರ್ ಮುಲ್ಲರ್ಸ್ ಖಾಸಗೀ ಆಸ್ಪತ್ರೆಗೆ ಚಿಕಿತ್ಸೆಗಾಗಿ ದಾಖಲು ಮಾಡಲಾಗಿದೆ.

ನಗರದ ಪೊಲೀಸ್ ಕಮೀಷನರ್ ಎನ್. ಶಶಿಕುಮಾರ್, ಮತ್ತು ಅಪರಾಧಿ ಪತ್ತೆದಳದ ಇನ್ಸ್ಪೆಕ್ಟರವರು ಘಟನೆ ನಡೆದ ಸ್ಥಳಕ್ಕೆ ತಕ್ಷಣ ಭೇಟಿ ನೀಡಿದ್ದಾರೆ. ಮೊದಲ ಮಾಹಿತಿಯಂತೆ ರಿಕ್ಷಾ ಚಾಲಕನ ಹೆಸರು ಪುರುಷೋತ್ತಮ ಮತ್ತು ಪ್ರಯಾಣಿಕನ ಹೆಸರು ಪ್ರೇಮ್ ರಾಜ್ ಹುಟಗಿ ಎಂದು ತಿಳುವಳಿಕೆಯಾಗಿದೆ. ಘಟನೆಯಿಂದ ಚಾಲಕನಿಗೆ ಶೇಕಡಾ 25 ಮತ್ತು ಪ್ರಯಾಣಿಕನಿಗೆ ಶೇಕಡಾ 45ರಷ್ಟು ಸುಟ್ಟ ಗಾಯಗಳಾಗಿವೆಯೆಂದು ಚಿಕಿತ್ಸೆ ನೀಡುತ್ತಿರುವ ವೈಧ್ಯರು ಮಾಹಿತಿ ನೀಡಿದ್ದಾರೆ. ಸ್ಫೋಟದಿಂದಾಗಿ ಎದ್ದ ಭಯಂಕರ ಹೊಗೆಯು ಪ್ರಯಾಣಿಕನ ಶ್ವಾಸಕೋಶಕ್ಕೆ ಸೇರಿಕೊಂಡಿದ್ದು ಉಸಿರಾಟದ ತೊಂದರೆಯನ್ನು ಎದುರಿಸುತ್ತಿದ್ದಾನೆ. ಘಟನೆ ನಡೆದ ಸ್ಥಳದಲ್ಲಿ ದಟ್ಟವಾಗಿ ಹೊಗೆಯಾಡುತ್ತಿರುವುದು ಸ್ಥಳೀಯ ಕಟ್ಟಡವೊಂದರಲ್ಲಿ ಅಳವಡಿಸಲಾದ ಸಿ.ಸಿ. ಕ್ಯಾಮರಾದಲ್ಲಿ ದಾಖಲಾಗಿದೆ. ಗಾಯಗೊಂಡಿರುವ ಆ ಪ್ರಯಾಣಿಕನನ್ನು ಮಾತಾಡಿಸಲು ಯತ್ನಿಸಿದ ಪೋಲೀಸರಿಗೆ ಹೆಚ್ಚಿನ ಮಾಹಿತಿ ಪಡೆಯಲು ಸಾಧ್ಯವಾಗಿರಲಿಲ್ಲ.

ತಾನು ಮೈಸೂರಿನಿಂದ ಬಂದಿರುವೆನೆಂದೂ ಬಾಬುರಾವ್ ನನ್ನ ಅಣ್ಣನೆಂದೂ ಅವನಿಗೆ ಕರೆಮಾಡುವಂತೆ ಹೇಳಿದ್ದನೆಂಬುದಾಗಿ ಪೋಲೀಸರು ತಿಳಿಸಿದ್ದಾರೆ. ಬಾಬು ರಾವ್ ಗೆ ಫೋನಾಯಿಸಿದಾಗ-" ಆತ ನನ್ನ ತಮ್ಮನಲ್ಲ.. ನಮ್ಮಲ್ಲಿ ಬಾಡಿಗೆಗೆ ರೂಮ್ ಪಡೆದಿದ್ದ, ಬೆಂಗಳೂರಿಗೆ ಹೋಗುವುದಾಗಿ ಹೇಳಿ ಹೋಗಿದ್ದಾನೆಂಬ ಉತ್ತರ ಸಿಗುತ್ತದೆ. ಹೇಳಿಕೆಗಳಲ್ಲಿ ಸಂಶಯ ಕಂಡು ಬಂದುದರಿಂದ ತನಿಖಾ ಪೋಲೀಸರು ಇನ್ನಷ್ಟು ಗೊಂದಲಕ್ಕೊಳಗಾಗಿದ್ದರು. ಈತನ ಕೈಯಲ್ಲಿದ್ದ "ಪ್ರೇಮ್ರಾಜ್ ಹುಟಗಿ" ಹೆಸರಿನ ಗುರುತು ಚೀಟಿಯು ನಕಲಿ ಎಂಬುದಾಗಿ ತಿಳಿದು ಬರುತ್ತದೆ. ಈ ಗುರುತು ಚೀಟಿಯ ಮೂಲವ್ಯಕ್ತಿಯು ಹುಬ್ಬಳ್ಳಿಯಲ್ಲಿರುವುದಾಗಿಯೂ ಆತ ಆರುತಿಂಗಳ ಹಿಂದೆ ಈ ಗುರುತು ಚೀಟಿಯನ್ನು ಕಳಕೊಂಡಿದ್ದನೆಂಬ ಮಾಹಿತಿ ಸಿಗುತ್ತದೆ. ಸಂಶಯದ ಹುತ್ತ ಬೆಳೆಯುತ್ತಿದ್ದಂತೆ ತನಿಖಾ ತಂಡವು ಇನ್ನಷ್ಟು ಚುರುಕಾಗುವುದು. ತನಿಖಾ ತಂಡವು ಈತನ ಸಹಚರರನ್ನು ಮತ್ತು ಕುಟುಂಬಿಕರನ್ನು ಸಂಪರ್ಕಿಸುವ ಪ್ರಯತ್ನ ಮಾಡುತ್ತದೆ. ಪೊಲೀಸ್ ತಂಡಕ್ಕೆ ಸಿಕ್ಕಿದ ಮಾಹಿತಿಯಂತೆ ಈ ಪ್ರಯಾಣಿಕನ ಹೆಸರು ಮಹಮ್ಮದ್ ಶಾರೀಕ್ ಎಂತಲೂ, ಈ ಹಿಂದಿನ ಪ್ರಕರಣವೊಂದಕ್ಕೆ ಸಂಬಂಧ ಪಟ್ಟಂತೆ ಶಿವಮೊಗ್ಗದ ಪೋಲೀಸರು ಈತನ ಹುಡುಕಾಟದಲ್ಲಿದ್ದಾರೆ ಎನ್ನಲಾಗಿದೆ.

ಶಾರೀಕನ ಕೈಯಲ್ಲಿದ್ದ ಆಧಾರ್ ಕಾರ್ಡ್ ನಕಲಿ ಎಂಬುದಾಗಿ ತಿಳಿದ ನಂತರದ ಬೆಳವಣಿಗೆಗಳು, ದ.ಕ. ಜಿಲ್ಲೆಯ ಶಾಂತ ವಾತಾವರಣವನ್ನು ಬಿಸಿ ಏರಿಸುವ ರೀತಿಯ ವದಂತಿಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡ ತೊಡಗಿವೆ. ಕುಕ್ಕರ್ ಬಾಂಬು ಸ್ಫೋಟದಲ್ಲಿ ಉಗ್ರರ ಕೈವಾಡವಿದೆ, ಶಾರೀಕ್ ಶಂಕಿತ ಉಗ್ರ, ಮಂಗಳೂರಿನಲ್ಲಿ ಬರೆದಿದ್ದ ಉಗ್ರ ಗೋಡೆಬರಹ ಪ್ರಕರಣದ ಆರೋಪಿ ಎಂಬಿತ್ಯಾದಿ ಸುದ್ದಿಗಳು ಮಾಧ್ಯಮಗಳಲ್ಲೂ ಪ್ರಚಾರಗೊಂಡಿತು. ಒಂದೊಮ್ಮೆ ಪೋಲೀಸ್ ಕಮೀಷನರ್ ಎನ್. ಶಶಿಕುಮಾರ್ ಅವರು ಒಂದು ಹೇಳಿಕೆ ನೀಡಿ,"ವದಂತಿ ಹಬ್ಬಿಸುವವರ ಮೇಲೆನಿಗಾ ಇರಿಸಲಾಗುವುದು,ತನಿಖಾ ತಂಡಗಳು ನೀಡುವ ವರದಿಗಳ ಹೊರತು ಹೆಚ್ಚಿನದನ್ನು ಮಾಧ್ಯಮಗಳು ಪ್ರಕಟಿಸಿದರೆ ಪ್ರಕರಣದ ತನಿಖೆಗೆ ತೊಂದರೆ ಯಾಗುವುದಾಗಿಯೂ ಮನವರಿಕೆ ಮಾಡಿದ್ದಾರೆ.

ಶಾರೀಕನು ಕುಕ್ಕರ್ ಬಾಂಬ್ ಜತೆ ಫೋಟೋ ಶೂಟ್ ನಡೆಸಿದ್ದ ಮಾಹಿತಿಯು ಮೈಸೂರಿನಲ್ಲಿ ಪೋಲೀಸರ ತನಿಖೆ ವೇಳೆ ಬಹಿರಂಗ ಗೊಂಡಿದೆಯೆಂದು ವರದಿಯಾಗಿದೆ. ಗುಪ್ತವಾಗಿ ನಡೆಸಬಯಸುವ ಸ್ಫೋಟ ಕಾರ್ಯಾಚರಣೆಗೆ ಸಂಬಂಧಿಸಿದ ವಸ್ತುಗಳ ಜತೆ ಫೋಟೊಶೂಟ್ ಮಾಡಿ ದಾಖಲಿಸಿಟ್ಟಿರುವುದಾಗಿನ ಮಾಹಿತಿಯ ಬಗ್ಗೆ ಅನುಮಾನ ಪಡುವಂತಾಗುತ್ತದೆ. ನವೆಂಬರ 21ರಂದು ಸುದ್ದಿಗೋಷ್ಠಿಯಲ್ಲಿ ಮಾತಾಡಿದ ಕಾನೂನು ಸುವ್ಯವಸ್ಥೆ ವಿಭಾಗದ ಎಡಿಜಿಪಿ ಅಲೋಕ್ ಕುಮಾರ್ ಅವರ ಹೇಳಿಕೆಯಂತೆ ಆತ ನಗರದ ಹಲವು ಭಾಗಗಳಲ್ಲಿ ಪ್ರಬಲ ಸ್ಫೋಟಕ್ಕೆ ಸಂಚು ರೂಪಿಸಿದ್ದ.. ಆದರೆ ಆತ ಬಾಂಬು ತಯಾರಿಕೆಯಲ್ಲಿ ಹೆಚ್ಚಿನ ಪರಿಣತಿ ಹೊಂದಿಲ್ಲದ ಕಾರಣ ಸ್ಫೋಟವು ದೊಡ್ಡ ಮಟ್ಟದಲ್ಲಿ ನಿರೀಕ್ಷೆಯಂತೆ ಸಂಭವಿಸಿಲ್ಲ ಎಂದಿದ್ದಾರೆ.

ಶಾರೀಕನನ್ನು 2020ರಲ್ಲಿ ಯುಎಪಿಎ ಕಾಯ್ದೆಯಡಿ ಒಂದೊಮ್ಮೆ ಬಂಧಿಸಿ ಜಾಮೀನಿನ ಮೇಲೆ ಬಿಡುಗಡೆ ಮಾಡಲಾಗಿತ್ತು. ತೀರ್ಥಹಳ್ಳಿಯ ನಿವಾಸಿ ಶಾರೀಕನು ಬಿ.ಕಾಂ. ಪದವೀದರನಾಗಿದ್ದ ಎಂಬುದಾಗಿ ಪತ್ರಿಕೆಯೊಂದು ಪ್ರಕಟ ಪಡಿಸಿದೆ. ಕುಕ್ಕರ್ ಬಾಂಬು ತಯಾರಿಯಲ್ಲಿ ಸಂಪೂರ್ಣ ಪರಿಣತಿ ಹೊಂದಿರದ್ದರಿಂದ ಸ್ಫೋಟದ ತೀವ್ರತೆ ಕಡಿಮೆಯಿತ್ತು ಇಲ್ಲವೆಂದರೆ ಆತನ ದೇಹವೇ ಚೂರುಚೂರಾಗಿ ಛಿದ್ರಗೊಳ್ಳುತ್ತಿತ್ತು ಎಂಬುದಾಗಿ ಎಡಿಜಿಪಿ ಅಲೋಕ್ ಕುಮಾರ್ ತಿಳಿಸಿದ್ದಾರೆ.

ಈ ಪ್ರಕರಣದ ಹೆಚ್ಚಿನ ತನಿಖೆಗಾಗಿ ನವೆಂಬರ 24ರಂದು ರಾಷ್ಟ್ರೀಯ ತನಿಖಾ ತಂಡ (ಎನ್.ಐ.ಎ.)ಕ್ಕೆ ಹಸ್ತಾಂತರಿಸಲಾಗಿದೆ. ಮೈಸೂರಿನಲ್ಲಿ ತಂಗಿದ್ದ ಮನೆಯಲ್ಲೆ ಕುಕ್ಕರ್ ಬಾಂಬು ತಯಾರಿ ಮಾಡಲಾಗಿತ್ತು ಮತ್ತು ಇದಕ್ಕೆ ಪೂರಕ ವಸ್ತುಗಳಾದ ನಟ್ ಬೋಲ್ಟ್ ಬ್ಯಾಟರಿ ಸರ್ಕ್ಯೂಟ್ ಗಳು ರಂಜಕ ಗಂಧಕ ಇತರ ರಾಸಾಯನಿಕ ಗಳು ಅಲ್ಲಿ ದೊರೆತಿರುವ ಬಗ್ಗೆ ಮಾಹಿತಿ ಇತ್ತು. ನಂತರ ನವೆಂಬರ್ 25 ರಂದು ಪ್ರಕಟಿಸಲಾದ ಪತ್ರಿಕೆಯೊಂದರ ಸಚಿತ್ರ ವರದಿಯಲ್ಲಿ ರಂಜಕ ಗಂಧಕ ಇನ್ನಿತರ ರಾಸಾಯನಿಕ ಗಳ ಮಾಹಿತಿ ಇರಲಿಲ್ಲ.ಬದಲು ರಂಜಕ ಗಂಧಕ ಅಂಶವಿರುವ 150 ಕ್ಕೂ ಅಧಿಕ ಬೆಂಕಿ ಪೊಟ್ಟಣ ಗಳು, ಗಮ್, ಮಂದ ಹಿಟ್ಟು ಸೇರಿದಂತೆ 67 ವಸ್ತುಗಳನ್ನು ವಶಪಡಿಸಲಾಗಿದೆ ಎಂದಿತ್ತು.

ಕೋಮು ಸೂಕ್ಷ್ಮ ಮಂಗಳೂರು ಪರಿಸರದಲ್ಲಿ ಪೋಲೀಸರು ಬಹು ಎಚ್ಚರಿಕೆಯ ಹೆಜ್ಜೆಗಳನ್ನಿಡುವುದು ಅನಿವಾರ್ಯವಾಗಿದೆ. ಈ ನಡುವೆ ಇನ್ಸ್ಟಾ ಗ್ರಾಂ ನಲ್ಲಿ ಪೋಸ್ಟ್ ಆಗಿರುವ ಕೆಲವೊಂದು ಭಯಾನಕ ವಿಷಯಗಳ ಮೇಲೂ ನಿಗಾ ವಹಿಸಲಾಗುತ್ತಿದೆ. ಈ ಪೋಸ್ಟ್ ನಲ್ಲಿ-ಇಸ್ಲಾಮಿಕ್ ರೆಸಿಸ್ಟನ್ಸ್ (ಐ. ಆರ್.ಸಿ.)ಸಂಘಟನೆಯು ಸ್ಫೋಟದ ಹೊಣೆ ಹೊತ್ತಿದೆ ಮಾತ್ರವಲ್ಲದೆ ನಮ್ಮ ಟಾರ್ಗೆಟ್ ಕದ್ರಿ ದೇವಸ್ಥಾನ ಆಗಿತ್ತು.. ಬಾಂಬು ಅಲ್ಲಿಗೆ ತಲಪುವ ಮೊದಲೇ ಬ್ಲಾಸ್ಟ್ ಆಗಿತ್ತು. ಕಾನೂನು ವ್ಯವಸ್ಥೆ ವಿಭಾಗದ ಅಲೋಕ್ ಕುಮಾರ ಅವರನ್ನು ಕುರಿತಾಗಿ "ನಿಮ್ಮ ಸಂಭ್ರಮ ಕ್ಷಣಿಕವಾದದ್ದು ತಕ್ಕ ಪರಿಣಾಮ ಸಧ್ಯದಲ್ಲೇ ಎದುರಿಸಲಿದ್ದೀರಿ" ಎಂದು ಎಚ್ಚರಿಕೆ ನೀಡಿದ ಬರಹವಿತ್ತು ಎನ್ನಲಾಗಿದೆ.

ಈ ಮಾಹಿತಿಯ ಬೆನ್ನಲ್ಲೇ ಕದ್ರಿ ದೇವಸ್ಥಾನ, ಕುದ್ರೋಳಿ ದೇವಸ್ಥಾನ ಮಂಗಳಾದೇವಿ ದೇವಸ್ಥಾನ ಹಾಗೂ ಸಂಘನಿಕೇತನದ ಮೇಲೆ ಭದ್ರತೆಗಾಗಿ ವಿಶೇಷ ನಿಗಾ ಇರಿಸಲಾಗಿದೆ. ಈ ಪೋಸ್ಟ್ ಪುಟ 7 ಕ್ಕೆ



ಬಿಬಿಎಂಪಿ ಮತದಾರರ ಪಟ್ಟಿ ಅಕ್ರಮ ಕುರಿತಂತೆ ನ್ಯಾಯಾಂಗ ತನಿಖೆಗೆ ಒಪ್ಪಿಸಲು ಸಿಪಿಐ(ಎಂ) ಪ್ರತಿಭಟನೆ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ(ಬಿಬಿಎಂಪಿ), ವ್ಯಾಪ್ತಿಯ ವಿಧಾನಸಭಾ ಕ್ಷೇತ್ರಗಳಲ್ಲಿ ಮತದಾರರ ಪಟ್ಟಿಯ ಪರಿಷ್ಕರಣೆ ಹೆಸರಿನಲ್ಲಿ ಸುಮಾರು 6.69 ನೈಜ ಮತದಾರರನ್ನು ಪಟ್ಟಿಯಿಂದ ಕೈ ಬಿಟ್ಟಿರುವುದು ಪ್ರಜೆಗಳ ಮತದಾನದ ಹಕ್ಕನ್ನು ಕಸಿಯುವ ಪ್ರಜಾಪ್ರಭುತ್ವ ವಿರೋಧಿ ಹಾಗೂ ಸಂವಿಧಾನ ವಿರೋಧಿ ನಡೆಯಾಗಿದೆ ಎಂದು ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)–ಸಿಪಿಐ(ಎಂ) ಆರೋಪಿಸಿದೆ.

ಮಹದೇವಪುರ ಬಿಬಿಎಂಪಿ ಜಂಟಿ ಆಯುಕ್ತರ ಕಛೇರಿ ಮುಂಭಾಗ ಪ್ರತಿಭಟನೆ ನಡೆಸಿದ ಸಿಪಿಐ(ಎಂ) ಕಾರ್ಯಕರ್ತರು, ಈ ಪ್ರಕರಣದ ತನಿಖೆ ನಡೆಯುತ್ತಿದೆಯಾದರೂ ತನಿಖಾಧಿಕಾರಿಗಳ ಮೇಲೆ ಸರ್ಕಾರ ಪ್ರಭಾವ ಬೀರುವ ಸಾಧ್ಯತೆಗಳಿವೆ. ಹೀಗಾಗಿ ಕರ್ನಾಟಕ ರಾಜ್ಯ ಹೈಕೋರ್ಟ್ ನ್ಯಾಯಮೂರ್ತಿಯೊಬ್ಬರಿಂದ ತನಿಖೆ ಆಗಬೇಕೆಂದು ಆಗ್ರಹಿಸಿದರು. ಈ ಬಗ್ಗೆ ಬಿಬಿಎಂಪಿ ಜಂಟಿ ಆಯುಕ್ತರು, ಬಿಬಿಎಂಪಿ ಮಹದೇವಪುರ ವಲಯ ಅಧಿಕಾರಿಗಳ ಮೂಲಕ ಬಿಬಿಎಂಪಿ ಆಯುಕ್ತರಿಗೆ ಮನವಿ ಸಲ್ಲಿಸಿದರು.

ಮನವಿ ಸಲ್ಲಿಕೆಯ ವಿವರಣೆ ಹೀಗಿದೆ;

ಪ್ರತಿ ವಿಧಾನಸಭಾ ಕ್ಷೇತ್ರದಲ್ಲಿ ಸುಮಾರು 30 ಸಾವಿರದಿಂದ 60 ಸಾವಿರದವರೆಗೆ ಮತದಾರರನ್ನು ಕೈಬಿಡಲಾಗಿದೆ. ಚುನಾವಣೆಯಲ್ಲಿ ಸೋಲಿನ ದವಡೆಯಿಂದ ತಪ್ಪಿಸಿಕೊಳ್ಳಲು ಬಿಜೆಪಿ ಪಕ್ಷವು ಎಂತಹ ನೀಚ ಮಟ್ಟಕ್ಕೆ ಇಳಿಯುತ್ತದೆ ಎಂಬುದು ಇದೀಗ ಸಾಬೀತಾಗಿದೆ. ಚಿಲುಮೆ ಎಂಬ ಎನ್.ಜಿ.ಓ. ಸಂಸ್ಥೆಯ ಮೂಲಕ ಈ ಅಕ್ರಮ ನಡೆದಿದ್ದು, ಇದಕ್ಕೆ ಬಿಜೆಪಿ ಸರ್ಕಾರವೇ ನೇರ ಹೊಣೆಯಾಗಿದೆ.

ಈ ಅಕ್ರಮ ಸುತ್ತ ದೊಡ್ಡ ಜಾಲವೇ ಹರಡಿಕೊಂಡಿದ್ದು ರಾಜಕೀಯ ಅಧಿಕಾರವನ್ನು ದುರ್ಬಳಕೆ ಮಾಡಿಕೊಂಡು ಈ ಕೃತ್ಯ ಎಸಗಿರುವುದು ಅಕ್ಷಮ್ಯ ಅಪರಾಧ. ನಾಗರೀಕರ ಹಕ್ಕು ಗೌಪ್ಯತೆಯನ್ನು ಕಾಪಡುವುದು ಸರ್ಕಾರದ ಜವಾಬ್ದಾರಿ. ಹೀಗಾಗಿ ಇದೊಂದು ಗಂಭೀರ ಪ್ರಕರಣವಾಗಿದೆ. ಈ ಸಂಬಂಧ ಕೇಂದ್ರ ಚುನಾವಣಾ ಆಯೋಗವು ಇಬ್ಬರು ಉನ್ನತ ಅಧಿಕಾರಿಗಳನ್ನು ಅಮಾನತು ಮಾಡಿರುವುದು ಪ್ರಕರಣದ ಗಂಭೀರತೆಗೆ ಸಾಕ್ಷಿಯಾಗಿದೆ.

ಈ ಕೃತ್ಯಕ್ಕೆ ಕೆಳ ಹಂತದಲ್ಲಿ ಕಂದಾಯ ನಿರೀಕ್ಷರು, ಕಂದಾಯ ಅಧಿಕಾರಿಗಳನ್ನು ಬಳಸಿಕೊಳ್ಳಲಾಗಿದ್ದು, ಅಕ್ರಮವಾಗಿ ಇಲಾಖೆಯ ಪಾಸ್‌ವರ್ಡ್‌ಗಳನ್ನು ಪಡೆದು ಬಿಜೆಪಿ ಕಛೇರಿಗಳಲ್ಲೇ ಈ ಪರಿಕ್ಷರಣೆ ನಡೆದಿದೆ ಎಂಬ ಗಂಭೀರ ಆರೋಪ ಕೇಳಿ ಬಂದಿದೆ. ಮತದಾರರ ಪಟ್ಟಿ ಪರಿಷ್ಕರಣೆ ವೇಳೆ ಬಿ.ಎಲ್.ಒ. ಹಂತದಲ್ಲಿ ರಾಜಕೀಯ ಪಕ್ಷಗಳ ಸಭೆಯನ್ನು ನಡೆಸದೇ, ಆಡಳಿತರೂಢ ಪಕ್ಷದ ಅಣತಿಯಂತೆ ಪರಿಷ್ಕರಿಸಲಾಗಿದೆ. ಜತೆಗೆ ಚಿಲುಮೆ ಸಂಸ್ಥೆ ಉದ್ಯೋಗಿಗಳಿಗೆ ಇಲಾಖೆಯಿಂದಲೇ ಬಿ.ಎಲ್.ಒ ಮತ್ತು ಬಿ.ಎಲ್.ಸಿ ಅಧಿಕಾರಿಗಳೆಂದು ಗುರುತಿನ ಚೀಟಿ ವಿತರಿಸಿರುವುದು ತನಿಖೆಯ ವೇಳೆ ಬಯಲಾಗಿದೆ. ಈ ವಿಚಾರದಲ್ಲಿ ತಪ್ಪಿತಸ್ಥರಿಗೆ ಕಠಿಣ ಶಿಕ್ಷೆಯಾಗಬೇಕು.

ಮಹದೇವಪುರ, ಚಿಕ್ಕಪೇಟೆ ಸೇರಿದಂತೆ ಇತರೆ ಕೆಲ ವಿಧಾನಸಭಾ ಕ್ಷೇತ್ರಗಳಲ್ಲಿ ಸಮೀಕ್ಷೆ ನಡೆಸಲು 500 ಜನರ ಸಿಬ್ಬಂದಿಯನ್ನು ದಿನಗೂಲಿ ಲೆಕ್ಕದಲ್ಲಿನೇಮಿಸಿಕೊಂಡಿದ್ದ ಚಿಲುಮೆ ಸಂಸ್ಥೆಯು ಅಕ್ರಮವಾಗಿ ಮತದಾರರ ವೈಯಕ್ತಿಕ ಮಾಹಿತಿಗಳನ್ನು ಸಂಗ್ರಹಿಸಿದೆ ಎಂಬ ಗಂಭೀರ ಆರೋಪಗಳು ಇವೆ.

ಮತದಾರರ, ಜಾತಿ, ವಿಳಾಸ, ಉಪಜಾತಿ, ಮೊಬೈಲ್ ಸಂಖ್ಯೆ, ಬೆಂಬಲಿಸುವ ಪಕ್ಷ, ನೆಚ್ಚಿನ ರಾಜಕೀಯ ನಾಯಕ ಇತ್ಯಾದಿ ಮಾಹಿತಿಗಳನ್ನು ಸಂಗ್ರಹಿಸಿದೆ. ಈ ಮಾಹಿತಿಗಳನ್ನು ಮಾರಾಟ ಮಾಡಿ ಕೋಟ್ಯಾಂತರ ರೂಪಾಯಿ ಸಂಪಾದಿಸಿದೆ ಎಂದು ತನಿಖೆಯ ವೇಳೆ ಗೊತ್ತಾಗಿದೆ. ಹಾಗಾಗಿ ಈ ಪ್ರಕರಣವು ಅತ್ಯಂತ ಗಂಭೀರತೆಯಿಂದ ಇದ್ದು, ಪ್ರಸಕ್ತ ತನಿಖಾಧಿಕಾರಿಗಳ ಮೇಲೆ ಒತ್ತಡದ ಪ್ರಭಾವ ಬೀರುವ ಸಾಧ್ಯತೆಗಳು ಇರುವುದರಿಂದ, ತನಿಖೆಯನ್ನು ಹೈಕೋರ್ಟ್ ನ್ಯಾಯಮೂರ್ತಿ ನೇತೃತ್ವದಲ್ಲಿ ನಡೆಸಬೇಕೆಂದು ಸಿಪಿಐ(ಎಂ) ಪಕ್ಷದ ಆಗ್ರಹವಾಗಿದೆ.

ಸುರತ್ಕಲ್ ಟೋಲ್ ತೆರವು: ಆದರೆ, ಸುಲಿಗೆಯ ಸ್ಥಳಾಂತರ

ಸುರತ್ಕಲ್ ನ ಅಕ್ರಮ ಟೋಲ್ ಪ್ಲಾಜಾ ತೆರವುಗೊಂಡಿತು. ಜನತೆಯ ಒಗ್ಗಟ್ಟಿನ, ರಾಜಿಯಿಲ್ಲದ ಮತ್ತು ನಿರಂತರ ಹೋರಾಟದಿಂದ ಸರ್ಕಾರದ ಜನವಿರೋಧಿ ನೀತಿ–ನಿಲುವುಗಳನ್ನು ಹಿಮ್ಮೆಟ್ಟಿಸಲು ಸಾಧ್ಯವಿದೆ ಎಂಬುದನ್ನು ಇದು ಮತ್ತೊಮ್ಮೆ ಸಾಭೀತುಪಡಿಸಿತು. ವರ್ಷಗಳ ಕಾಲ ನಡೆದ ಹಲವು ಬಗೆಯ ಹೋರಾಟಗಳು ಮತ್ತು 34 ದಿನಗಳ ಅನಿರ್ಧಿಷ್ಟಾವಧಿ ಹಗಲು–ರಾತ್ರಿ ಧರಣಿ, ಪಾದಯಾತ್ರೆ, ಟೋಲ್ ಪ್ಲಾಜಾ ಮುತ್ತಿಗೆ, ಯುವಜನರ ಬೈಕ್ ರ‍್ಯಾಲಿ ಮುಂತಾದ ಹೋರಾಟಗಳಿಂದಾಗಿ ಅಕ್ರಮ ಸುರತ್ಕಲ್ ಟೋಲ್ ಪ್ಲಾಜಾವನ್ನು ತೆರವು ಮಾಡಿಸಲು ಸಾಧ್ಯವಾಗಿದೆ.

ಸುರತ್ಕಲ್–ಬಿಸಿ ರೋಡ್ ನಡುವಿನ ಚತುಷ್ಪಥ ಹೆದ್ದಾರಿ ಕಾಮಗಾರಿ ನಡೆಸಿದ್ದ ಇರ್ಕಾನ್ ಪರವಾಗಿ ಹೆದ್ದಾರಿ ಪ್ರಾಧಿಕಾರ ಸುರತ್ಕಲ್‌ನಲ್ಲಿಅಳವಡಿಸಿದ್ದ ಎನ್‌ಎಂಪಿ ರೋಡ್ ಕನೆಕ್ಟಿವಿಟಿ ರಸ್ತೆಯ ಟೋಲ್ ಸಂಗ್ರಹವನ್ನು ಹೆಜಮಾಡಿ ನವಯುಗದ ಕಂಪನಿಯ ಟೋಲ್ ಗೇಟ್ ಜತೆ ವಿಲೀನಗೊಳಿಸಲಾಗಿದೆ.

ಸುರತ್ಕಲ್ ನ ಅಕ್ರಮ ಟೋಲ್ ಪ್ಲಾಜಾ ತೆರವುಗೊಂಡಿರುವುದು ಎರಡು ಪ್ಲಾಜಾಗಳ ನಡುವೆ ಮಾತ್ರ ಹೆದ್ದಾರಿ ಬಳಕೆ ಮಾಡುವ ಸ್ಥಳೀಯ ನಿವಾಸಿಗಳಿಗೆ ಒಂದಷ್ಟು ಸಮಾಧಾನ ತಂದಿದ್ದರೂ, ಸುರತ್ಕಲ್ ಟೋಲ್ ಪ್ಲಾಜಾವನ್ನು ಹೆಜಮಾಡಿ ಟೋಲ್ ಪ್ಲಾಜಾದ ಜೊತೆಗೆ ವಿಲೀನ ಮಾಡಿ, ಹೆಜಮಾಡಿ ಟೋಲ್ ಶುಲ್ಕವನ್ನು ದುಬಾರಿ ಮಾಡುವ ಮೂಲಕ ಜನರ ಸುಲಿಗೆಯ ಮುಂದುವರಿಕೆಗೆ ಸರ್ಕಾರ ನಿರ್ಧರಿಸಿರುವುದು ಇಲ್ಲಿನ ಜನರನ್ನು ಕೆರಳಿಸಿದೆ.. ಹೆಜಮಾಡಿ ಟೋಲ್ ಶುಲ್ಕದ ಜೊತೆ ಸುರತ್ಕಲ್ ನಲ್ಲಿ ಇದುವರೆಗೆ ವಸೂಲಿ ಮಾಡುತ್ತಿದ್ದ ಶುಲ್ಕವನ್ನು ಸೇರಿಸಿ ಹೊಸದಾಗಿ ದರ ನಿಗಧಿ ಮಾಡಲಾಗಿದೆ. ಉದಾಹರಣೆಗೆ ಕಾರು, ಜೀಪ್, ವ್ಯಾನ್ ಅಥವಾ ಲಘು ಮೋಟಾರು ವಾಹನಗಳಿಗೆ ಸುರತ್ಕಲ್ ನಲ್ಲಿ ಸಂಗ್ರಹಿಸುತ್ತಿದ್ದ ರೂ 60 ಮತ್ತು ಹೆಜಮಾಡಿಯಲ್ಲಿ ಸಂಗ್ರಹಿಸುತ್ತಿದ್ದ ರೂ 40 ನ್ನು ಸೇರಿಸಿ ಹೊಸ ಶುಲ್ಕದ ದರವನ್ನು 100ಕ್ಕೆ ಹೆಚ್ಚಿಸಲಾಗಿದೆ. ಇದೇ ರೀತಿ ಇತರೆ ವಾಹನಗಳ ಶುಲ್ಕಗಳನ್ನೂ ಮಾರ್ಪಡಿಸಲಾಗಿದೆ. ವಾಹನಗಳ ದ್ವಿಮುಖ ಸಂಚಾರದ ಶುಲ್ಕ ಮತ್ತು ಮಾಸಿಕ ಪಾಸುಗಳ ಶುಲ್ಕಗಳನ್ನೂ ಹೆಚ್ಚಿಸಲಾಗಿದೆ.

ತುಳುನಾಡಿಗೆ ಮಾಡಿದ ಮೋಸ:

ಸುರತ್ಕಲ್ ಟೋಲ್ ದರವನ್ನು ಪೂರ್ತಿಯಾಗಿ ಸೇರಿಸಿ ಹೆಜಮಾಡಿಯಲ್ಲಿ ಸುಲಿಗೆ ನಡೆಸಲು ಹೆದ್ದಾರಿ ಪ್ರಾಧಿಕಾರ ನಿರ್ಧರಿಸಿದೆ. ಇದು ತುಳುನಾಡಿನ ಜನತೆಗೆ ಎಸಗಿದ ಮಹಾ ಮೋಸ ಎಂದು ಟೋಲ್‌ಗೇಟ್ ವಿರೋಧಿ ಹೋರಾಟ ಸಮಿತಿ ಸಂಚಾಲಕ ಮುನೀರ್ ಕಾಟಿಪಳ್ಳ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಜನವಿರೋಧಿ ಸರಕಾರ ಮಾತ್ರ ಹೀಗೆ ಮಾಡಲು ಸಾಧ್ಯ ಎಂದಿದ್ದಾರೆ.

ಇದೂ ಅಲ್ಲದೆ ಕೆಎ–19 ನೊಂದಣಿ ಸಂಖ್ಯೆ ಹೊಂದಿರುವ ಖಾಸಗಿ ಸ್ಥಳೀಯ ಕಾರುಗಳಿಗೆ ಇನ್ನು ಮುಂದೆ ಶುಲ್ಕದಿಂದ ರಿಯಾಯಿತಿ ನೀಡುವುದಿಲ್ಲ ಎಂಬ ಪ್ರಾಧಿಕಾರದ ನಿರ್ಧಾರ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯ ಜನರನ್ನು ಕೆರಳಿಸಿದೆ. ಪ್ರಾಧಿಕಾರದ ಈ ನಿರ್ಧಾರನ್ನು ಕಟುವಾಗಿ ಟೀಕಿಸಿರುವ ಹೋರಾಟ ಸಮಿತಿಯ ಸಂಚಾಲಕರಾದ ಮುನೀರ್ ಕಾಟಿಪಳ್ಳ ಅವರು ಇಂತಹ ನಿರ್ಧಾರದಿಂದ ಸರ್ಕಾರ ಹಿಂದೆ ಸರಿಯಬೇಕು ಎಂದು ಒತ್ತಾಯಿಸಿದ್ದಾರೆ.

“ಕೆಎ–19 ನೊಂದಣಿ ಸಂಖ್ಯೆ ಇರುವ ಖಾಸಗಿ ವಾಹನಗಳಿಗೆ ಶುಲ್ಕ ವಿನಾಯಿತಿ ಹೆದ್ದಾರಿ ಪ್ರಾಧಿಕಾರದ ಅಧಿಕೃತ ನಿಯಮವೇನೂ ಆಗಿರಲಿಲ್ಲ. ಇದು ಸ್ಥಳಿಯರು ಮತ್ತು ಹೋರಾಟ ಸಮಿತಿಯ ಪ್ರತಿಭಟನೆಯಿಂದಾಗಿ ಮತ್ತು ಹೋರಾಟ ಮತ್ತಷ್ಟು ತೀವ್ರತೆ ಪಡೆಯಬಾರದು ಎಂಬ ಕಾರಣದಿಂದಾಗಿ ಸ್ಥಳೀಯ ವಾಹನಗಳಿಗೆ ಅನಧಿಕೃತವಾಗಿ ವಿನಾಯಿತಿ ನೀಡಲಾಗಿತ್ತು. ಈ ವಿನಾಯಿತಿ ಸ್ಥಳಿಯ ವಾಣಿಜ್ಯ ವಾಹನಗಳಿಗೆ ಇಲ್ಲ ಎಂಬುದನ್ನು ಗಮನಿಸಬೇಕು. ಬಡಪಾಯಿ ವಾಣಿಜ್ಯ ವಾಹನ ಚಾಲಕರು ಶುಲ್ಕ ಪಾವತಿಸಿಯೇ ರಸ್ತೆ ಬಳಕೆ ಮಾಡುತ್ತಾರೆ. ಇದರ ವಿರುದ್ದವೂ ಸಹ ನಾವು ಮತ್ತಷ್ಟು ವಿಶಾಲ ಸ್ವರೂಪದ ಹೋರಾಟ ನಡೆಸಬೇಕಿದೆ” ಎನ್ನುತ್ತಾರೆ.

ಸುರತ್ಕಲ್ ಟೋಲ್ ಗೇಟ್ ಬಳಿ ನಡೆಯುತ್ತಿದ ಹಗುಲು–ರಾತ್ರಿ ಧರಣಿಯ ಸ್ಥಳ ಡಿಸೆಂಬರ್ ಒಂದರಂದು ಗೆಲುವಿನ ಸಂಭ್ರಮಾಚರಣೆಗೆ ವೇಧಿಕೆಯಾಯಿತು. ಆರು ವರ್ಷಗಳ ಕಾಲ ಜನತೆ ನಡೆಸಿದ ಹೋರಾಟಕ್ಕೆ ಜಯ ಸಿಕ್ಕಿದ ಸಂಭ್ರಮವನ್ನು ಹಂಚಿಕೊಂಡರು.

ಹೆಜಮಾಡಿ ಬಳಿ ಹೋರಾಟ;

ಸುರತ್ಕಲ್ ಅಕ್ರಮ ಟೋಲ್ ಸುಂಕವನ್ನು ಹೆಜಮಾಡಿ ಟೋಲ್ ಗೇಟ್ ನಲ್ಲಿ ಸಂಗ್ರಹಿಸುವ ಹೆದ್ದಾರಿ ಪ್ರಾಧೀಕಾರದ ಆದೇಶದ ವಿರುದ್ಧ ಹೆಜಮಾಡಿ ಟೋಲ್ ಗೇಟ್ ಬಳಿ ಟೋಲ್ ಗೇಟ್ ವಿರೋಧಿ ಹೋರಾಟ ಸಮಿತಿ ನೇತೃತ್ವದಲ್ಲಿ ಸಾಮೂಹಿಕ ದರಣಿ ನಡೆಯಿತು. ಡಿಸೆಂಬರ್, 2ರಂದು ನಡೆದ ಈ ಪ್ರತಿಭಟನೆಯಲ್ಲಿ ಇಂತಹ ಸುಲಿಗೆ ನೀತಿಯನ್ನು ಕೈಬಿಡಬೇಕು ಎಂದು ಸರ್ಕಾರವನ್ನು ಪ್ರತಿಭಟನಕಾರರು ಒತ್ತಾಯಿಸಿದರು. ಜನರ ಸುಲಿಗೆ ತಪ್ಪಿಸಲು ಬಿಜೆಪಿ ಸಂಸದರು, ಶಾಸಕರು ಮತ್ತು ನಾಯಕರು ವಿಫಲರಾಗಿದ್ದಾರೆ ಎಂದು ಇಲ್ಲಿ ಮಾತನಾಡಿದ ಮುಖಂಡರು ಟೀಕಿಸಿದರು.

ಕೊರಗ ಸಮುದಾಯ ಭೂಮಿಯ ಹಕ್ಕಿಗಾಗಿ ಹೋರಾಟ ಮಾಡಬೇಕಾಗಿ ಬಂದುದು ವ್ಯವಸ್ಥೆಯ ಸೋಲು



ಈ ನೆಲದ ಮೂಲನಿವಾಸಿಗಳಾಗಿ ಒಂದೊಮ್ಮೆ ಸಮಸ್ತ ಭೂಮಿಯ ಒಡೆಯರಾಗಿದ್ದ ಕೊರಗ ಕುಟುಂಬ ನೆಲೆ ಇಲ್ಲದೆ ಪರಿತಪಿಸಬೇಕಾಗಿದೆ. ಸ್ವಾತಂತ್ರ್ಯ ದೊರೆತು 70 ವರ್ಷ ಕಳೆದರೂ ಭೂಮಿಯ ಹಕ್ಕಿಗಾಗಿ ಹೋರಾಟ ನಡೆಸಬೇಕಾಗಿ ಬಂದುದು ನಮ್ಮ ವ್ಯವಸ್ಥೆಯ ಸೋಲು ಎಂದು ಖ್ಯಾತ ಜಾನಪದ ವಿದ್ವಾಂಸಕರೂ, ಪಗತಿಪರ ಚಿಂತಕರೂ ಆದ ಡಾ. ಗಣನಾಥ ಶೆಟ್ಟಿ ಎಕ್ಕಾರು ಇವರು ಅಭಿಪ್ರಾಯ ಪಟ್ಟಿದ್ದಾರೆ. ಮಂಗಳೂರಿನ ವಾಮಂಜೂರು ಜಂಕ್ಷನ್‌ನಲ್ಲಿ ಆದಿವಾಸಿ ಕೊರಗ ಕುಟುಂಬಗಳಿಗೆ 2018ರಲ್ಲಿ ಮಂಜೂರಾತಿ ಆದ 33 ಮನೆ ನಿವೇಶನಗಳನ್ನು ಹಸ್ತಾಂತರಿಸಲು ಅಗ್ರಹಿಸಿ ಕಳೆದ ವಾರ ನಡೆದ ಪಾದಯಾತ್ರೆಯನ್ನು ಉದ್ಘಾಟಿಸಿ ಅವರು ಭಾಷಣ ಮಾಡುತ್ತ ‘ಮಂಗಳೂರು ಮಹಾನಗರ ಪಾಲಿಕೆ ಬೇಷರತ್ತಾಗಿ ಯಾವುದೇ ವಿಳಂಬವಿಲ್ಲದೆ 33 ನಿವೇಶನ ಹಸ್ತಾಂತರ ಮಾಡಬೇಕು’ ಎಂದು ಹೇಳಿದರು.

ಮುಖ್ಯ ಅತಿಥಿಯಾಗಿ ಭಾಗವಹಿಸಿದ ಹಿರಿಯ ರೈತ ಕಾರ್ಮಿಕ ಮುಂದಾಳು ಕೆ ಯಾದವ ಶೆಟ್ಟಿಯವರು ಮಾತನಾಡಿ ‘ಆದಿವಾಸಿ ಕೊರಗ ಸಮುದಾಯದ ನ್ಯಾಯಯುತ ಬೇಡಿಕೆಯನ್ನು ಜಿಲ್ಲಾಡಳಿತ ಮತ್ತು ಸರಕಾರ ಯಾವುದೇ ಕಾರಣಕ್ಕೂ ಕಡೆಗಣಿಸಬಾರದು. ಒಂದು ವೇಳೆ ಒಂದು ತಿಂಗಳ ಒಳಗೆ 33 ಮನೆಗಳನ್ನು ಹಸ್ತಾಂತರಿಸದಿದ್ದಲ್ಲಿ ಉಗ್ರ ಹೋರಾಟಕ್ಕೆ ಕರೆ ನೀಡಲಾಗುವುದು’ ಎಂದು ಹೇಳಿದರು.

ಇನ್ನೋರ್ವ ಮುಖ್ಯ ಅತಿಥಿಯಾದ ಕಾರ್ಮಿಕ ಮುಂದಾಳು ಸದಾಶಿವದಾಸ್‌ರವರು ಮಾತನಾಡಿ ಕೊರಗ ಸಮುದಾಯಕ್ಕೆ ಅನ್ಯಾಯವೆಸಗುವುದನ್ನು ಯಾವುದೇ ಕಾರಣಕ್ಕೂ ಸಹಿಸಲು ಸಾಧ್ಯವಿಲ್ಲ ಎಂದು ಹೇಳಿದರು.

ಕರ್ನಾಟಕ ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿಯ ಉಡುಪಿ ಜಿಲ್ಲಾ ಅಧ್ಯಕ್ಷರು, ಕೊರಗ ಸಮುದಾಯದ ಮುಂದಾಳು ಕೂಡ ಆಗಿರುವ ಶ್ರೀಧರ್ ನಾಡರವರು ‘ಕೊರಗ ಸಮುದಾಯದ ಜನಸಂಖ್ಯೆ ತೀವ್ರವಾಗಿ ಕುಸಿತ ಆಗುತ್ತಿದೆ. ಉದ್ಯೋಗ, ವಸತಿ ಮತ್ತು ಆರೋಗ್ಯದ ಪ್ರಶ್ನೆ ಗಂಭೀರ ಪ್ರಶ್ನೆಯಾಗಿ ಕಾಡುತ್ತಿದೆ. ಇಂತಹ ಸಮಯದಲ್ಲಿ ಕೊರಗ ಸಮುದಾಯದ ಸಹಾಯಕ್ಕೆ ಬೆಂಗಾವಲಾಗಿ ನಿಲ್ಲಬೇಕಾದ ಸರಕಾರ ಅನ್ಯಾಯವೆಸಗುತ್ತಿದೆ. ಭೂಮಿಯ ಪ್ರಶ್ನೆ ಗಂಭೀರ ಪ್ರಶ್ನೆಯಾಗಿದೆ. ಉಭಯ ಜಿಲ್ಲೆಗಳಲ್ಲಿ ಕರ್ನಾಟಕ ಆದಿವಾಸಿ ಹಕ್ಕುಗಳ ಸಮಿತಿಯು ಮಹಮ್ಮದ್ ಫೀರ್ ವರದಿಯ ಪ್ರಕಾರ ಎರಡುವರೆ ಎಕರೆ ಕೃಷಿ ಭೂಮಿ ವಿತರಣೆಗಾಗಿ ಆಂದೋಲನ ರೂಪಿಸಲಿದೆ’ ಎಂದು ಹೇಳಿದರು.

ಸಭೆಯನ್ನು ಉದ್ದೇಶಿಸಿ ಕರ್ನಾಟಕ ಆದಿವಾಸಿ ಹಕ್ಕುಗಳ ರಾಜ್ಯ ಸಮಿತಿಯ ಸಹಸಂಚಾಲಕರೂ. ಪ್ರಗತಿಪರ ಚಿಂತಕರೂ ಆದ ಡಾ. ಕೃಷ್ಣಪ್ಪ

ಕಸುಬು ಕಳೆದುಕೊಳ್ಳುವ ಭೀತಿ

ರಸ್ತೆ ಸಾರಿಗೆ ಕಾರ್ಮಿಕರ ಬಲಿಷ್ಠ ಸಂಘಟನೆ ಕಟ್ಟುವ ಪಣ



'ರಸ್ತೆ ಸಾರಿಗೆ ಕಾರ್ಮಿಕರೆಂದರೆ ಚಾಲಕರು, ಕ್ಲೀನರ್ ಮತ್ತು ನಿರ್ವಾಹಕರು ಮಾತ್ರವೇ ಅಲ್ಲ. ವಾಹನ ದುರಸ್ತಿ ಕೆಲಸದಲ್ಲಿ ತೊಡಗಿಕೊಂಡಿರುವ ಮೆಕಾನಿಕ್, ಟಿಂಕರಿಂಗ್, ಪೇಂಟಿಂಗ್, ವೆಲ್ಡಿಂಗ್ ಮಾಡುವವರು, ಪೆಟ್ರೋಲ್ ಬಂಕ್ ಗಳಲ್ಲಿನ ಕಾರ್ಮಿಕರು, ವಾಹನಗಳ ಬಿಡಿಭಾಗಗಳ ಮಾರಾಟದ ಅಂಗಡಿಗಳಲ್ಲಿ ಕೆಲಸ ಮಾಡುವ ಕಾರ್ಮಿಕರು ಇವರೆಲ್ಲಾ ಸಾರಿಗೆ ಕಾರ್ಮಿಕರೇ ಆಗಿರುತ್ತಾರೆ. ಈ ಕಾರ್ಮಿಕರಿಗೆ ಯಾವುದೇ ಸಾಮಾಜಿಕ ಭದ್ರತಾ ಸೌಲಭ್ಯಗಳು ಸಿಗುತ್ತಿಲ್ಲ. ಕನಿಷ್ಠ ಕೂಲಿ ಅಥವಾ ನಿಗಧಿತ ಆದಾಯ ಇಲ್ಲ. ಉದ್ಯೋಗದ ಭದ್ರತೆ ಇಲ್ಲ. ಸರ್ಕಾರದ ಖಾಸಗೀಕರಣ ನೀತಿಗಳ ಕಾರಣದಿಂದ ಇವರೆಲ್ಲರೂ ತಮ್ಮ ಕಸುಬುಗಳನ್ನು ಕಳೆದುಕೊಳ್ಳುವ ಬೀತಿ ಎದುರಾಗಿದೆ. ಇವರೆಲ್ಲರನ್ನೂ ಸಂಘಟಿಸುವ ಮೂಲಕ ಸಾಮಾಜಿಕ ಭದ್ರತಾ ಸೌಲಭ್ಯಗಳಿಗಾಗಿ ಮತ್ತು ತಮ್ಮ ಕಸುಬುಗಳ ಉಳಿವಿಗಾಗಿ ಹೋರಾಟ ರೂಪಿಸಬೇಕಾಗಿದೆ' ಇದು ಬೆಂಗಳೂರಿನಲ್ಲಿ ನವೆಂಬರ್ 27 ರಂದು ನಡೆದ ರಸ್ತೆ ಸಾರಿಗೆ ಕಾರ್ಮಿಕರ ರಾಜ್ಯ ಮಟ್ಟದ ಸಮಾವೇಶದಲ್ಲಿ ಚರ್ಚೆಗೆ ಬಂದ ವಿಷಯಗಳು.

ಆಲ್ ಇಂಡಿಯಾ ರೋಡ್ ಟ್ರಾನ್ಸ್ಪೋರ್ಟ್ ವರ್ಕರ್ಸ್ ಫೆಡರೇಷನ್ ನ ರಾಜ್ಯ ಸಮಿತಿ ಈ ಸಮಾವೇಶವನ್ನು ಅಮ್ಮಿಕೊಂಡಿತ್ತು. ರಾಜ್ಯದಲ್ಲಿ ಖಾಸಗಿ ಮತ್ತು ಸರ್ಕಾರಿ ಸಾರಿಗೆ ಕಾರ್ಮಿಕರ ಬಲಿಷ್ಠ ಸಂಘಟನೆ ಕಟ್ಟಲು ಸಮಾವೇಶ ನಿರ್ಣಯ ತೆಗೆದುಕೊಂಡಿತು.

ಸಮಾವೇಶವನ್ನು ಉದ್ದೇಶಿಸಿ ಮಾತನಾಡಿದ ಎಐಆರ್ ಟಿ ಡಬ್ಲ್ಯೂ ಎಫ್ ನ ಅಖಿಲ ಭಾರತ ಕಾರ್ಯದರ್ಶಿ ಕುಪ್ಪುಸ್ವಾಮಿ ಅವರು 'ಪೆಟ್ರೋಲಿಯಂ ಮೇಲಿನ ಸರ್ಕಾರದ ನಿಯಂತ್ರಣವನ್ನು ತೆಗೆದುಹಾಕಿದ ಸಂದರ್ಭದಲ್ಲಿ ಸರ್ಕಾರ 'ತೈಲ ಕಂಪನಿಗಳು ಅಂತರರಾಷ್ಟ್ರೀಯ ಮಟ್ಟದಲ್ಲಿ ತೈಲ ಬೆಲೆಗೆ ಅನುಗುಣವಾಗಿ ಪೆಟ್ರೋಲಿಯಂ ಪದಾರ್ಥಗಳ ಬೆಲೆ ನಿರ್ಧಾರ ಮಾಡುತ್ತವೆ ಎಂದು ಹೇಳಿದ್ದರು. ಆದರೆ, ಈಗೇನಾಗುತ್ತಿದೆ? ಕಚ್ಚಾ ತೈಲ ಬೆಲೆ ಇಳಿಕೆ ಆಗಿದೆ. ಆದರೂ ಪೆಟ್ರೋಲ್, ಡೀಸಲ್ ಬೆಲೆ ಇಳಿಕೆ ಮಾಡಲಿಲ್ಲ. ಇಂದು ಜನರನ್ನು ಸುಲಿಗೆಗೆ ಸರ್ಕಾರ ಮುಂದಾಗಿದೆ ಎಂದು ಕೇಂದ್ರ ಸರ್ಕಾರದ ನೀತಿಯನ್ನು ಟೀಕಿಸಿದರು.

ಅಸಂಘಟಿತ ವಲಯದ ಕಾರ್ಮಿಕರಿಗೆ ಸಾಮಾಜಿಕ ಸೌಲಭ್ಯಗಳನ್ನು ಒದಗಿಸಲು ಕಲ್ಯಾಣ ಮಂಡಳಿಯ ಅವಶ್ಯಕತೆ ಇದೆ. ಆದರೆ, ಪಶ್ಚಿಮ ಬಂಗಾಳ, ಕೇರಳ ಮತ್ತು ತಮಿಳುನಾಡು ರಾಜ್ಯಗಳಲ್ಲಿ ಹೊರತುಪಡಿಸಿ ಬೇರೆ ಯಾವ ರಾಜ್ಯದಲ್ಲಿಯೂ ಇಂತಹ ಸೌಲಭ್ಯಗಳಿಲ್ಲ. ಸಾರಿಗೆ ಕಾರ್ಮಿಕರಿಗೆ ಸಾಮಾಜಿಕ ಸೌಲಭ್ಯಗಳನ್ನು ಒದಗಿಸುವಂತೆ ಸರ್ಕಾರದ ಮೇಲೆ ಒತ್ತಡ ತರಲು ಹೋರಾಟ ರೂಪಿಸಬೇಕು ಎಂದು ಹೇಳಿದರು. ಎಂದು ಅವರು ಹೇಳಿದರು.

ಎಫ್.ಸಿ. ಗೂ ಬರಲಿದೆ ಸ್ಕ್ಯಾನಿಂಗ್ ಸಿಸ್ಟಮ್:

ಇಂದು ವಾಹನದ ಅರ್ಹತೆಯನ್ನು ಪ್ರಮಾಣೀಕರಿಸಲು ಆರ್.ಟಿ.ಓ. ಅಧಿಕಾರಿಗಳು ವಾಹನವನ್ನು ಪರಿಶೀಲನೆ ಮಾಡುವ ಮೂಲಕ ಫಿಟ್ ನೆಸ್ ಸರ್ಟಿಫಿಕೇಟ್ ಕೊಡುತ್ತಾರೆ. ಮುಂದಿನ ದಿನಗಳಲ್ಲಿ ಅರ್ಹತಾ ಪ್ರಮಾಣ ಪತ್ರ ಪಡೆಯಲು ಸಾರಿಗೆ ಅಧಿಕಾರಿಗಳ ಬಳಿ ಹೋಗುವಂತಿಲ್ಲ. ಬದಲಾಗಿ ಖಾಸಗೀ ಕಂಪನಿಗಳ ಬಳಿ ಹೋಗಬೇಕು. ಆ ಕಂಪನಿಗಳು ವಾಹನವನ್ನು ಸ್ಕ್ಯಾನಿಂಗ್ ಮಾಡುವ ಮೂಲಕ ವಾಹನದ ಅರ್ಹತೆಯನ್ನು ನಿರ್ಧರಿಸುತ್ತವೆ. ವಾಹನದ ಯಾವ ಭಾಗಗಳು ಅರ್ಹತೆ ಹೊಂದಿಲ್ಲ, ಯಾವ ಬಿಡಿ ಭಾಗಗಳನ್ನು ಹೊಸದಾಗಿ ಬದಲಾಯಿಸಬೇಕು ಎಂಬುದನ್ನು ಆ ಕಂಪನಿ ಹೇಳುತ್ತದೆ. ಒಂದು ವೇಳೆ ವಾಹನ ರಸ್ತೆಯಲ್ಲಿ ಸಂಚರಿಸಲು ಅರ್ಹತೆ ಹೊಂದಿರದಿದ್ದರೆ ಅಂತಹ ವಾಹನಗಳನ್ನು ಸ್ಕ್ರಾಫ್ ಮಾಡಲು ಈ ಖಾಸಗಿ ಕಂಪನಿಗಳೇ ಸೂಚಿಸುತ್ತವೆ.

ಮುಂದಿನ ದಿನಗಳಲ್ಲಿ ಡ್ರೈವಿಂಗ್ ಲೈಸನ್ಸ್ ಪಡೆಯಲು ಆರ್.ಟಿ.ಓ. ಗೆ ಹೋಗಬೇಕಾಗುವುದಿಲ್ಲ. ಮನೆಯಲ್ಲಿ ಕಂಪ್ಯೂಟರ್ ಮುಂದೆ ಕುಳಿತು, ಚಾಲನೆ ಪರೀಕ್ಷೆ ಎದುರಿಸುವ ಮೂಲಕ ಲೈಸನ್ಸ್ ಪಡೆಯಬಹುದಾದ ವ್ಯವಸ್ಥೆ ಬರುತ್ತದೆ. ಅಂದರೆ ಮುಂದಿನ ದಿನಗಳಲ್ಲಿ ಪ್ರಾದೇಶಿಕ ಸಾರಿಗೆ ಕಛೇರಿಗಳನ್ನು ಮುಚ್ಚಿ ಅವುಗಳ ಕೆಲಸಗಳನ್ನು ಖಾಸಗೀ ಕಂಪನಿಗಳಿಗೆ ಒಪ್ಪಿಸುತ್ತಾರೆ. ಇಡೀ ಸಾರಿಗೆ ವಲಯವನ್ನು ಕೆಲವೇ ಖಾಸಗಿ ಸಂಸ್ಥೆಗಳು ನಿಯಂತ್ರಣಕ್ಕೆ ತೆಗೆದುಕೊಂಡು ಸಾರಿಗೆ ಕಾರ್ಮಿಕರನ್ನು ಅತಂತ್ರ ಬದುಕಿನತ್ತ ತಳ್ಳುತ್ತವೆ ಎಂದು ಸಾರಿಗೆ ವಲಯದಲ್ಲಿ ಖಾಸಗೀಕರಣದ ಅಪಾಯದ ಬಗ್ಗೆ ಎಚ್ಚರಿಸಿದರು.



ಎ.ಐ.ಆರ್.ಟಿ.ಡಬ್ಲ್ಯೂ.ಎಫ್. ನ ಅಖಿಲ ಭಾರತ ಪ್ರಧಾನ ಕಾರ್ಯದರ್ಶಿ ಲಕ್ಷ್ಮಯ್ಯ ನವರು ಮಾತನಾಡುತ್ತ 'ಕೇರಳ ರಾಜ್ಯದಲ್ಲಿ ಸರ್ಕಾರವೇ ಆಪ್ ಆಧಾರಿತ ಟ್ಯಾಕ್ಸಿ ಮತ್ತು ಆಟೋ ಸೇವೆಯನ್ನು ಮಾಡುತ್ತಿದೆ. ಇದಕ್ಕಾಗಿ ಗ್ರಾಹಕರಿಂದ ಶೇಕಡಾ 8ರಷ್ಟು ಸೇವಾ ಶುಲ್ಕ ಪಡೆಯಲಾಗುತ್ತಿದೆ. ಈ ಹಣವನ್ನು ಸಾರಿಗೆ ಕಾರ್ಮಿಕರ ಕುಟುಂಬಗಳಿಗೆ ಸಾಮಾಜಿಕ ಸೌಲಭ್ಯಗಳನ್ನು ಒದಗಿಸಲು ಬಳಸಿಕೊಳ್ಳುತ್ತಾರೆ. ಇತರೆ ರಾಜ್ಯಗಳಲ್ಲೂ ಇದೇ ಮಾದರಿ ಅಳವಡಿಸಿಕೊಳ್ಳಲು ಸರ್ಕಾರದ ಮೇಲೆ ಒತ್ತಡ ತರಬೇಕಿದೆ' ಎಂದರು.

ಸರಕು ಸಾಗಾಣಿಕೆ ಮಾಡುವ ಆನ್ ಲೈನ್ ಕಂಪನಿ ಪೋರ್ಟಾಲ್ ನ ಉದಾಹರಣೆ ಕೊಟ್ಟ ಲಕ್ಷ್ಮಯ್ಯ ನವರು 'ಇಂದು ಆಫ್ ಆಧಾರಿತ ಸೇವೆ ಪ್ರಯಾಣಿಕರ ಸೇವೆಯಲ್ಲದೆ ಸರಕು ಸಾಗಾಣಿಕೆಯ ಸೇವೆಯಲ್ಲೂ ತೊಡಗಿಕೊಂಡಿವೆ. ಮುಂದಿನ ದಿನಗಳಲ್ಲಿ ಟೆಂಪೋ, ಲಾರಿ ಖರೀದಿಸಿ ಸ್ವಂತ ಉದ್ಯೋಗ ಮಾಡುತ್ತಿರುವ ಚಾಲಕರಿಗೆ ಗ್ರಾಹಕರೇ ಇಲ್ಲದಂತಾಗುತ್ತದೆ. ಅವರು ತೀವ್ರ ಸಂಕಷ್ಟಕ್ಕೆ ಸಿಲುಕುವ ಅಪಾಯ ಇದೆ. ಇದರ ಬಗ್ಗೆ ಸಂಘಟನೆ ಗಂಭೀರವಾಗಿ ಚಿಂತಿಸಬೇಕಾಗಿದೆ. ಈ ಎಲ್ಲಾ ಚಾಲಕನನ್ನು ಸಂಘಟನೆಗೆ ತರುವ ಪ್ರಯತ್ನ ಮಾಡಬೇಕು' ಎಂದರು.

ಬೆಂಗಳೂರು, ಹೊಸಪೇಟೆ, ಉಡುಪಿ ಮುಂತಾದ ಜಿಲ್ಲೆಗಳಿಂದ ಅಲ್ಲಿನ ಸ್ಥಳೀಯ ಮುಖಂಡರು, ಕಾರ್ಯಕರ್ತರು ಸಮಾವೇಶದಲ್ಲಿ ಭಾಗವಹಿಸಿದ್ದರು.

ಸಮಾವೇಶವನ್ನು ಉದ್ದೇಶಿಸಿ ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿ ಮೀನಾಕ್ಷಿ ಸುಂದರಂ, ಎಫ್.ಕೆ.ಎ.ಆರ್.ಡಿ.ಯು ನ ಪ್ರಧಾನ ಕಾರ್ಯದರ್ಶಿ... ಸಂತೋಷ್ ಕುಮಾರ್, ಅಧ್ಯಕ್ಷರಾದ ಬಿ.ವಿ. ರಾಘವೇಂದ್ರ, ಮುಂತಾದವರು ಮಾತನಾಡಿದರು.

ಕೆ. ಪ್ರಕಾಶ್ ಅವರನ್ನು ಸಂಚಾಲಕರನ್ನಾಗಿ ಮತ್ತು ಹತ್ತು ಜನರ ಸಂಚಾಲಕ ಸಮಿತಿಯನ್ನು ಆಯ್ಕೆ ಮಾಡಲಾಯಿತು. ರಾಜ್ಯಾದ್ಯಂತ ಪ್ರವಾಸ ಮಾಡಿ ಸಂಘಟನೆಯನ್ನು ಬಲಿಷ್ಠವಾಗಿ ಕಟ್ಟಲು ಸಮಾವೇಶ ನಿರ್ಧರಿಸಿತು. **–ಸಿ. ಸಿದ್ದಯ್ಯ**

ಪ್ರಭುತ್ವ ಮತ್ತು ಜನತೆಯಿಂದ ಆದಿವಾಸಿ ಕೊರಗ ಸಮುದಾಯಕ್ಕೆ ಚಾರಿತ್ರಿಕವಾಗಿ ಅನ್ಯಾಯ

"ಕೊರಗ ಸಮುದಾಯ ಕರಾವಳಿ ಕರ್ನಾಟಕ ಭಾಗದಲ್ಲಿ ಶತಶತಮಾನಗಳಿಂದ ಮೂಲನಿವಾಸಿಗಳಾಗಿ ವಾಸಿಸುತ್ತಿದ್ದಾರೆ. ಇವರು ಇಲ್ಲಿಯ ನೆಲ, ಜಲ ಮತ್ತು ಅರಣ್ಯ ಸಂಪತ್ತಿನ ಒಡೆಯರಾಗಿ ಇವುಗಳ ರಕ್ಷಣೆಯಲ್ಲಿ ತೊಡಗಿಕೊಂಡಿದ್ದಾರೆ. ಈ ಸಮುದಾಯವನ್ನು ಪ್ರಭುತ್ವ ಮತ್ತು ಜನತೆ ಮೂಲೆಗುಂಪು ಮಾಡಿ, ಶೋಷಣೆಗೆ ಗುರಿ ಮಾಡುವ ಮೂಲಕ ಅಮಾನವೀಯವಾಗಿ ನಡೆಸಿಕೊಂಡು ಚಾರಿತ್ರಿಕವಾಗಿ ಅನ್ಯಾಯವೆಸಗಿದೆ. ವಿಚಿತ್ರವೆಂದರೆ ಸ್ವಾತಂತ್ರ್ಯ ದೊರೆತು 75 ವರ್ಷ ಕಳೆದರೂ, ಸಂವಿಧಾನಿಕ ಹಕ್ಕುಗಳು ಇದ್ದರೂ, ಇಂದೂ ಕೂಡಾ ಇದೇ ಮನಸ್ಥಿತಿ ಮುಂದುವರಿಯುತ್ತಿರುವುದು ದುಃಖದ ಸಂಗತಿ" ಎಂದು ಸಿಐಟಿಯು ಕಾರ್ಮಿಕ ಸಂಘಟನೆಯ ದ.ಕ.ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸುನೀಲ್ ಕುಮಾರ್ ಬಜಾಲ್ ವಿಷಾದ ವ್ಯಕ್ತಪಡಿಸಿದರು. ಅವರು ಕರ್ನಾಟಕ ಆದಿವಾಸಿ ಹಕ್ಕುಗಳ ಸಮಿತಿಯ ಮಂಗಳ ಜ್ಯೋತಿ ಘಟಕದ ನೇತೃತ್ವದಲ್ಲಿ ನಡೆದ ಒಂದು ದಿನದ ಪಾದಯಾತ್ರೆಯ ಸಮಾರೋಪ ಭಾಷಣ ಮಾಡುತಿದ್ದರು. ಮಹಾನಗರ ಪಾಲಿಕೆ, ಜಿಲ್ಲಾಡಳಿತ ಮತ್ತು ಸರಕಾರ ಆಗಾಗ ಕೇವಲ ಅಗ್ಗದ ಪ್ರಚಾರಕ್ಕಾಗಿ ಕೊರಗ ಸಮುದಾಯದ ಬಗ್ಗೆ ಮೊಸಳೆ ಕಣ್ಣೀರು ಸುರಿಸುತ್ತಿದೆಯೇ ವಿನಃ ನಿಜವಾದ ಇಚ್ಚಾ ಶಕ್ತಿ ಇಲ್ಲ ಎಂದು ಹೇಳಿದ ಅವರು 'ನಿವೇಶನ ರಹಿತ 33 ಕೊರಗ ಕುಟುಂಬಗಳಿಗೆ ಐದು ವರ್ಷ ಕಳೆದರೂ ನಿವೇಶನ ಹಸ್ತಾಂತರವಾಗಲಿ, ದಾಖಲೆಗಳನ್ನಾಗಲಿ ನೀಡದಿರುವುದರ ಹಿಂದೆ ಈ ದೃಷ್ಟಿಕೋನವೇ ಅಡಗಿದೆ' ಎಂದು ಆರೋಪಿಸಿದರು.

ಉಡುಪಿ ಜಿಲ್ಲಾ ಕೊರಗ ಸಮುದಾಯದ ಮುಂದಾಳು ಹಾಗೂ ಕರ್ನಾಟಕ ಆದಿವಾಸಿ ಹಕ್ಕುಗಳ ಸಮಿತಿಯ ಉಡುಪಿ ಜಿಲ್ಲಾ ಅಧ್ಯಕ್ಷರಾದ ಶ್ರೀಧರ್ ನಾಡಾ ರವರು ಮಾತಾನಾಡುತ್ತ, 'ಆದಿವಾಸಿ ಕೊರಗ ಸಮೂದಾಯದ ಭೂಮಿಯ ಪ್ರಶ್ನೆ ಮೂಲಭೂತ ಪ್ರಶ್ನೆಯಾಗಿದ್ದು, ಕೇವಲ ಎರಡೂವರೆ ಸೆಂಟ್ಸ್ ನಿವೇಶನ ನೀಡಲು ಐದು ವರ್ಷಗಳ ಕಾಲ ಸತಾಯಿಸಿದ ನಗರ ಪಾಲಿಕೆ ಜನ ವಿರೋಧಿ ಎಂಬುದು ಸ್ಪಷ್ಟವಾಗಿದೆ' ಎಂದು ಟೀಕಿಸುತ್ತ, 'ಉಭಯ ಜಿಲ್ಲೆಗಳ ಆದಿವಾಸಿ ಹಕ್ಕುಗಳ ಸಮಿತಿಯು, ಮಹಮ್ಮದ್ ಪೀರ್ ವರದಿಯ ಪ್ರಕಾರ ಎರಡೂವರೆ ಎಕರೆ ಕೃಷಿ ಭೂಮಿ ಮಂಜೂರಾತಿಗಾಗಿ ಜಂಟಿ ಹೋರಾಟ ರೂಪಿಸಲಿದೆ' ಎಂದು ಹೇಳಿದರು.

ದ.ಕ.ಜಿಲ್ಲಾ, ಪೆನ್ಸನ್ ದಾರರ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸುಕುಮಾರ್ ತೊಕ್ಕೊಟ್ಟು ರವರು ಮಾತನಾಡುತ್ತಾ 'ಭೂಮಿಯ ಮೂಲ ಹಕ್ಕುದಾರರೇ ಭೂಮಿಗಾಗಿ ಹೋರಾಟ ಮಾಡಬೇಕಾದ ದುಸ್ಥಿತಿ ಬಂದಿರುವುದು ನಾಚಿಕೆಗೇಡು' ಎಂದು ಹೇಳಿದರು.

ಕರ್ನಾಟಕ ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿಯ ರಾಜ್ಯ ಸಹ ಸಂಚಾಲಕರಾದ ಡಾ.ಕೃಷ್ಣಪ್ಪ ಕೊಂಚಾಡಿಯವರು ಮಾತನಾಡುತಾ, 'ಮಂಗಳೂರು ಮಹಾನಗರ ಪಾಲಿಕೆಯು ನಿವೇಶನ ಹಂಚಿಕೆ, ನೇಮಕಾತಿ ಮತ್ತು ವಿವಿಧ ಯೋಜನೆಗಳಲ್ಲಿ ನಿರಂತರವಾಗಿ ಕೊರಗ ಸಮುದಾಯಕ್ಕೆ ಅನ್ಯಾಯವೆಸಗಿದೆ. ಪ್ರಸ್ತುತ 33 ಕೊರಗ ಕುಟುಂಬಗಳ ಮನೆ ವಾಸ್ತವಿಕವಾಗಿ ಹಸ್ತಾಂತರ ಆಗುವವರೆಗೆ ನಿರಂತರ ಹೋರಾಟ ನಡೆಸಲಾಗುವುದು' ಎಂದು ಘೋಷಿಸಿದರು.

ಅಖಿಲ ಭಾರತ ವಕೀಲರ ಸಂಘದ ಜಿಲ್ಲಾ ಮುಂದಾಳು ಹಾಗೂ ಕಾನಾನು ಸಲಹೆಗಾರರಾದ ಮನೋಜ್ ವಾಮಂಜೂರುರವರು ಬಹಿರಂಗ ಸಭೆಯಲ್ಲಿ ಭಾಷಣ ಮಾಡುತ್ತಾ, 'ಕೊರಗ ಸಮುದಾಯದ ನ್ಯಾಯೋಚಿತ ಹೋರಾಟಕ್ಕೆ ಕಾನೂನಿನ ಬಲವಾದ ಬೆಂಬಲವಿದೆ' ಎಂದರು. ಕಾರ್ಯಕ್ರಮದ ನಿರ್ವಹಣೆಯನ್ನು ಸಂಘಟನೆಯ ಜಿಲ್ಲಾ ಮಾರ್ಗದರ್ಶಕರಾದ ಯೋಗಿಶ್ ಜಪ್ಪಿನಮೊಗರು ಮಾಡಿದರು. ಪಾದಯಾತ್ರೆಯ ನಾಯಕತ್ವವನ್ನು ಅಧ್ಯಕ್ಷರಾದ ಕೆ.ಕರಿಯ ಶೇಖರ್, ಪುನೀತ, ಗಣೇಶ್, ವಿನೋದ್, ಕೃಷ್ಣಪ್ಪ, ವಿಗ್ನೇಶ್, ವಿಕ್ಯಾತ್, ಮಂಜುಳಾ ಶಶಿಕಲಾ, ಯಶೋಧ. ಪೂರ್ಣಿಮಾ ತುಳಸಿ, ಮೊದಲಾದವರು ವಹಿಸಿದ್ದರು. ಸಹಸಂಚಾಲಕರಾದ ರವೀಂದ್ರ ಮಂಗಳಜ್ಯೋತಿ ವಂದಿಸಿದರು. ಕೊನೆಯಲ್ಲಿ ಮೇಯರ್ ಮತ್ತು ಕಮೀಷನರ್ ರವರಿಗೆ ಸಾಮೂಹಿಕ ಮನವಿ ಅರ್ಪಿಸಲಾಯಿತು.

➘ ಕೊಂಚಾಡಿಯವರು ಮತ್ತು ರೈತ ಸಂಘದ ಮುಂದಾಳು ಸದಾಶಿವದಾಸ್, ಸ್ಥಳೀಯ ಕಾರ್ಪೋರೇಟರ್ ಭಾಸ್ಕರ್ ಕೆ ಅವರು ಮಾತನಾಡಿದರು.

ಘಟಕದ ಅಧ್ಯಕ್ಷರಾದ ಕರಿಯ ಕೆ ಯವರು ನಿವೇಶನ ಹಸ್ತಾಂತರ ಆಗುವವರೆಗೂ ಹೋರಾಟದಿಂದ ವಿರಮಿಸುವುದೇ ಇಲ್ಲ ಎಂದು ಘೋಷಿಸಿದರು. ಪ್ರಾಸ್ತವಿಕವಾಗಿ ಆದಿವಾಸಿ ಹಕ್ಕುಗಳ ಸಮಿತಿಯ ಮಾರ್ಗದರ್ಶಕರಾದ ಯೋಗೀಶ್ ಜಪ್ಪಿನಮೊಗ್ರು ಮಾತನಾಡಿದರು. ಜಾಥಾದಲ್ಲಿ ಸ್ಥಳೀಯ ಘಟಕದ ಕಾನೂನು ಸಲಹೆಗಾರರಾದ ಮನೋಜ್ ವಾಮಂಜೂರು, ಹಿರಿಯ ಸಾಹಿತಿ ಬಿ ಎಂ ರೋಹಿಣಿ, ದಲಿತ ಹಕ್ಕುಗಳ ಸಮಿತಿಯ ನಾಯಕರಾದ ತಿಮ್ಮಯ್ಯ ಕೊಂಚಾಡಿ, ಕೃಷ್ಣ ತಣ್ಣೀರುಬಾವಿ, ರಾಧಾಕೃಷ್ಣ, ರಘುವೀರ್, ಡಿವೈಎಫ್ಐನ ನಾಯಕರಾದ ದಿನೇಶ್ ಬೊಂಡಂತಿಲ, ಜಯಶೀಲ, ಪ್ರಶಾಂತ್ ಎಂ ಬಿ, ಮನೋಜ್ ಉರ್ವಸ್ಟೋರ್ ಮೊದಲಾದವರು ಜಾಥದಲ್ಲಿ ಇದ್ದರು.

ಜಾಥಾ ನಾಯಕತ್ವವನ್ನು ಸಂಘಟನೆಯ ಪದಾಧಿಕಾರಿಗಳಾದ ಶೇಖರ್, ಪ್ರನೀತ್, ವಿನೋದ್ ವಿಕ್ಯಾತ್, ಮಂಜುಳಾ, ಯಶೋಧ, ವಿಕಾಸ್, ವಿಘ್ನೇಶ್, ಗಣೇಶ್, ಕೃಷ್ಣಪ್ಪ ಮೊದಲಾದವರು ನೇತೃತ್ವ ವಹಿಸಿದ್ದರು.

ಕಾಲ್ಪನಿಕ ಚರಿತ್ರೆಯೂ ಇತಿಹಾಸಕಾರರ ಅನಿಶ್ಚಿತ ಭವಿಷ್ಯವೂ

ಮೂಲ: **ಜಾನಕಿ ನಾಯರ್**
ಅನುವಾದ : **ನಾ ದಿವಾಕರ**

Imaginative pasts, the Uncertain futures of historians - ದ ಹಿಂದೂ 28 ನವಂಬರ್ 2022

ಇಂದು ರಾಜ್ಯದ ಬಗ್ಗೆ, ರಾಜ್ಯದ ಚರಿತ್ರೆಯ ಬಗ್ಗೆ ಮತ್ತು ಚರಿತ್ರೆಯಲ್ಲಿ ಆಗಿಹೋದ ನಾಯಕರ ಬಗ್ಗೆ ಕರ್ನಾಟಕದ ವೃತ್ತಿಪರ ಇತಿಹಾಸಕಾರರ ಧ್ವನಿಯನ್ನು, ಈ ಗದ್ದಲದ ನಡುವೆ, ಕೇಳಿಸಿಕೊಳ್ಳಲು ಸಾಧ್ಯವೇ? ಸರ್ಕಾರ, ಪಕ್ಷಗಳ ಅಥವಾ ಸಮುದಾಯಗಳ ಬೆಂಬಲದೊಂದಿಗೆ ಸಾಮಾಜಿಕ ತಾಣಗಳಲ್ಲಿ ಹರಡುತ್ತಿರುವ ವಿಚಾರಗಳು, ಸ್ಥಾಪನೆಯಾಗುತ್ತಿರುವ ಪ್ರತಿಮೆಗಳು, ತಮ್ಮ ನಾಯಕರನ್ನು (ಸಾಮಾನ್ಯವಾಗಿ ಪುರುಷರು) ವೈಭವೀಕರಿಸಲು ನಿರ್ಮಿಸಲಾಗುವ ಸ್ಮಾರಕಗಳು, ಸ್ಥಾಪಿತ ಧಾರ್ಮಿಕ ಸ್ಥಳಗಳನ್ನು ಹಿಂಪಡೆಯಲು ನಡೆಯುವ ಪ್ರತಿಭಟನೆಗಳು, ಚರಿತ್ರೆಯ ಖಳನಾಯಕರನ್ನು (ಸಾಮಾನ್ಯವಾಗಿ ಮುಸಲ್ಮಾನರು) ಅಪಮಾನಿಸುವ ಪ್ರಯತ್ನಗಳು ಇವೆಲ್ಲದರ ನಡುವೆ ಇತಿಹಾಸಕಾರರು ನಿಕೃಷ್ಟ ಸಂಪನ್ಮೂಲಗಳಾಗಿ ಕಾಣುತ್ತಿದ್ದಾರೆ. ಇಂದು ಇತಿಹಾಸದ ಉಲ್ಲಂಘನೆ ಎಷ್ಟು ತೀವ್ರತೆಯನ್ನು ಪಡೆದಿದೆ ಎಂದರೆ ನಂಜೇಗೌಡ ಮತ್ತು ಉರಿಗೌಡ ಎಂಬ ಇಬ್ಬರು ಒಕ್ಕಲಿಗರು 1799ರಲ್ಲಿ ಟಿಪ್ಪು ಸುಲ್ತಾನನನ್ನು ಗಾಯಗೊಳಿಸಿ ಕೊಂದಿದ್ದಾರೆ ಎಂದು ಬಿಂಬಿಸುವ ವಿಡಿಯೋ ಎಲ್ಲೆಲ್ಲೂ ಹರಿದಾಡುತ್ತಿದೆ. ಇಂದು ಗತಕಾಲವು ಅಪಾಯಕಾರಿ ನೆಲೆಯಾಗಿದ್ದು, ವೃತ್ತಿಪರ ಇತಿಹಾಸಕಾರರು ಇದನ್ನು ದಾಟಿ ಹೋಗಲು ಹಿಂಜರಿಯುತ್ತಿದ್ದಾರೆ.

ಬೆಂಗಳೂರಿನಲ್ಲಿ ಎಲ್ಲೆಡೆ ರಾರಾಜಿಸುತ್ತಿರುವ ಶಾಸಕರ, ಬಿಬಿಎಂಪಿ ಪ್ರತಿನಿಧಿಗಳ ಫ್ಲೆಕ್ಸ್ ಬೋರ್ಡುಗಳು, ಪುನೀತ್ ರಾಜಕುಮಾರ್ ಅವರ ನಗುಮೊಗದ ಬ್ಯಾನರ್‌ಗಳು, ಧ್ವಜ ಸ್ತಂಭಗಳು, ಸರ್ಕಾರದ ಹಾಗೂ ವಾಣಿಜ್ಯ ಜಾಹೀರಾತುಗಳು ಇವೆಲ್ಲದರ ನಡುವೆ ಬೆಂಗಳೂರಿನಲ್ಲಿ ಮೊದಲನೆ ಕೆಂಪೇಗೌಡರ ಬೃಹತ್ ಪ್ರತಿಮೆಯೂ ಅನಾವರಣಗೊಂಡಿದೆ. 16ನೆಯ ಶತಮಾನದ ನಾಡಪ್ರಭು ಎಂದೇ ಕರೆಯಲ್ಪಡುವ ಕೆಂಪೇಗೌಡ ಬೆಂಗಳೂರಿನ ಸಂಸ್ಥಾಪಕರೆಂದೇ ಹೆಸರುವಾಸಿಯಾಗಿದ್ದು 1537ರಲ್ಲಿ ಸ್ಥಾಪಿಸಿದ ಬೆಂಗಳೂರು ಇಂದು ಈ ನಾಡ ಪ್ರಭುವಿಗೆ ಗೌರವ ಸೂಚಿಸಲು 108 ಅಡಿ ಎತ್ತರದ ಬೃಹತ್ ಪ್ರತಿಮೆಯನ್ನು ಸ್ಥಾಪಿಸಿದೆ. 'ಸಮೃದ್ಧಿಯ ಪ್ರತಿಮೆ' ಎಂದೇ ಗುರುತಿಸಲ್ಪಟ್ಟಿರುವ ಈ ಬೃಹತ್ ಪ್ರತಿಮೆ ಕೆಂಪೇಗೌಡನ ಹೆಸರಿನಲ್ಲೇ ಇರುವ ದೇವನಹಳ್ಳಿಯ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣವನ್ನು ಅಲಂಕರಿಸಿದ್ದು, ಇಲ್ಲಿಗೆ ಬರುವ ಪ್ರತಿಯೊಬ್ಬ ಪ್ರಯಾಣಿಕರಿಗೂ ಕೆಂಪೇಗೌಡನ ಅಸ್ತಿತ್ವವನ್ನು ಪರಿಚಯಿಸುವಂತಿದೆ.

ಇತಿಹಾಸಕಾರರಿಗೆ ಅವಕಾಶವೇ ಇಲ್ಲ

ಇಂದು ರಾಜ್ಯದ ಬಗ್ಗೆ, ರಾಜ್ಯದ ಚರಿತ್ರೆಯ ಬಗ್ಗೆ ಮತ್ತು ಚರಿತ್ರೆಯಲ್ಲಿ ಆಗಿಹೋದ ನಾಯಕರ ಬಗ್ಗೆ ಕರ್ನಾಟಕದ ವೃತ್ತಿಪರ ಇತಿಹಾಸಕಾರರ ಧ್ವನಿಯನ್ನು, ಈ ಗದ್ದಲದ ನಡುವೆ, ಕೇಳಿಸಿಕೊಳ್ಳಲು ಸಾಧ್ಯವೇ? ಇತಿಹಾಸಕಾರರು ಸಂಶೋಧನೆ, ಅಧ್ಯಯನ, ಬರಹಗಳಿಗೇ ಸೀಮಿತವಾಗಿದ್ದು ಕೆಲವು ಪ್ರಸಂಗಗಳಲ್ಲಿ ಅದೃಷ್ಟ ಇದ್ದರೆ ಸಂಕೀರ್ಣವಾದ, ವಿವಾದಾಸ್ಪದ, ಸಂಘರ್ಷಮಯ ಇತಿಹಾಸದ ಬೋಧನೆಯನ್ನು ಮಾಡಲು ಸಾಧ್ಯವಾಗುತ್ತಿದೆ. ಸರ್ಕಾರ, ಪಕ್ಷಗಳ ಅಥವಾ ಸಮುದಾಯಗಳ ಬೆಂಬಲದೊಂದಿಗೆ ಸಾಮಾಜಿಕ ತಾಣಗಳಲ್ಲಿ ಹರಡುತ್ತಿರುವ ವಿಚಾರಗಳು,




ಸ್ಥಾಪನೆಯಾಗುತ್ತಿರುವ ಪ್ರತಿಮೆಗಳು,, ತಮ್ಮ ನಾಯಕರನ್ನು (ಸಾಮಾನ್ಯವಾಗಿ ಪುರುಷರು) ವೈಭವೀಕರಿಸಲು ನಿರ್ಮಿಸಲಾಗುವ ಸ್ಮಾರಕಗಳು, ಸ್ಥಾಪಿತ ಧಾರ್ಮಿಕ ಸ್ಥಳಗಳನ್ನು ಹಿಂಪಡೆಯಲು ನಡೆಯುವ ಪ್ರತಿಭಟನೆಗಳು, ಚರಿತ್ರೆಯ ಖಳನಾಯಕರನ್ನು (ಸಾಮಾನ್ಯವಾಗಿ ಮುಸಲ್ಮಾನರು) ಅಪಮಾನಿಸುವ ಪ್ರಯತ್ನಗಳು ಇವೆಲ್ಲದರ ನಡುವೆ ಇತಿಹಾಸಕಾರರು ನಿಕೃಷ್ಟ ಸಂಪನ್ಮೂಲಗಳಾಗಿ ಕಾಣುತ್ತಿದ್ದಾರೆ. ವಿಡಿಯೋಗಳ ಮೂಲಕ ಅಥವಾ ನಾಟಕಗಳ ಮೂಲಕ ಪ್ರಸ್ತುತಪಡಿಸಲಾಗುವ ವರ್ಣರಂಜಿತ ಪ್ರದರ್ಶನಗಳು ಯಾವುದೇ ಶುಷ್ಕ ದೀರ್ಘ ಉಪನ್ಯಾಸಗಳಿಗಿಂತಲೂ ಹೆಚ್ಚು ಆಕರ್ಷಣೀಯವಾಗಿರುತ್ತದೆ. ಅದೃಷ್ಟವಶಾತ್ ಈ ಪ್ರದರ್ಶನಗಳು ವಸ್ತುನಿಷ್ಠತೆಗಾಗಲೀ, ತರ್ಕಗಳಿಗಾಗಲೀ, ಬದ್ಧವಾಗಿರಬೇಕಿಲ್ಲ.

ಹಾಗಾಗಿ ನಾಡಪ್ರಭು ಕೆಂಪೇಗೌಡರ ಪ್ರತಿಮೆಯ ಎತ್ತರ, ವಸ್ತ್ರ ವಿನ್ಯಾಸ ಅಥವಾ ಚರ್ಯೆಯನ್ನು ನಿರ್ಧರಿಸುವುದರಲ್ಲಿ ಇತಿಹಾಸಕಾರರಿಗೆ ಯಾವುದೇ ಪಾತ್ರ ಇರಲು ಸಾಧ್ಯವಿಲ್ಲ. ಬೆಂಗಳೂರಿನ ಮಾಜಿ ಮೇಯರ್, ದಿವಂಗತ ಜಿ ನಾರಾಯಣ ಅವರು ಹೇಳಿರುವಂತೆ, ಬೆಂಗಳೂರಿನಲ್ಲಿ ಕೆಂಪೇಗೌಡನ ಪ್ರತಿಮೆಯನ್ನು ಮೊಟ್ಟಮೊದಲನೆಯದಾಗಿ ಸ್ಥಾಪಿಸಿದ್ದು 1964ರಲ್ಲಿ ಬೆಂಗಳೂರು ನಗರ ಪಾಲಿಕೆಯ ಮುಂದೆ. ಕೆಂಪೇಗೌಡ ಹೇಗೆ ಕಾಣಬೇಕು ಎಂದು ನಿರ್ಧರಿಸಲೇ ಐದು ವರ್ಷಗಳ ಚರ್ಚೆ ನಡೆದಿತ್ತು ಎಂದು ನಾರಾಯಣ ಹೇಳುತ್ತಾರೆ. ಇತಿಹಾಸಕಾರರು ತಮ್ಮ ಪಾತ್ರ ವಹಿಸಿದ್ದ ಪಕ್ಷದಲ್ಲಿ ಎರಡು ಉಪಲಬ್ಧವಿರುವ ನಿದರ್ಶನಗಳನ್ನು ಒದಗಿಸುತ್ತಿದ್ದರು. ಮೊದಲನೆಯದು ಹಲಸೂರಿನ ಸೋಮೇಶ್ವರ ದೇವಾಲಯದಲ್ಲಿರುವ ಪ್ರತಿಮೆ ಮತ್ತೊಂದು ಶಿವಗಂಗೆಯ ಗಂಗಾಧರೇಶ್ವರ ದೇವಾಲಯದಲ್ಲಿರುವ ಪ್ರತಿಮೆ.



ಹಲಸೂರಿನಲ್ಲಾಗಲೀ, ಶಿವಗಂಗೆಯಲ್ಲಾಗಲೀ ಕೆಂಪೇಗೌಡರನ್ನು ಎರಡೂ ಕೈಗಳನ್ನು ಜೋಡಿಸಿ, ಪ್ರಾರ್ಥಿಸುತ್ತಿರುವ ಭಂಗಿಯಲ್ಲಿ ಬಿಂಬಿಸಲಾಗಿದ್ದು, ಖಡ್ಗವು ಒರೆಯಲ್ಲಿರುವಂತೆ ನಿರ್ಮಿಸಲಾಗಿದೆ. ಆದರೆ ಈಗ ಇಡೀ ಪ್ರಾಂತ್ಯದ ಯುಗ ಪುರುಷ ಎಂದು ಮರಣೋತ್ತರವಾಗಿ ಸ್ಥಾಪಿಸಲ್ಪಟ್ಟಿರುವ ಪ್ರತಿಮೆಯು ರಾಜ್ಯದ ವಿವಿಧ ಭಾಗಗಳಿಂದ ತಂದಿರುವ ಮೃತ್ತಿಕೆಯ ಮೇಲೆ ನಿರ್ಮಿಸಲಾಗಿದ್ದು, ಖಡ್ಗ ಹಿಡಿದಿರುವ ಯೋಧನ ರೀತಿಯಲ್ಲಿ ಬಿಂಬಿಸಲಾಗಿದೆ.

ಕೆಂಪೇಗೌಡ ಪ್ರತಿಮೆಯಲ್ಲಿ ಬಿಂಬಿಸಲಾಗಿರುವ ಕಸೂತಿ ಮಾಡಲಾಗಿರುವ ಜುಬ್ಬ, ಪೇಟದ ಮುಂಭಾಗದ ಆಭರಣ, ಚೂರಿದಾರ್, ಪೇಟ, ಮತ್ತು ಪಾದರಕ್ಷೆ ಇವೆಲ್ಲವೂ ನಗಣ್ಯ ಎನಿಸುತ್ತವೆ. ಲಭ್ಯವಿರುವ ಎರಡು ಪ್ರಾತಿನಿಧ್ಯಗಳ ಅನುಸಾರ ಕೆಂಪೇಗೌಡನ ಪ್ರತಿಮೆಗಳು ತೆರೆದ ಎದೆ, ಬರಿಗಾಲು ಮತ್ತು ಮಡಿಕೆಗಳು ಕಾಣುವಂತೆ ಉಟ್ಟಿರುವ ಪಂಚೆ ಇವುಗಳನ್ನು ಬಿಂಬಿಸುತ್ತವೆ. ಇನ್ನೂ ಆಸಕ್ತಿದಾಯಕ ಎಂದರೆ ಧರಿಸಿರುವ ಟೊಪ್ಪಿ. ಇತಿಹಾಸಕಾರರು ಇದನ್ನು ಕಪಾಯಿ ಎಂದು ಗುರುತಿಸುತ್ತಾರೆ. ತ್ರಿಕೋನಾಕಾರದ ಉದ್ದನೆಯ ಜರತಾರಿಯಿಂದ ನೇಯ್ದಿರುವ ಬಟ್ಟೆಯಿಂದ ಅಲಂಕೃತವಾದ ಈ ರೀತಿಯ ಟೊಪ್ಪಿಯನ್ನು ಸಾಮಾನ್ಯವಾಗಿ ಉದ್ದನೆಯ ಬಿಳಿಯ ಜುಬ್ಬದೊಂದಿಗೆ ಧರಿಸಲಾಗುತ್ತದೆ. ಈ ಉಡುಪುಗಳನ್ನು ವಿಜಯನಗರದ ಅರಸರು ತಮ್ಮ ನೆರೆಯ ಇಸ್ಲಾಮಿಕ್ ದೊರೆಗಳಿಂದ ಅನುಕರಿಸಿದ್ದರು.



ಈ ರೀತಿಯ ಸಾಂಸ್ಕೃತಿಕ ಅನುಕರಣೆಗಳು, ವಸ್ತ್ರ ವಿನ್ಯಾಸ, ನ್ಯಾಯ ನಿರ್ವಹಣೆ, ಸಂಬೋಧನೆ ಅಥವಾ ವಾಸ್ತುಶಿಲ್ಪದ ಅನುಕರಣೆಗಳು, ಹಿಂದೂ ಮುಸ್ಲಿಂ ವೈರುಧ್ಯದ ಉಚ್ಛ್ರಾಯ ಕಾಲ ಎಂದೂ ಸಹ ಬಲವಾಗಿ ಪ್ರತಿಪಾದಿಸಲಾಗುತ್ತಿರುವ ಈ ಅವಧಿಯಲ್ಲಿ ಸಾಮಾನ್ಯವಾಗಿತ್ತು ಎಂದು ಮಧ್ಯಯುಗದ ಇತಿಹಾಸಕಾರರು ಪ್ರತಿಪಾದಿಸುತ್ತಾರೆ.

17ನೆಯ ಶತಮಾನದ ವೇಳೆಗೆ ಮರಾಠಾ ಶೈಲಿಯ ವಸ್ತ್ರ ಧಾರಣೆಯೂ ಜನಪ್ರಿಯವಾಗಿತ್ತು. ಅದಕ್ಕೂ ಹಿಂದಿನ ವಿಜಯನಗರ ಸಾಮ್ರಾಜ್ಯದ ಇಕ್ಕೇರಿ, ಮದುರೈ, ತಂಜಾವೂರ್‌ಗಳಲ್ಲಿದ್ದಂತೆ ಈ ವಿನ್ಯಾಸಗಳೂ ಸಹ ಇಸ್ಲಾಮಿಕ್ ದರ್ಬಾರುಗಳ ಸಂಪ್ರದಾಯಗಳನ್ನು ಅಳವಡಿಸಿಕೊಂಡಿದ್ದವು.

ಕೆಂಪೇಗೌಡರ ವಸ್ತ್ರ ವಿನ್ಯಾಸವು ಹೆಚ್ಚಿನ ಮಟ್ಟಿಗೆ, ಇಂದು ಬಹುಪಾಲು ಕನ್ನಡಿಗರಿಗೆ ಅಪಥ್ಯವಾಗಿರುವ 18ನೆಯ ಶತಮಾನದ ಟಿಪ್ಪು ಸುಲ್ತಾನನೊಡನೆ ಹೋಲಿಕೆಯಾಗುತ್ತದೆ. ವಿಮಾನ ನಿಲ್ದಾಣ ಇರುವ ದೇವನಹಳ್ಳಿ ಟಿಪ್ಪು ಸುಲ್ತಾನನ ಜನ್ಮಸ್ಥಳವೂ ಆಗಿದ್ದು, ಕೆಂಪೇಗೌಡನ ಜನ್ಮಸ್ಥಳ ಸಮೀಪದಲ್ಲೇ ಇರುವ ಯಲಹಂಕ ಆಗಿದೆ.

ಪಕ್ಷದ ಆಂತರಿಕ ಭೇದ

ಧರ್ಮಗಳೊಡಗಿನ ಸಂಬಂಧಗಳನ್ನು ವ್ಯಾಪಕ ನೆಲೆಯಲ್ಲಿ ರಾಜಕೀಯ-ಸಾಂಸ್ಕೃತಿಕ ಪ್ರಭಾವಗಳಿಂದ ಪ್ರತ್ಯೇಕಿಸಿ ನೋಡುವ ನಿಟ್ಟಿನಲ್ಲಿ ಇತಿಹಾಸಕಾರರು ಸಾಮಾನ್ಯವಾಗಿ ಇಸ್ಲಾಮಿಕ್ ಎಂಬ ಪದದ ಬದಲು, ಇಸ್ಲಾಮಿಕೇಟ್ ಅಥವಾ ಪರ್ಷಿಯನೇಟ್ ಎಂಬ ಪದವನ್ನು ಬಳಕೆ ಮಾಡುತ್ತಾರೆ. ಆದರೆ ತಮ್ಮ ಕಾರ್ಯಕರ್ತರೊಡನೆ ಮುನ್ನಡೆಯುವ (ಹಿಂದುತ್ವ) ರಾಜಕೀಯ ನಾಯಕರಿಗೆ ಇಂತಹ ಸೂಕ್ಷ್ಮ ಭೇದಗಳು ಬೇಕಾಗುವುದಿಲ್ಲ. ಇತ್ತೀಚೆಗೆ ಮೈಸೂರಿನಲ್ಲಿ ಬಸ್ ತಂಗುದಾಣವೊಂದರ ಮೇಲೆ ಮೂರು ಗುಮ್ಮಟಗಳಿದ್ದುದರ ವಿರುದ್ಧ ವಿವಾದ ಏರ್ಪಟ್ಟಿತ್ತು. ಮೈಸೂರು ಸಂಸದರಾದ ಪ್ರತಾಪ್ ಸಿಂಹ ಗುಂಬಜ್ ಮಾದರಿಯ ಈ ಗುಮ್ಮಟಗಳು ಭಾರತಕ್ಕಿಂತಲೂ ಪಾಕಿಸ್ತಾನಕ್ಕೆ ಸೂಕ್ತವಾಗುತ್ತದೆ ಎಂದು ಖಂಡಿಸಿದ್ದೇ ಅಲ್ಲದೆ, ಅದನ್ನು ಕೆಡವಿ ಪುನರ್ ನಿರ್ಮಾಣ ಮಾಡಲು ಆಗ್ರಹಿಸಿದ್ದರು. ಇದರ ನಿರ್ಮಾಣದ ಜವಾಬ್ದಾರಿ ಹೊತ್ತ ಶಾಸಕ ಎಸ್.ಎ. ರಾಮದಾಸ್, ಇದು ಮೈಸೂರು ಅರಮನೆಗೆ ಗೌರವಪೂರ್ವಕವಾಗಿ ಗುಮ್ಮಟಗಳ ಶೈಲಿಯಲ್ಲಿದ್ದು, 20ನೆಯ ಶತಮಾನದಲ್ಲಿ ಅರಮನೆಗಳ ನಿರ್ಮಾಣದಲ್ಲಿ ಅನುಸರಿಸಲಾಗುತ್ತಿದ್ದ ಶೈಲಿ ಎಂದು ಸಮಜಾಯಿಷಿ ನೀಡಿದ್ದರು. ಬಿಜೆಪಿಯ ಈ ಆಂತರಿಕ ಸಂಘರ್ಷದಲ್ಲಿ, ಬಸ್ ತಂಗುದಾಣವು ಮಸೀದಿಯನ್ನು ಹೋಲುತ್ತಿದೆ ಎಂಬ ಆಪಾದನೆಯ ಪರಿಣಾಮ ರಾತ್ರೋರಾತ್ರಿ ಅಲ್ಲಿ ಕಳಶಗಳನ್ನು ನಿರ್ಮಿಸಲಾಗಿತ್ತು. ಅದೂ ಸಹ ಸಂಸದರ ಆಕ್ರೋಶವನ್ನು ತಣಿಸದೆ ಹೋದಾಗ ಕೇಸರಿ ಬಣ್ಣ ಬಳಿಯಲಾಗಿತ್ತು. ಈ ಸಂದರ್ಭದಲ್ಲಿ ಕೊಡೇಕಲ್ ಮತ್ತು ತಿಂತಿಣಿ ದೇವಾಲಯಗಳಲ್ಲಿ (ಯಾದಗಿರಿ ಜಿಲ್ಲೆ) ಮಿನಾರೆಟ್ (ಮಸೀದಿಯ ಸ್ತಂಭ ಗೋಪುರ) ಮತ್ತು ಗುಮ್ಮಟಗಳಿವೆ ಎಂದು ಬೊಟ್ಟು ಮಾಡಿ ತೋರಿಸುವುದಾಗಲೀ, ರಾಜಪ್ರಭುತ್ವಗಳಿಗೂ ಪ್ರಜಾಪ್ರಭುತ್ವಗಳಿಗೂ ವ್ಯತ್ಯಾಸವಿದೆ ಎಂದು ಯುಜಿಸಿ ಅಧ್ಯಕ್ಷರಿಗೆ ಹೇಳುವುದಾಗಲೀ ವೃಥಾ ಪ್ರಲಾಪ ಎನಿಸಬಹುದಷ್ಟೆ. ಆಲ್ಬರ್ಟ್ ಐನ್ಸ್ಟೀನ್ ಅವರ "ಹರ್ಷೋಲ್ಲಾಸದ ಪಯಣಿಗರಿಗೆ ಅಪ್ಪಿ ತಪ್ಪಿ ದೊಡ್ಡ ಮಿದುಳು ನೀಡಲಾಗಿದೆ, ಅವರಿಗೆ ಬೆನ್ನು ಹುರಿ ಇದ್ದಿದ್ದರೆ ಸಾಕಾಗಿತ್ತು" ಎಂಬ ಮಾತುಗಳು ನೆನಪಾಗುತ್ತವೆ.

ಮತ್ತೊಂದೆಡೆ ಟಿಪ್ಪೂ ಸುಲ್ತಾನನ ಬಗ್ಗೆ ಆಕ್ರೋಶವು ಹಲವು ವೇದಿಕೆಗಳಲ್ಲಿ ಹೊರಹೊಮ್ಮುತ್ತಿದೆ. ರಂಗಾಯಣದ ನಿರ್ದೇಶಕರು ಟಿಪ್ಪು ನಿಜ ಕನಸುಗಳು ಎಂಬ ನಾಟಕವನ್ನು ರಚಿಸಿದ್ದು 250 ಪೊಲೀಸರ ರಕ್ಷಣೆಯೊಂದಿಗೆ ಪ್ರದರ್ಶನ ಮಾಡಿದ್ದಾರೆ. ಈ ನಾಟಕದಲ್ಲಿ ಟಿಪ್ಪು ಸುಲ್ತಾನನನ್ನು ಮತಾಂಧ, ಕ್ರೂರಿ ಎಂದು ಬಿಂಬಿಸಲಾಗಿದೆ. (ಈ ಕಲ್ಪಿತ ಚಿತ್ರಣವು 18ನೆಯ ಶತಮಾನದ ಅಂತ್ಯದಲ್ಲಿ ಬ್ರಿಟೀಷ್ ಸಾಮ್ರಾಜ್ಯಶಾಹಿಯ ಆಧಿಪತ್ಯ ಸಾಧಿಸಲು ಅತ್ಯವಶ್ಯವಾಗಿತ್ತು ಎಂದು ಇತಿಹಾಸಕಾರ ಮೈಕೆಲ್ ಸೊರೋಕೋ ಹೇಳುತ್ತಾರೆ). 1940 ಮತ್ತು 50ರ ದಶಕದಲ್ಲಿ ಹುಲಿಮನೆ ಸೀತಾರಾಮಶಾಸ್ತ್ರಿಗಳು ಬರೆದ ನಾಟಕದಲ್ಲಿ ಟಿಪ್ಪುವನ್ನು ಧೀರ-ಶೂರ ಎಂದು ಬಣ್ಣಿಸಲಾಗಿದ್ದು, ಮೈಸೂರಿನ ಪ್ರಪ್ರಥಮ ವಸಾಹತು ವಿರೋಧಿ ಸೇನಾನಿ ಎಂದು ಬಿಂಬಿಸಿರುವುದನ್ನು ಸ್ಮರಿಸುವಾಗ ನಾವು ಬಹುದೂರ ಕ್ರಮಿಸಿದ್ದೇವೆ ಎನಿಸುತ್ತದೆ. ➚

ಟಿಪ್ಪಣಿ: ಕೆಂಪೇಗೌಡ ಇದ್ದರು ಯಾವ ಬಗೆಯ ಬಟ್ಟೆ ಧರಿಸುತ್ತಿದ್ದರು – ಇದು ತಮಾಷೆಯ ಪ್ರಶ್ನೆಯಾಗುತ್ತದೆ. ಒಬ್ಬ ನಾಡಪ್ರಭುವಾಗಿದ್ದವನು ಮತ್ತು ಆಗಿನ ಕಾಲದ ವಿಜಯನಗರದ ದರ್ಬಾರಿನಲ್ಲಿ ಕಾಣಿಸಿಕೊಂಡವನು. ಆಸ್ಥಾನದ ಶಿಸ್ತಿನಂತೆಯೇ ದುಸ್ತು ಧರಿಸಿರಬೇಕಾಗುತ್ತದೆ. ಅಂದರೆ ಸಾರ್ವಜನಿಕವಾಗಿ ಕಾಣಿಸಿಕೊಳ್ಳುವಾಗ ಇದೆ ತರಹೆ ಇದ್ದಿರಬೇಕು. ಇದು ಆಗಿನ ಕಾಲದ ಫ್ಯಾಶನ್. ಇದರ ಸುಳಿವು ನಮಗೆ ಸಿಗುವುದು ಬೆಂಗಳೂರಿನ ಹತ್ತಿರದಲ್ಲಿರುವ ಲೇಪಾಕ್ಷಿಯಲ್ಲಿ.

ಅಲ್ಲಿ ವಿಪುಲವಾದ ಚಿತ್ರಗಳನ್ನು ಬರೆದಿದ್ದಾರೆ. ವಿಜಯನಗರದ ಅರಸ ಅಚ್ಚುತರಾಯನ ಅಧಿಕಾರಿಗಳಾಗಿದ್ದ ವೀರಣ್ಣ ಮತ್ತು ವಿರೂಪಣ್ಣರವರು ದೇವಸ್ಥಾನ ಕಟ್ಟಿಸಿ ತಮ್ಮ ಚಿತ್ರಗಳನ್ನೂ ಬರೆಸಿದ್ದಾರೆ. ಇದೆ ಕಾಲದಲ್ಲೇ ಕೆಂಪೇಗೌಡನೂ ಇದ್ದನು. ಹಾಗಾಗಿ ವೀರಣ್ಣ, ವಿರೂಪಣ್ಣರವರಂತೆಯೇ ಉನ್ನತ ಅಧಿಕಾರದ ದುಸ್ತು ಇದ್ದಿರಬೇಕೆಂದು ಭಾವಿಸಬಹುದು.

ಶಿವಗಂಗೆ ಮತ್ತು ಹಲಸೂರಿನ ದೇವಸ್ಥಾನಗಳಲ್ಲಿ ಭಕ್ತ ವಿಗ್ರಹಗಳನ್ನು ಕೆಂಪೇಗೌಡನದೆಂದು ತೋರಿಸುತ್ತಾರೆ.. ಇದು ಖಾಸಗಿ ಬಟ್ಟೆ ಧರಿಸಿರುವ ಚಿತ್ರ ಅಧಿಕಾರಿಯಾಗಿ ಅಲ್ಲ. ಲೇಪಾಕ್ಷಿಯ ವೀರಣ್ಣ ವಿರೂಪಣ್ಣರವರ ಚಿತ್ರ ಇಲ್ಲಿ ಕೊಡಲಾಗಿದೆ. ಕೆಂಪೇಗೌಡರೂ ಸಹ ಇದೇ ಬಗೆಯಲ್ಲಿ ಬಟ್ಟೆ ಧರಿಸಿದ್ದಿರಬಹುದು.

(ಅನುವಾದಕ)

ಗುಜರಾತ್ ನಲ್ಲಿ ಬಿಜೆಪಿಯ ವಿಷಪೂರಿತ–ದುರಾಚಾರಿ ಪ್ರಚಾರ

ಗುಜರಾತ್ ವಿಧಾನಸಭಾ ಚುನಾವಣೆಯ ಬಿಜೆಪಿ ಪ್ರಚಾರವು ಗುಜರಾತ್ ಹೇಗೆ ಹಿಂದುತ್ವ ಶಕ್ತಿಗಳಿಗೆ ಪ್ರಯೋಗ ಶಾಲೆಯಾಯಿತು ಮತ್ತು ಕಾರ್ಪೊರೇಟ್ –ಕೋಮುವಾದಿ ಶಾಮೀಲು ಅಕ್ಷವನ್ನು ಹೇಗೆ ರೂಪಿಸಲಾಯಿತು ಎಂಬುದರ ಒಳನೋಟವನ್ನು ನೀಡುತ್ತದೆ. ಅದು ನಂತರ ಗುಜರಾತ್ ಮಾದರಿ ಎಂದು ಕರೆಯಲ್ಪಟ್ಟಿತು.

ತಮ್ಮ ಚುನಾವಣಾ ಭಾಷಣಗಳಲ್ಲಿ ಅಮಿತ್ ಶಾ ಅವರ ಕೆಲವು ಪ್ರತಿಪಾದನೆಗಳು ಗುಜರಾತ್ ನ ಹೊರಗಿನ ವ್ಯಕ್ತಿಗಳಿಗೆ ಗಾಬರಿಗೊಳಿಸುತ್ತವೆ. ಆದರೆ ವಾಸ್ತವವನ್ನು ತಲೆಕೆಳಗಾಗಿ ಮತ್ತು ಸುಳ್ಳು ನಿರೂಪಣೆಯನ್ನು ನಿರ್ಮಿಸುವಲ್ಲಿ ಆರ್‌ಎಸ್‌ಎಸ್–ಬಿಜೆಪಿ ಹೇಗೆ ಯಶಸ್ವಿಯಾಗಿದೆ ಎಂಬುದನ್ನು ಅವರ ಕೆಟ್ಟ ಪ್ರಚಾರ ಪ್ರತಿಬಿಂಬಿಸುತ್ತದೆ. ಷಾ ಅವರ ಪ್ರಕಾರ, 2002 ರಲ್ಲಿ ಮುಸ್ಲಿಮರ ವಿರುದ್ಧ ನಡೆದ ಕೋಮು ಹತ್ಯಾಕಾಂಡವು ವಾಸ್ತವವಾಗಿ "ಗಲಭೆಕೋರರಿಗೆ" "ಪಾಠ ಕಲಿಸಿದ" ಉದಾಹರಣೆಯಾಗಿದೆ. ಆಗ ಮುಖ್ಯಮಂತ್ರಿಯಾಗಿದ್ದ ನರೇಂದ್ರ ಮೋದಿಯವರು ಇದನ್ನು ಬಲವಾಗಿ ಮೆಟ್ಟು ನಿಂತು ಅನುಷ್ಠಾನಗೊಳಿಸಿದ್ದರು. ಹಾಗಾಗಿಯೇ ಅಂದಿನಿಂದ ಗುಜರಾತ್‌ನಲ್ಲಿ ಶಾಶ್ವತ ಶಾಂತಿ ಸ್ಥಾಪನೆಯಾಗಿದೆ. ಇದು ಮುಸ್ಲಿಮರಿಗೆ ಸಂಬಂಧಿಸಿದಂತೆ ಸ್ಮಶಾನದಲ್ಲಿನ ಶಾಂತಿಯಾಗಿ ಪರಿಣಮಿಸಿದೆ.

ಹಿಂದಿನ ಕಾಂಗ್ರೆಸ್ ಸರ್ಕಾರಗಳು (1995ರ ಮೊದಲು) ಕೋಮು ಗಲಭೆಕೋರರ ಬಗ್ಗೆ ಮೃದು ಧೋರಣೆ ಹೊಂದಿದ್ದರು ಎಂದು ಶಾ ಆರೋಪಿಸಿದರು. ಹೀಗಾಗಿ, ಸ್ವಾತಂತ್ರ್ಯದ ನಂತರದ ಅವಧಿಯಲ್ಲಿ ಅಲ್ಪಸಂಖ್ಯಾತರ ವಿರುದ್ಧದ ಅತಿದೊಡ್ಡ ಹತ್ಯಾಕಾಂಡವನ್ನು ಪ್ರತಿಪಾದನೆ ಮಾಡಿಕೊಳ್ಳುತ್ತಾ, ಆ ಎಲ್ಲಾ ಸಂಭಾವ್ಯ ಗಲಭೆಕೋರರೆಲ್ಲರೂ ಮುಸ್ಲಿಂರೇ ಆಗಿದ್ದರು. ಪ್ರಸ್ತುತ, ಅವರನ್ನೆಲ್ಲ ದೃಢವಾಗಿ ನಿಗ್ರಹಿಸಲಾಗಿದೆ ಎಂದು ಚಿತ್ರಿಸಲಾಗಿದೆ.

ಈ ರೀತಿಯ ವಿಕೃತ ಚಿಂತನೆಯೇ ಬಿಲ್ಕಿಸ್ ಬಾನು ಮತ್ತು ಆಕೆಯ ಕುಟುಂಬ ಸದಸ್ಯರ ಅತ್ಯಾಚಾರಿಗಳು ಮತ್ತು ಕೊಲೆಗಾರರಿಗೆ ನೀಡಿದ್ದ ಜೀವಾವಧಿ ಶಿಕ್ಷೆಯನ್ನು ವಿನಾಯತಿ ನೀಡುವ ಮೂಲಕ ಜೈಲಿನಿಂದ ಬಿಡುಗಡೆ ಮಾಡಲು ಕಾರಣವಾಯಿತು. ಗುಜರಾತ್ ಸರ್ಕಾರದ ಪ್ರಕಾರ, ಅಮಿತ್ ಶಾ ಅವರ ಗೃಹ ಸಚಿವಾಲಯವೇ ಕ್ಷಮಾಪಣೆಯನ್ನು ಅನುಮೋದಿಸಿದೆ.

ಬಿಜೆಪಿಯ ಪ್ರಚಾರದ ಇನ್ನೊಂದು ಪಲ್ಲವಿ ರಾಗವೆದರೆ, ಸ್ವತಃ ಪ್ರಧಾನಿ ಮೋದಿಯವರ ಧ್ವನಿ. ವಿರೋಧ ಪಕ್ಷಗಳು ದೇಶ ದ್ರೋಹಿ ಅಥವಾ ಗುಜರಾತ್ ವಿರೋಧಿ ಶಕ್ತಿಗಳನ್ನು ಬೆಂಬಲಿಸುತ್ತವೆ. ಓಟ್ ಬ್ಯಾಂಕ್ ಮತ್ತು ಓಲೈಕೆಯ ಮೂಲಕ ಭಯೋತ್ಪಾದನೆಯನ್ನು ನೋಡುತ್ತಿರುವ ಕಾಂಗ್ರೆಸ್ ಮತ್ತು ಇತರ ಸಣ್ಣ ಪಕ್ಷಗಳ ಮೇಲೆ ಮೋದಿ ವಿಷಕಾರಿ ದಾಳಿ ನಡೆಸಿದ್ದಾರೆ. ಜಾತ್ಯತೀತ ಮತ್ತು ಅಲ್ಪಸಂಖ್ಯಾತರ ಹಕ್ಕುಗಳ ರಕ್ಷಣೆ ಎನ್ನುವುದು ಭಯೋತ್ಪಾದನೆಯ ಬಗ್ಗೆ ಮೃದುವಾಗಿರುತ್ತದೆ. ಆದ್ದರಿಂದ ಇದು ದೇಶ ದ್ರೋಹಿ ಯಾಗಿದೆ ಎಂದಿದ್ದಾರೆ ಮೋದಿಯವರು.

ಇಂತಹ ಮತಾಂಧ ದೃಷ್ಟಿಕೋನವೇ ತೀಸ್ತಾ ಸೆಟಲ್ವಾಡ್ ಅವರನ್ನು ಬಂಧಿಸಿ ಜೈಲಿಗಟ್ಟಲು







ಕಾರಣವಾಯಿತು. ಆದ್ದರಿಂದಲೇ, ಹತ್ಯಾಕಾಂಡದ ಸಂತ್ರಸ್ತರಿಗೆ ನ್ಯಾಯ ದೊರಕಿಸಿ ಕೊಡಲು ಮಾಜಿ ಡಿಜಿಪಿ ಆರ್ ಬಿ ಶ್ರೀಕುಮಾರ್ ನ್ಯಾಯಾಂಗ ಮಾರ್ಗವನ್ನು ಹಿಡಿದರು. ಪ್ರಸ್ತುತ ಪ್ರಚಾರವು ಮೋದಿಯವರು ಮುಖ್ಯಮಂತ್ರಿಯಾಗಿದ್ದ ಸಂಪೂರ್ಣ ಅವಧಿಯಲ್ಲಿ ಅನುಸರಿಸಿದ ವಿಕೃತ ವಿಧಾನವನ್ನು ಪ್ರತಿಧ್ವನಿಸುತ್ತದೆ.

ಪಾಕಿಸ್ತಾನ ಮತ್ತು ಭಯೋತ್ಪಾದನೆಯನ್ನು ಅಲ್ಪಸಂಖ್ಯಾತರೊಂದಿಗೆ ಸಂಯೋಜಿಸುವ ನಿರಂತರ ಪ್ರಯತ್ನ ಮಾಡಲಾಗುತ್ತಿದೆ. ಹಾಗೆಯೇ, ಜಾತ್ಯಾತೀತ ಪಕ್ಷಗಳನ್ನು ಅಲ್ಪಸಂಖ್ಯಾತರ ಓಲೈಕೆಗಾಗಿ ಆರೋಪಿಸುವುದು ಮತ್ತು ಅವರ ಮೃದು ಧೋರಣೆ ಭಯೋತ್ಪಾದನೆಗೆ ಸಹಕರಿಸುತ್ತದೆ ಎಂಬ ನಿರೂಪಣೆ ಮಾಡಲಾಗಿದೆ. ಇವರ ಈ ನಿರೂಪಣೆಯನ್ನು ಪ್ರಶ್ನಿಸುವವರೆಲ್ಲ ದೇಶ ದ್ರೋಹಿಗಳು ಮತ್ತು ಗುಜರಾತ್ ವಿರೋಧಿಗಳಾಗಿದ್ದಾರೆ ಎನ್ನಲಾಗಿದೆ.

ಗುಜರಾತಿನ ವಿಶಿಷ್ಟ ಬೆಳವಣಿಗೆಯ ಹೆಣೆದ ಕಥೆಯ ಹಿನ್ನೆಲೆಯು ಕಾರ್ಪೊರೇಟ್–ಕೋಮು ಆಡಳಿತದ ಹೊರಹೊಮ್ಮುವಿಕೆಗೆ ಕಾರಣವಾಗಿದೆ. ಇಡೀ ಕಾರ್ಪೊರೇಟ್ ವಲಯ ಮತ್ತು ಬಂಡವಾಳಶಾಹಿ ವರ್ಗವು ಒಟ್ಟುಗೂಡಿ ಮೋದಿ–ಬಿಜೆಪಿಯ ಗುಜರಾತ್ ಆಡಳಿತದ ಹಿಂದೆ ದೃಢವಾಗಿ ಶಾಮೀಲಾಗಿದ್ದು ಎದ್ದು ಕಾಣುತ್ತದೆ. ಮೋದಿ ಮತ್ತು ಬಿ.ಜೆ.ಪಿ. ಉದ್ಯಮದ ಪ್ರಗತಿಯು ಬೃಹತ್ ಪ್ರಮಾಣದಲ್ಲಿ ಗುರುತಿಸಲ್ಪಟ್ಟಿದೆ. ದೊಡ್ಡ ಉದ್ಯಮಿಗಳು ಮತ್ತು ವಾಣಿಜ್ಯ ಕುಳಗಳ ಕೈಯಲ್ಲಿ ಆಸ್ತಿ ಮತ್ತು ಸಂಪತ್ತು ಕೇಂದ್ರೀಕೃತವಾಗಿದೆ. ನಗರ ಮತ್ತು ಗ್ರಾಮೀಣ ಕಾರ್ಮಿಕರಿಗೆ ದೇಶದಲ್ಲಿಯೇ ಅತ್ಯಂತ ಕಡಿಮೆ ವೇತನವನ್ನು ಇಲ್ಲಿ ನೀಡಲಾಗುತ್ತಿದೆ. ಗುಜರಾತ್ ರಾಜ್ಯದ ಒಟ್ಟು ಆಂತರಿಕ ಉತ್ಪನ್ನ ಮತ್ತು ಉನ್ನತ ಮಟ್ಟದ ಬೆಳವಣಿಗೆಯ ನಡುವಿನ ವ್ಯತ್ಯಾಸ ಮತ್ತು ಕಡಿಮೆ ಮಟ್ಟದ ಸಾಮಾಜಿಕ ಸೂಚಕಗಳು ಸ್ಪಷ್ಟವಾಗಿ ಗುಜರಾತ್ ಮಾದರಿ ಬೆಳವಣಿಗೆಯ ಕಥನಕ್ಕೆ ಹಿಡಿದ ಕನ್ನಡಿಯಾಗಿವೆ.

ಬೆಲೆ ಏರಿಕೆ, ನಿರುದ್ಯೋಗ, ಶೈಕ್ಷಣಿಕ ಮತ್ತು ಆರೋಗ್ಯ ಸೌಲಭ್ಯಗಳ ಕೊರತೆಯಿಂದಾಗಿ ಬಡ ವರ್ಗಗಳು ಮತ್ತು ಸಾಮಾಜಿಕವಾಗಿ ತುಳಿತಕ್ಕೊಳಗಾದ ಗುಂಪುಗಳ ನಡುವಿನ ಅಸಮಾಧಾನವು ಚುನಾವಣಾ ಪ್ರಚಾರದ ಸಮಯದಲ್ಲಿ ಹೊರಹೊಮ್ಮಿವೆ. ಆದರೆ ಮೊದಲಿನಿಂದಲೂ ಅಸ್ತಿತ್ವದಲ್ಲಿರುವ ಕೋಮು ಧ್ರುವೀಕರಣವನ್ನು ಬಳಸಿಕೊಂಡು, ಹೊರಹೊಮ್ಮಿರುವ ಅಂತಹ ಅಸಮಧಾನ ಮತ್ತು ಕೋಪವನ್ನು ಮಂದಗೊಳಿಸಲು ಪ್ರಯತ್ನಿಸಲಾಗುತ್ತಿದೆ.

ಬಿಜೆಪಿಯ ಕೋಮು ಪ್ರಚಾರದ ಗುರಿ – ಮುಸ್ಲಿಂರು ಎಂಬುದು ಸ್ಪಷ್ಟ. ಅವರ ಜೀವನ ಮಟ್ಟ ದಟ್ಟ–ದರಿದ್ರ ಸ್ಥಿತಿಯಲ್ಲಿ ಮತ್ತು ಬಿಕಾರಿಗಾಳಾಗಿ ವಾಸಿಸುತ್ತಿರುವುದು ಹಲವಾರು

ನಗರಗಳಲ್ಲಿ, ಗೋಚರಿಸುವ ದೃಶ್ಯಗಳಾಗಿವೆ. ಮುಸ್ಲಿಂ ಪ್ರದೇಶಗಳು ಮೂಲಭೂತ ನಾಗರಿಕ ಸೌಲಭ್ಯಗಳಿಂದ ವಂಚಿತವಾಗಿ ಶೋಚನೀಯ ಸ್ಥಿತಿಯಲ್ಲಿವೆ.

ಇಂತಹ ವಿಷಕಾರಿ ದುಷ್ಟ–ಹಿಂದುತ್ವದ ಚುನಾವಣಾ ಪ್ರಚಾರ, ಮತ್ತು ಬಿಜೆಪಿಯ ಮತದಾರರನ್ನು ಸೆಳೆಯಲು ಮತ್ತು ಅದರ ಫಲಾನುಭವಿಗಳಿಗೆ ಇಂತಹ ಮಿಶ್ರಣ ಪ್ರಚಾರದ ಭರವಸೆಗಳ, ಪ್ರಯೋಜನಗಳು ಬಿಜೆಪಿಯ ಚುನಾವಣಾ ದಾರಿಯನ್ನು ಸುಗಮಗೊಳಿಸುತ್ತದೆ ಎಂಬ ಆಶಾಭಾವನೆ ಹೊಂದಲಾಗಿದೆ.

ವಿಷಪೂರಿತ ಕೋಮು ಪ್ರಚಾರವನ್ನು ಪರಿಶೀಲಿಸಲು ಅಲ್ಲಿ ಕಾನೂನು ಎಂಬುದು ಏನೂ ಇಲ್ಲ. ಹಿಂದಿನ ವಿಧಾನಸಭಾ ಚುನಾವಣೆಯಲ್ಲಿ ಮತ್ತು 2019 ರ ಲೋಕಸಭೆ ಚುನಾವಣೆಯಲ್ಲಿ ನರೇಂದ್ರ ಮೋದಿ ಮತ್ತು ಅಮಿತ್ ಶಾ ಅಪರಾಧಿಗಳಾಗಿದ್ದರು. ಆದಾಗ್ಯೂ, ಚುನಾವಣಾ ಆಯೋಗವು ಮಧ್ಯಪ್ರವೇಶಿಸಿ ನೀತಿ ಸಂಹಿತೆಯ ಪುನರಾವರ್ತಿತ ಉಲ್ಲಂಘನೆಗಳ ವಿರುದ್ಧ ಕ್ರಮ ಕೈಗೊಳ್ಳಲು ವಿಫಲವಾಯಿತು. ಆದ್ದರಿಂದಲೇ, ಇಂತಹ ವಿಷಪೂರಿತ ದುಷ್ಟ ಪ್ರಚಾರ ಗುಜರಾತಿನಲ್ಲಿ ಸರ್ವೆ ಸಾಮಾನ್ಯವಾಗಿದೆ.

ಗುಜರಾತ್‌ನಲ್ಲಿ ಈ ಚುನಾವಣಾ ಪ್ರಚಾರಕ್ಕೆ ಸಂಬಂಧಿಸಿದಂತೆ, ನಿವೃತ್ತ ಹಿರಿಯ ನಾಗರಿಕ ಸೇವಕ ಇಎಎಸ್ ಶರ್ಮಾ ಅವರು ಅಮಿತ್ ಶಾ ವಿರುದ್ಧ ಕ್ರಮ ಕೈಗೊಳ್ಳುವಂತೆ ದೂರು ನೀಡಿದ್ದರು. ಚುನಾವಣೆ ಮಾದರಿ ನೀತಿ ಸಂಹಿತೆಯನ್ನು ಉಲಂಘಿಸಿ ವಿಷಕಾರಿ ಭಾಷಣ ಮಾಡಿದ್ದಾರೆ. ಇವರ ವಿರುದ್ಧ ಭಾರತೀಯ ನಿಬಂಧನೆಗಳನ್ನು ಆಹ್ವಾನಿಸುವ, ದಂಡ ಸಂಹಿತೆಯನ್ನು ಬಳಸಬೇಕು ಎಂದು ಚುನಾವಣಾ ಆಯೋಗಕ್ಕೆ ಪತ್ರ ಬರೆದಿದ್ದರು. ಆದರೆ, ಆಯೋಗದಿಂದ ಯಾವುದೇ ಪ್ರತಿಕ್ರಿಯೆ ಬರಲಿಲ್ಲ.

ಇಂತಹ ವಿಷಯಗಳಲ್ಲಿ ಕಾನೂನು ಪರಿಪಾಲನೆಯ ಸ್ಥಾಪನೆ ಮಾಡ ಬೇಕಾದವರು ಕೇಂದ್ರದ ಗೃಹ ಸಚಿವರೇ ಆಗಿರುತ್ತಾರೆ. ಹಾಗಾಗಿಯೇ, ಅವರು ಏನು ಮಾಡಿದರು, ಗುಜರಾತ್ ನಲ್ಲಿ ಮಾತ್ರ ಎಲ್ಲಾ ನಡೆದು ಹೋಗುತ್ತದೆ.

ಅನು: ನಾಗರಾಜ ನಂಜುಂಡಯ್ಯ

ಇತಿಹಾಸದ ಉಲ್ಲಂಘನೆ

ಇಂದು ಇತಿಹಾಸದ ಉಲ್ಲಂಘನೆ ಎಷ್ಟು ತೀವ್ರತೆಯನ್ನು ಪಡೆದಿದೆ ಎಂದರೆ ನಂಜೇಗೌಡ ಮತ್ತು ಉರಿಗೌಡ ಎಂಬ ಇಬ್ಬರು ಒಕ್ಕಲಿಗರು 1799ರಲ್ಲಿ ಟಿಪ್ಪು ಸುಲ್ತಾನನನ್ನು ಗಾಯಗೊಳಿಸಿ ಕೊಂದಿದ್ದಾರೆ ಎಂದು ಬಿಂಬಿಸುವ ವಿಡಿಯೋ ಎಲ್ಲೆಲ್ಲೂ ಹರಿದಾಡುತ್ತಿದೆ. ಈ ಇಬ್ಬರು ವೀರ ಸೇನಾನಿಗಳು ಈಸ್ಟ್ ಇಂಡಿಯಾ ಕಂಪನಿಯ ಸೇನೆಗೆ ಸೇರಿದ ಸೈನಿಕರೇ ಆಗಿದ್ದಲ್ಲಿ ಅವರನ್ನು ಹೀರೋಗಳಂತೆ ಪರಿಗಣಿಸಬೇಕೋ ಅಥವಾ ಬ್ರಿಟೀಷರು ಅವರ ಶಕ್ತಿಯನ್ನು ಧಿಕ್ಕರಿಸಿ ಬಲವಾಗಿ ವಿರೋಧಿಸಿದ್ದ ಭಾರತದ ಒಂದು ಪ್ರಾಂತ್ಯದಲ್ಲಿ ಇನ್ನೂ ಗಟ್ಟಿಯಾಗಿ ತಳವೂರಲು ನೆರವಾದ ದೇಶ ವಿರೋಧಿಗಳೆಂದು ಪರಿಗಣಿಸಬೇಕೋ?

ಇಂದು ಗತಕಾಲವು ಅಪಾಯಕಾರಿ ನೆಲೆಯಾಗಿದ್ದು, ವೃತ್ತಿಪರ ಇತಿಹಾಸಕಾರರು ಇದನ್ನು ದಾಟಿ ಹೋಗಲು ಹಿಂಜರಿಯುತ್ತಿದ್ದಾರೆ. ನಮ್ಮ ನಿತ್ಯ ಜೀವನದಲ್ಲಿ ಎದುರುಗಾಣುವ ಅನಗತ್ಯ ವಸ್ತುಗಳ ಹಾಗೆಯೇ ನಮ್ಮ ಸುತ್ತಲೂ ಕ್ಷಿಪಣಿಗಳಂತೆ ಬಳಸಲಾಗುತ್ತಿರುವ ಇತಿಹಾಸದ ತುಣುಕುಗಳಿಗೆ ನಾವೂ ಒಗ್ಗಿಕೊಳ್ಳಬೇಕಿದೆ. ಈ ಅನಿಶ್ಚಿತ ಭವಿಷ್ಯದೊಂದಿಗೆ, ಅನುಕೂಲ ಇದ್ದವರು ದೂರ ದೇಶಗಳಿಗೆ ಸಂಶೋಧನೆಗಾಗಿ ಹೋಗಬಹುದು, ಉತ್ತಮ ಆತಿಥ್ಯವುಳ್ಳ ಐರ್ಲೆಂಡ್ಗೆ ಹೋಗಬಹುದು ಅಥವಾ ಬ್ರಿಟೀಷ್ ಲೈಬ್ರರಿಯಂತಹ ಸುರಕ್ಷಿತ ತಾಣಗಳನ್ನು ಆಶ್ರಯಿಸಬಹುದು. (ಟಿಪ್ಪು ಕುರಿತ ಬಹಳಷ್ಟು ಗ್ರಂಥಗಳು ಇಲ್ಲಿ, ಅವನ ಮಾಜಿ ಶತ್ರುಗಳ ಕೈಯ್ಯಲ್ಲಿ ಸುರಕ್ಷಿತವಾಗಿದೆ–ನವ ಭಾರತದಲ್ಲಿ ಆಕ್ರಮಣದಿಂದಲೂ ತಪ್ಪಿಸಿಕೊಂಡಿದೆ.). ಅನುಕೂಲ ಇಲ್ಲದವರು ಪ್ರಸಿದ್ಧ ಚಾರಿತ್ರಿಕ ತಾಣಗಳಲ್ಲಿರುವ ಕಲ್ಪನಾತ್ಮಕ ಪ್ರವಾಸಿ ಮಾರ್ಗದರ್ಶಕರೊಡನೆ ಸೇರಿಕೊಂಡು ಪುರಾತನ ಕಾಲದಲ್ಲಿ ಮನುಷ್ಯರು 35 ಅಡಿ ಎತ್ತರ ಇರುತ್ತಿದ್ದರು ಎಂದು ಪ್ರತಿಪಾದಿಸಬಹುದು. (ಲೇಪಾಕ್ಷಿಯಲ್ಲಿ ಮಾರ್ಗದರ್ಶಿಯೊಬ್ಬರು, ಸೀತೆಯ ಒಂದು ಪಾದ ಏಕೆ ಆರು ಅಡಿ ಉದ್ದ ಇದೆ ಎಂದು ಕೇಳಿದ್ದಕ್ಕೆ ಹೀಗೆ ಹೇಳಿದ್ದರು). ಕನಿಷ್ಟ ಇದರಿಂದ ನಾವು ಯಾವುದೇ ಜನರಿಗೆ, ರಚನೆಗಳಿಗೆ ಹಾನಿ ಉಂಟುಮಾಡದೆ ಇರಬಹುದು.

(ಮೂಲ ಲೇಖಕಿ ಜಾನಕಿ ನಾಯರ್–ಜೆಎನ್ಯು ಇತಿಹಾಸ ಅಧ್ಯಯನ ಕೇಂದ್ರದ ನಿವೃತ್ತ ಪ್ರಾಧ್ಯಾಪಕರು)

ಮಂಗಳೂರುಃ ಕುಕ್ಕರ್ ಸ್ಫೋಟದ ಸುತ್ತ ಒಂದು ನೋಟ... ಪುಟ 3 ರಿಂದ

ನ ಬಗ್ಗೆ ಇದೊಂದು ನಕಲಿ ಆಗಿರುವ ಸಾಧ್ಯತೆಯಿದೆ ಎಂದು ಪೋಲೀಸ್ ಮೂಲಗಳು ಅನುಮಾನ ವ್ಯಕ್ತಪಡಿಸಿವೆ. ಈ ಪೋಸ್ಟಿನ ಸತ್ಯಾಸತ್ಯತೆಯನ್ನು ಪರಿಶೀಲಿಸಲಾಗುವುದು ಎಂಬುದಾಗಿ ಎಡಿಜಿಪಿ ಅಲೋಕ್ ಕುಮಾರ್ ಅವರು ಹೇಳಿದ್ದಾರೆ. ಇದೊಂದು ತನಿಖೆಯ ದಿಕ್ಕುತಪ್ಪಿಸಲು ಹೂಡಿದ ತಂತ್ರ ವಾಗಿರಬಹುದೆಂದು ಸಂಶಯಿಸಿದ್ದಾರೆ. ಇದೀಗ ಘಟನೆ ನಡೆದು ಹಲವು ದಿವಸಗಳಾಗಿವೆ. ಆಸ್ಪತ್ರೆಯಲ್ಲಿರುವ ಶಾರೀಕನು ಚಿಕಿತ್ಸೆಗೆ ಸ್ಪಂದಿಸುವನಾದರೂ ಚೇತರಿಸಿಕೊಂಡಿಲ್ಲ ಎಂಬುದಾಗಿ ಮಾಹಿತಿಯಿದೆ. ಘಟನೆ ನಡೆದ ದಿನ ಶಾರೀಕನು ನೀಡಿರುವ ಅರೆಬರೆ ಮಾಹಿತಿಯ ನಂತರ ಉಸಿರಾಟದ ತೊಂದರೆಯಿಂದ ಮಾತಾಡಲು ಸಾಧ್ಯವಾಗದ ಕಾರಣಕ್ಕೆ ಆತನಿಂದ ಮಾಹಿತಿ ಪಡೆಯಲು ಸಾಧ್ಯವಾಗಿಲ್ಲ. ಇದುವರೆಗಿನ ಮಾಹಿತಿಗಳು ಹೊರಗಿನಿಂದ ಕಲೆ ಹಾಕಲಾಗಿದೆ ಎಂಬುದು ವೇದ್ಯವಾಗುತ್ತದೆ.

ಜಿಲ್ಲೆಯಲ್ಲಿ ದ್ವೇಷದ ಕಿಡಿ ಹಚ್ಚಿ ರಾಜಕೀಯ ದುರ್ಲಾಭ ಪಡೆಯುವ ಪ್ರಯತ್ನಗಳು ನಡೆಯುತ್ತಿವೆ. ಬೆಂಕಿ ಭಾಷಣದ ಕಲ್ಲಡ್ಕ ಪ್ರಭಾಕರ ಭಟ್, ಸಚಿವರಾದ ಸುನೀಲ್, ಶೋಭಾ ಕರಂದ್ಲಾಜೆ ಮುಂತಾದವರು ನೀಡಿರುವ ಹೇಳಿಕೆಗಳು ಶಾಂತಿ ಸುವ್ಯವಸ್ಥೆಗೆ ಅನುಕೂಲವಾಗಿಲ್ಲ. ಕರಾವಳಿಯಲ್ಲಿ ಉಗ್ರವಾದವನ್ನು ಮತ್ತು ಕೋಮುವಾದವನ್ನು ಸಮಾನ ರೀತಿಯಲ್ಲಿ ವಿರೋಧಿಸುವ ಮನಸ್ಥಿತಿ ಕಡಿಮೆಯಾಗಿ ದಶಕಗಳೇ ಕಳೆದಿವೆ. ಕೆಲವೊಂದು ಮಾಧ್ಯಮಗಳು ಕೂಡಾ ನ್ಯಾಯಪರತೆ ತೋರದಿರುವುದು ದುರದೃಷ್ಟಕರ.

ಪೊಲೀಸ್ ಕಮೀಷನರ್ ರವರು ಮತ್ತೊಮ್ಮೆ ಸ್ಪಷ್ಟ ಸಂದೇಶ ನೀಡಿ–"ಊಹಾ ಪೋಹ ಸುದ್ದಿಗಳಿಗೆ ಜನತೆ ಕಿವಿಗೊಡಬೇಡಿ. ಕುಕ್ಕರ್ ಸ್ಫೋಟ ಪ್ರಕರಣದ ಆರೋಪಿ ಶಾರೀಕನನ್ನು ಇನ್ನು ಕೂಡಾ ತನಿಖೆಗೊಳಪಡಿಸಲು ಸಾಧ್ಯವಾಗಿಲ್ಲ" ಎಂದಿದ್ದಾರೆ. ಒಟ್ಟಿನಲ್ಲಿ ಶಾಂತಿಪ್ರಿಯ ಜನರಿಗೆ ಕರಾವಳಿ ಪ್ರದೇಶವು ಕರಾಳವಾಗದಿದ್ದರೆ ಸಾಕೆಂಬುದು ಎಲ್ಲರ ಆಶಯವಾಗಿದೆ.

–ಬಾಬು ಪಿಲಾರ್

ಟೋಲ್ ಸಂಗ್ರಹ ಎನ್ನುವ ಹಗಲು ದರೋಡೆ

ರಸ್ತೆ ಬಳಕೆದಾರರಿಂದ ಟೋಲ್ ಸಂಗ್ರಹವೇ ಒಂದು ಸುಲಿಗೆ



ಸಿ.ಸಿದ್ದಯ್ಯ

ಟೋಲ್ ಶುಲ್ಕದ ಪರಿಕಲ್ಪನೆಯೇ ತಪ್ಪು. ಇದು ಜನಸಾಮಾನ್ಯರ ಮೇಲೆ ಹೇರಿದ ಎರಡು ರೀತಿಯ ತೆರಿಗೆ. ಸರ್ಕಾರವು ಪ್ರತಿ ಲೀಟರ್ ಪೆಟ್ರೋಲ್ ಮತ್ತು ಡೀಸೆಲ್‌ಗೆ 8 ರೂಪಾಯಿಗಳ ರಸ್ತೆ ತೆರಿಗೆಯನ್ನು ವಿಧಿಸುತ್ತದೆ ಮತ್ತು ಅದೇ ವಾಹನಗಳು ರಸ್ತೆಗಳನ್ನು ಬಳಸುವುದಕ್ಕಾಗಿ ಮತ್ತೆ ಟೋಲ್‌ಗಳನ್ನು ಸಂಗ್ರಹಿಸುತ್ತದೆ. ಇದು ಮೂಲಭೂತವಾಗಿ ತಪ್ಪು. ರಸ್ತೆ ಅಭಿವೃದ್ಧಿಗಾಗಿ ಸರ್ಕಾರ ಡೀಸೆಲ್ ಮತ್ತು ಪೆಟ್ರೋಲ್ ಮೇಲೆ ಸೆಸ್ ವಿಧಿಸುತ್ತದೆ, ಆದರೆ ರಸ್ತೆ ಬಳಕೆದಾರರಿಂದ ಟೋಲ್ ಸಂಗ್ರಹಿಸುವ ಅಗತ್ಯವಿಲ್ಲ. ಇದು ಸರ್ಕಾರದಿಂದ ಸಾರ್ವಜನಿಕರ ಸುಲಿಗೆಯಾಗಿದೆ.

'ಪ್ರವಾಸೋದ್ಯಮ ಮತ್ತು ಸಂಸ್ಕೃತಿಯ ಸಂಸದೀಯ ಸ್ಥಾಯಿ ಸಮಿತಿ'ಯ ಅಧ್ಯಕ್ಷರಾಗಿದ್ದ ಸಿಪಿಐ(ಎಂ) ನಾಯಕ ಸೀತಾರಾಮ್ ಯೆಚೂರಿಯವರು 2013ರ ಆಗಸ್ಟ್ 27 ರಂದು ಸಂಸತ್ತಿನಲ್ಲಿ ಮಾತನಾಡುತ್ತ ರಸ್ತೆ ಬಳಕೆದಾರರಿಂದ ಟೋಲ್ ಸಂಗ್ರಹ ಮಾಡುವುದನ್ನು ಬಲವಾಗಿ ವಿರೋಧಿಸಿದ್ದರು. ಮತ್ತು ಇದನ್ನು ತಕ್ಷಣವೇ ರದ್ದುಗೊಳಿಸಬೇಕು ಎಂದು ಅವರು ಒತ್ತಾಯಿಸಿದ್ದರು. ಸಂಸತ್ತಿನಲ್ಲಿ "ರಾಷ್ಟ್ರೀಯ ರಾಜಧಾನಿ ಪ್ರದೇಶದಲ್ಲಿ ರಸ್ತೆ ಸಾರಿಗೆ ನಿರ್ವಹಣೆ: ಸಮಸ್ಯೆಗಳು ಮತ್ತು ಸವಾಲುಗಳು" ಕುರಿತು ತಮ್ಮ ವರದಿಯನ್ನು ಮಂಡಿಸಿದ ಯೆಚೂರಿ, ಪೆಟ್ರೋಲಿಯಂ ಉತ್ಪನ್ನಗಳ ಮೇಲಿನ ಸೆಸ್ ಮತ್ತು ಟೋಲ್ ಶುಲ್ಕವನ್ನು ಸಂಗ್ರಹಿಸುವುದು ಎರಡು ತೆರಿಗೆಗೆ ಸಮಾನವಾಗಿದೆ ಎಂದು ಹೇಳಿದ್ದರು.

ಪ್ರತಿ ಲೀಟರ್ ಪೆಟ್ರೋಲ್ ಮತ್ತು ಡೀಸೆಲ್ ಮೇಲೆ ಕೇಂದ್ರ ಸರ್ಕಾರ ರಸ್ತೆ ಮತ್ತು ಮೂಲಸೌಕರ್ಯಗಳ ಅಭಿವೃದ್ಧಿ ಹೆಸರಿನಲ್ಲಿ 8 ರೂ ತೆರಿಗೆ ಸಂಗ್ರಹ ಮಾಡುತ್ತಿದೆ. ಈ ರಸ್ತೆ ತೆರಿಗೆ ಅಬ್ಕಾರಿ ತೆರಿಗೆಯ ಒಂದು ಭಾಗವಾಗಿದೆ. ಇಂದು (ಡಿಸೆಂಬರ್-1, 2022) ಪೆಟ್ರೋಲ್ ಮತ್ತು ಡೀಸಲ್ ನ ಪ್ರತಿ ಲೀಟರ್ ಮೇಲೆ ಕ್ರಮವಾಗಿ 19.90 ರೂ. ಮತ್ತು 15.80 ರೂ ಅಬ್ಕಾರಿ ತೆರಿಗೆ ಇದೆ. ಪೆಟ್ರೋಲ್ ಮೇಲಿನ ಅಬಕಾರಿ ಸುಂಕವು 2014 ರಲ್ಲಿ ಲೀಟರ್‌ಗೆ 9.48 ರೂ. ಮತ್ತು ಡೀಸೆಲ್‌ಗೆ 3.56 ರೂ. ಇತ್ತು. 2013 ರಲ್ಲಿ ಅಬಕಾರಿ ತೆರಿಗೆಯೊಳಗಿನ ರಸ್ತೆ ಮತ್ತು ಮೂಲಸೌಕರ್ಯಗಳ ತೆರಿಗೆ ರೂ 2 ಮಾತ್ರ.

ರೂ. 2 ಲಕ್ಷ ಕೋಟಿ ಆದಾಯ:

ಪೆಟ್ರೋಲ್ ಮತ್ತು ಡೀಸಲ್ ಮೇಲಿನ ಅಬ್ಕಾರಿ ತೆರಿಗೆಯೊಳಗೆ ಸೇರಲ್ಪಟ್ಟ ರಸ್ತೆ ತೆರಿಗೆ ಒಂದರಿಂದಲೇ ಕೇಂದ್ರ ಸರ್ಕಾರಕ್ಕೆ ಬರುವ ವಾರ್ಷಿಕ ಆದಾಯ ಎಷ್ಟು ಎಂಬುದನ್ನು ನೋಡೋಣ. ಇತ್ತೀಚಿನ ಮಾಹಿತಿಗಳ ಪ್ರಕಾರ ಭಾರತದಲ್ಲಿ ಪ್ರತಿದಿನ ಸರಾಸರಿ 47 ಲಕ್ಷ ಬ್ಯಾರಲ್ ಪೆಟ್ರೋಲಿಯಂ ಬಳಕೆಯಾಗುತ್ತಿದೆ. 1 ಬ್ಯಾರಲ್ ಎಂದರೆ 159 ಲೀಟರ್. ಒಂದು ಲೀಟರ್ ಗೆ 8 ರೂ. ನಂತೆ ಒಂದು ಬ್ಯಾರಲ್ ಗೆ 1272 ರೂ., 47 ಲಕ್ಷ ಬ್ಯಾರಲ್ ಅಂದರೆ ಸರಿಸುಮಾರು 70 ಕೋಟಿ ಲೀಟರ್. ಇದರಿಂದ 560 ಕೋಟಿ ರೂಪಾಯಿ ಕೇವಲ ಪೆಟ್ರೋಲಿಯಂ ಪದಾರ್ಥಗಳ ಮೇಲಿನ ರಸ್ತೆ ತೆರಿಗೆ ಒಂದರಿಂದಲೇ ಪ್ರತಿ ದಿನ ಸರ್ಕಾರಕ್ಕೆ ಆದಾಯ ಬರುತ್ತಿದೆ. ವರ್ಷಕ್ಕೆ ಇದು ರೂ. 2 ಲಕ್ಷ ಕೋಟಿ ಆದಾಯ. (2020-21 ರಲ್ಲಿ ರಸ್ತೆ ಮತ್ತು ಮೂಲಸೌಕರ್ಯ ತೆರಿಗೆ 8 ರೂ ಸೇರಿರುವ ಅಬ್ಕಾರಿ ತೆರಿಗೆಯಿಂದ ಸರ್ಕಾರಕ್ಕೆ ಬಂದ ಆದಾಯ 3,71,908 ಕೋಟಿ ರೂಗಳು.

ಪೆಟ್ರೋಲಿಯಂ ಮೇಲಿನ ತೆರಿಗೆ ಅಲ್ಲದೆ ರಾಜ್ಯ ಸರ್ಕಾರಗಳೂ ವಾಹನಗಳ ಮೇಲೆ ರಸ್ತೆ ತೆರಿಗೆ ವಸೂಲಿ ಮಾಡುತ್ತಿವೆ. ಜನತೆ ಖರೀದಿಸುವ ಪ್ರತಿಯೊಂದು ವಸ್ತುಗಳ ಮೇಲೂ ಶೇ 5 ರಿಂದ 28 ರವರೆಗೆ ತೆರಿಗೆ ಇದೆ. ಜನರು ಪಡೆಯುವ ಪ್ರತಿಯೊಂದು ಸೇವೆಯ ಮೇಲೂ ಸೇವಾ ತೆರಿಗೆ ಇದೆ.

ನವ-ಉದಾರೀಕರಣ ನೀತಿ ಮತ್ತು ಟೋಲ್:

ಸಾರ್ವಜನಿಕರು ರಸ್ತೆ ಮತ್ತು ಮೂಲಸೌಕರ್ಯಗಳ ಅಭಿವೃದ್ದಿಗೆಂದು ಇಷ್ಟೆಲ್ಲಾ ಹಣ ಕೊಡುತ್ತಿದ್ದರೂ ರಸ್ತೆ ಬಳಕೆ ಮಾಡಲು ಮತ್ತೊಮ್ಮ ಟೋಲ್ ಶುಲ್ಕ ಏಕೆ ಕೊಡಬೇಕು ಎಂಬ ಪ್ರಶ್ನೆ ಮೂಡುತ್ತದೆ. ಇದು ಭಾರತ ಸರ್ಕಾರದ ನವ ಉದಾರೀಕರಣದ ಒಂದು ಭಾಗ. ಸರಕು ಮತ್ತು ಸೇವಾ ವಲಯವನ್ನು ಸಂಪೂರ್ಣವಾಗಿ ಖಾಸಗಿ ಬಂಡವಾಳಗಾರರಿಗೆ ಒಪ್ಪಿಸಬೇಕು. ಇದರಲ್ಲಿ ಸರ್ಕಾರದ ಪಾತ್ರ ಇರಬಾರದು. ಸರ್ಕಾರ ಯಾವುದೇ ಸರಕು ಉತ್ಪನ್ನಗಳಲ್ಲಿ ತೊಡಗಬಾರದು. ಅಂದರೆ, ಸರ್ಕಾರಿ ಸ್ವಾಮ್ಯದ ಎಲ್ಲಾ ಉದ್ಯಮಗಳನ್ನು ಖಾಸಗಿ ಬಂಡವಾಳಗಾರರಿಗೆ ಒಪ್ಪಿಸಬೇಕು. ಉದ್ಯಮ ನಡೆಸುವುದು ಸರ್ಕಾರದ ಕೆಲಸವಲ್ಲ. ಸೇವೆ ಒದಗಿಸುವುದು ಸರ್ಕಾರದ ಕೆಲಸವಲ್ಲ. ಇವೆಲ್ಲವನ್ನೂ ಖಾಸಗಿ ಬಂಡವಾಳಗಾರರು ನೋಡಿಕೊಳ್ಳುತ್ತಾರೆ ಎನ್ನುತ್ತಾರೆ ಮುಕ್ತ ಆರ್ಥಿಕ ನೀತಿಗಳನ್ನು ಬೆಂಬಲಿಸುವ ಬಲಪಂಥೀಯರು.

ರಸ್ತೆ ನಿರ್ಮಾಣದಲ್ಲಿ ಖಾಸಗಿ ಸಹಭಾಗಿತ್ವದಲ್ಲಿ ಬಂಡವಾಳ ಹೂಡಿಕೆ, ಟೋಲ್ ಸಂಗ್ರಹ ಇವೆಲ್ಲವೂ ನವ-ಉದಾರೀಕರಣದ ಒಂದು ಭಾಗ. 1991 ರಲ್ಲಿ ಪ್ರಧಾನಿ ಪಿ.ವಿ.ನರಸಿಂಹರಾವ್ ಸರ್ಕಾರ ಆರ್ಥಿಕ ಉದಾರೀಕರಣ ನೀತಿಯನ್ನು ಒಪ್ಪಿಕೊಂಡಿತು. ನಂತರ ಭಾರತ ಸರ್ಕಾರವು ಹೆದ್ದಾರಿಗಳು, ಬಂದರುಗಳು ಮತ್ತು ರೈಲ್ವೆಗಳಂತಹ ಸಾರ್ವಜನಿಕ ಮೂಲಸೌಕರ್ಯ ಯೋಜನೆಗಳನ್ನು ಅಭಿವೃದ್ಧಿಪಡಿಸಲು BOT ಯೋಜನೆಯ ಒಪ್ಪಂದದ ವ್ಯವಸ್ಥೆಯನ್ನು ಅಳವಡಿಸಿಕೊಂಡಿದೆ. ಸಾರ್ವಜನಿಕ-ಖಾಸಗಿ ಪಾಲುದಾರಿಕೆ (PPP) ಮತ್ತು ಬಿಲ್ಡ್ ಆಪರೇಟ್ ಮತ್ತು ಟ್ರಾನ್ಸ್‌ಫರ್ (BOT) ಮಾದರಿಯು ಸಾರ್ವಜನಿಕ ಮೂಲಸೌಕರ್ಯ ಯೋಜನೆಗಳ ಅಭಿವೃದ್ಧಿಯಲ್ಲಿ ವ್ಯಾಪಕವಾಗಿ ಬಳಸಲಾಗುತ್ತಿದೆ, ಸಾರಿಗೆ, ವಿದ್ಯುತ್ಶಕ್ತಿ, ದೂರಸಂಪರ್ಕ, ರಸ್ತೆಗಳು, ಮತ್ತು ನೀರು ಸರಬರಾಜು ವ್ಯವಸ್ಥೆಗಳು, ಇತ್ಯಾದಿ ವಲಯಗಳಲ್ಲಿ ಖಾಸಗಿ ಹೂಡಿಕೆಗೆ ಅವಕಾಶ ಕೊಡಲಾಗಿದೆ.

ವಿವಿಧ ಸಾರ್ವಜನಿಕ ಮೂಲಸೌಕರ್ಯ ಯೋಜನೆಗಳಲ್ಲಿ ಖಾಸಗಿ ವಲಯದ ಭಾಗವಹಿಸುವಿಕೆಯನ್ನು ಉತ್ತೇಜಿಸಲು ಸರ್ಕಾರವು ಖಾಸಗಿ ಬಂಡವಾಳಗಾರರಿಗೆ ಅನುಕೂಲವಾಗುವಂತೆ ದಿನದಿಂದ ದಿನಕ್ಕೆ ಹಲವಾರು ಉಪಕ್ರಮಗಳನ್ನು ತೆಗೆದುಕೊಳ್ಳುತ್ತಿದೆ. ಸ್ಥಿರ ಸ್ಥೂಲ ಆರ್ಥಿಕ ಚೌಕಟ್ಟು, ಹೂಡಿಕೆದಾರರ ಪರವಾದ ನೀತಿಗಳು, ಸುಸ್ಥಿರ ಯೋಜನೆ ಆದಾಯಗಳು, ನೀತಿಗಳ ಪಾರದರ್ಶಕತೆ ಮತ್ತು ಸ್ಥಿರತೆ, ಪರಿಣಾಮಕಾರಿ ನಿಯಂತ್ರಣ ಮತ್ತು PPP ಮತ್ತು BOT ಮೂಲಸೌಕರ್ಯ ಯೋಜನೆಗಳ ಯಶಸ್ಸಿಗೆ ಅನುಕೂಲ ಮಾಡಿಕೊಡಲು ಕಾರ್ಮಿಕ ಕಾನೂನುಗಳ ತಿದ್ದುಪಡಿ ಮಾಡಲಾಗಿದೆ. ಆ ಮೂಲಕ ಕಾರ್ಮಿಕರ ಚೌಕಾಸಿ ಹಕ್ಕುಗಳನ್ನು ಕಸಿದುಕೊಂಡು ಕಾರ್ಮಿಕರ ಶೋಷಣೆಗೆ ಮುಕ್ತ ಅವಕಾಶ ಕೊಡಲಾಗಿದೆ. ಮತ್ತು ಕಾರ್ಪೋರೇಟ್ ಆಡಳಿತಕ್ಕೆ ಅನುಕೂಲಕರವಾದ ಮೂಲಭೂತ ಸೌಲಭ್ಯಗಳನ್ನು ಒದಗಿಸಲು ಸರ್ಕಾರ ಕ್ರಮ ಕೈಗೊಂಡಿದೆ.

ಸರ್ಕಾರಿ ಕಂಪನಿಗಳನ್ನು ಖಾಸಗೀಕರಣಗೊಳಿಸುವುದು,. ಖಾಸಗಿಯವರ ಪಾಲುದಾರಿಕೆ ಹೆಚ್ಚಿಸುವ ಮೂಲಕ ಸರ್ಕಾರದ ಮೇಲಿನ ಹೊಣೆಯನ್ನು ಕಡಿಮೆ ಮಾಡುವುದು, ಆರ್ಥಿಕತೆಯಲ್ಲಿ ಸಾರ್ವಜನಿಕ ವಲಯದ ಗಾತ್ರ ಮತ್ತು ಒಳಗೊಳ್ಳುವಿಕೆಯನ್ನು ಕಡಿಮೆ ಮಾಡುವುದು ಸರಕಾರದ ಉದ್ದೇಶವಾಗಿದೆ. ಖಾಸಗಿ ವಲಯಕ್ಕೆ ಮುಕ್ತ ಅವಕಾಶ ಕೊಡುವುದರಿಂದಾಗಿ ಕೌಶಲ್ಯ ಮತ್ತು ಉತ್ಪಾದನೆಯನ್ನು ಸುಧಾರಿಸುವುದರೊಂದಿಗೆ ಖಾಸಗಿ ವಲಯಗಳಲ್ಲಿನ ಸ್ಪರ್ಧೆಯನ್ನು ಬಲಪಡಿಸುವ ಮೂಲಕ ಆರ್ಥಿಕ ಬೆಳವಣಿಗೆಯನ್ನು ವೇಗಗೊಳಿಸುತ್ತದೆ ಎಂದು ಸರ್ಕಾರ ಹೇಳುತ್ತಿದೆ.

ರಾಷ್ಟ್ರೀಯ ಹೆದ್ದಾರಿ ಅಭಿವೃದ್ಧಿ ಯೋಜನೆ:

ಕಡಿಮೆ ಅವಧಿಯಲ್ಲಿ ದೊಡ್ಡ ರಸ್ತೆ ಜಾಲವನ್ನು ಅಭಿವೃದ್ಧಿಪಡಿಸಲು 'ರಾಷ್ಟ್ರೀಯ ಹೆದ್ದಾರಿ ಅಭಿವೃದ್ಧಿ ಯೋಜನೆ' (NHDP) 1997 ರಲ್ಲಿ ಪ್ರಾರಂಭಿಸಲಾಯಿತು. ಈ ಕಾಯಿದೆಯು ಖಾಸಗಿ ವಲಯಗಳಿಗೆ ಹೊಸ ರಸ್ತೆ ವ್ಯವಸ್ಥೆಗಳನ್ನು ನಿರ್ಮಿಸಲು, ನಿರ್ವಹಿಸಲು ಮತ್ತು ನಂತರ ಟೋಲ್ ಸಂಗ್ರಹದ ಮೂಲಕ ಮಾಡುವ ವೆಚ್ಚವನ್ನು ಮರುಪಡೆಯಲು ಪ್ರಮುಖ ಮೂಲಸೌಕರ್ಯಗಳ ಮೇಲೆ ನಿಯಮಗಳನ್ನು ರೂಪಿಸಿತು.

ಮುಂದುವರಿದ ಭಾಗವಾಗಿ 2009 ರಲ್ಲಿ ಭಾರತ ಸರ್ಕಾರವು (GOI) PPP ಯೋಜನೆಗಳ ಸೂತ್ರೀಕರಣ, ಮೌಲ್ಯಮಾಪನ ಮತ್ತು ಅನುಮೋದನೆಯ ಕುರಿತು ಮಾರ್ಗದರ್ಶಿ ಸೂತ್ರವನ್ನು ಪರಿಚಯಿಸಿತು, ಇದು ನೀತಿಯ ಉದ್ದೇಶಗಳನ್ನು ವಿವರಿಸುತ್ತದೆ, ಹಾಗೆಯೇ ಸಾರ್ವಜನಿಕ ಮೂಲಸೌಕರ್ಯದಲ್ಲಿ ಖಾಸಗಿ ವಲಯದ ಭಾಗವಹಿಸುವಿಕೆಯ ಕಾರ್ಯವಿಧಾನದ ಅನುಷ್ಠಾನದ ಪ್ರಕ್ರಿಯೆಯನ್ನು ವಿವರಿಸುತ್ತದೆ.

ಅವಧಿ ಮುಗಿದ ನಂತರವೂ ಟೋಲ್ ಸಂಗ್ರಹ ಮುಂದುವರಿಕೆ:

ಬಿಲ್ಡ್, ಆಪರೇಟ್ ಮತ್ತು ಟ್ರಾನ್ಸ್‌ಫರ್ (ಬಿಒಟಿ) ಆಧಾರದ ಮೇಲೆ ಖಾಸಗಿ ಕಂಪನಿಗಳ ಜೊತೆ ಮಾಡಿಕೊಂಡ ಒಪ್ಪಂದದ ಅವಧಿ ಮುಗಿದ ನಂತರ ರಾಷ್ಟ್ರೀಯ ಹೆದ್ದಾರಿಗಳಲ್ಲಿ ಟೋಲ್ ಸಂಗ್ರಹವನ್ನು ನಿಲ್ಲಿಸಲಾಗುವುದಿಲ್ಲ ಎಂದು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ (ಎನ್‌ಎಚ್‌ಎಐ) ಮದ್ರಾಸ್ ಹೈಕೋರ್ಟ್‌ಗೆ ತಿಳಿಸಿದೆ. ವೈಯಕ್ತಿಕ ಯೋಜನೆಗಳ ಬಂಡವಾಳ ವೆಚ್ಚವನ್ನು ಪೂರ್ಣವಾಗಿ ಮರುಪಡೆಯುವವರೆಗೆ ಸಂಗ್ರಹಣೆಯನ್ನು ಮುಂದುವರಿಸಲು ಅರ್ಹತೆ ಇದೆ ಎಂದು ಪ್ರಾಧಿಕಾರವು ಹೇಳಿಕೊಂಡಿದೆ,

ಪುಟ 10 ಕ್ಕೆ


ಟೋಲ್ ಸಂಗ್ರಹಕ್ಕೆ ಪಾರ್ಲಿಮೆಂಟರಿ ಸ್ಥಾಯಿ ಸಮಿತಿ ವಿರೋಧ



ಸಿಪಿಐ(ಎಂ) ಪಕ್ಷದ ನಾಯಕ ಸೀತಾರಾಮ್ ಯೆಚೂರಿಯವರು ಅಧ್ಯಕ್ಷರಾಗಿದ್ದ 'ಸಾರಿಗೆ, ಪ್ರವಾಸೋದ್ಯಮ ಮತ್ತು ಸಂಸ್ಕೃತಿ ಇಲಾಖೆಗೆ ಸಂಬಂಧಿಸಿದ ಪಾರ್ಲಿಮೆಂಟರಿ ಸ್ಥಾಯಿ ಸಮಿತಿ(2007-08)ರಲ್ಲಿ ಸೇತುವೆಗಳು ಮತ್ತು ರಾಷ್ಟ್ರೀಯ ಹೆದ್ದಾರಿಗಳ ಬಳಕೆಗಾಗಿ ಸಾರ್ವಜನಿಕರಿಂದ ಪಡೆಯುವ ಟೋಲ್ ಶುಲ್ಕ ವಸೂಲಿ ನಿಲ್ಲಿಸಬೇಕು ಎಂದು ಶಿಫಾರಸ್ಸು ಮಾಡಿತ್ತು. ಪೆಟ್ರೋಲಿಯಂ ಪದಾರ್ಥಗಳ ಮೇಲೆ ಕೇಂದ್ರ ಸರ್ಕಾರ 2 ರೂ. ರಸ್ತೆ ತೆರಿಗೆ ವಿಧಿಸುತ್ತಿದೆ. ರಸ್ತೆ ಬಳಕೆಗೆ ಮತ್ತೊಮ್ಮೆ ಶುಲ್ಕ ವಿಧಿಸುವುದು ಜನರ ಮೇಲೆ ವಿಧಿಸುತ್ತಿರುವ ಎರಡು ರೀತಿಯ ತೆರಿಗೆ. ಎಂದು ಸಮಿತಿ ಹೇಳಿತ್ತು.

ಯಾವುದೇ ರಾಷ್ಟ್ರೀಯ ಹೆದ್ದಾರಿ ನಿರ್ಮಾಣವಾದಾಗಲೂ ಅದು ರಾಷ್ಟ್ರೀಯ ಹೆದ್ದಾರಿಗೆ ಹೊಂದಿಕೊಂಡಿರುವ ಭೂಮಿಗೆ ಭಾರಿ ಮೌಲ್ಯ ಹೆಚ್ಚುತ್ತದೆ. ಮತ್ತು ಇದು ಹಲವು ಪ್ರಯೋಜನಗಳಿಗೆ ಕಾರಣವಾಗುತ್ತದೆ. ಇದರ ಲಾಭವನ್ನು ಖಾಸಗಿಯವರು ಮಾತ್ರ ಅನುಭವಿಸುತ್ತಿದ್ದಾರೆ. ಭೂಮಿಯ ಹೆಚ್ಚಿದ ಮೌಲ್ಯದ ಪ್ರಯೋಜನವನ್ನು ಸರ್ಕಾರವೇ ಪಡೆಯಬೇಕು. ಏಕೆಂದರೆ ಆ ಆಸ್ತಿಯ ಮೌಲ್ಯವರ್ಧನೆಗೆ ಕಾರಣವಾದ ಹಣ ತೆರಿಗೆದಾರರದ್ದಾಗಿದೆ.. ರಾಷ್ಟ್ರೀಯ ಹೆದ್ದಾರಿಗಳಿಗೆ ಹೊಂದಿಕೊಂಡಿರುವ ಭೂಮಿಯನ್ನು ವಾಣಿಜ್ಯ ಉದ್ದೇಶಕ್ಕಾಗಿ ಬಳಸಲಾಗುತ್ತಿದೆ. ವಾರ್ಷಿಕ ಆಧಾರದಲ್ಲಿ ಇವುಗಳ ಮೇಲೆ ಕೆಲವು ಸೆಸ್/ತೆರಿಗೆ ವಿಧಿಸುವ ಸಾಧ್ಯತೆಯನ್ನು ಸರ್ಕಾರ ಅನ್ವೇಷಿಸಬಹುದು. ಇದು ಸರ್ಕಾರಕ್ಕೆ ಶಾಶ್ವತ ಆದಾಯದ ಮೂಲವಾಗಿ ಕಾರ್ಯನಿರ್ವಹಿಸುತ್ತದೆ ಮತ್ತುಇದರಿಂದ ಉತ್ಪತ್ತಿಯಾಗುವ ಆದಾಯವನ್ನು ಹೆದ್ದಾರಿಗಳ ನಿರ್ಮಾಣ ಮತ್ತು ನಿರ್ವಹಣೆಗಾಗಿ ಮತ್ತೆ ಬಳಕೆ ಮಾಡಬಹುದು ಎಂದು ಸಮಿತಿ ಶಿಫಾರಸು ಮಾಡಿತ್ತು.

ರಾಷ್ಟ್ರೀಯ ಹೆದ್ದಾರಿಗಳ ನಿರ್ಮಾಣದ ಸಮಯದಲ್ಲಿ ಟೆಲಿಫೋನ್ ಮತ್ತು ಎಲೆಕ್ಟ್ರಿಕ್ ಕೇಬಲ್‌ಗಳನ್ನು ಹಾಕಲು ಅವಕಾಶಗಳನ್ನು ಒದಗಿಸುವ ಮೂಲಕ ಮತ್ತಷ್ಟು ಆಧಾಯವನ್ನು ಗಳಿಸಬಹುದಾಗಿದೆ. ಇದಲ್ಲದೆ ರಸ್ತೆ ವಲಯಕ್ಕೆ ಹೆಚ್ಚಿನ ಸಂಪನ್ಮೂಲ ಸಂಗ್ರಹಿಸಲು ಸರ್ಕಾರ ಬೇರೆ ದಾರಿಗಳ ಅನ್ವೇಷಣೆ ಮಾಡಬೇಕು. ರಸ್ತೆ ನಿರ್ಮಾಣಕ್ಕೆ ಅವಶ್ಯಕಾದ ಹಣಕಾಸು ಕ್ರೂಡಿಕರಿಸಲು ಸರ್ಕಾರ ಗಮನ ನೀಡಬೇಕು. ಎಂದು ಅದು ಹೇಳಿತ್ತು.





ಕೃಷಿ ಕಾರ್ಮಿಕರಿಗೆ ಸಮಾನ ನ್ಯಾಯಯೆಂಬುದು ಇಲ್ಲ

-ನಿವೃತ್ತ ನ್ಯಾ. ವಿ. ಗೋಪಾಲಗೌಡ

ಈ ಭಾರತದಲ್ಲಿ ಕೃಷಿ ಕಾರ್ಮಿಕರಿಗೆ ಸಮಾನ ನ್ಯಾಯವೆಂಬುದು ಇಲ್ಲವಾಗಿದೆ. ನಿಮಗೆ ಆರ್ಥಿಕ ನ್ಯಾಯ, ಸಾಮಾಜಿಕ ನ್ಯಾಯ, ರಾಜಕೀಯ ನ್ಯಾಯ ಸಿಗಬೇಕು ಎಂದು ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ವಿ.ಗೋಪಾಲಗೌಡ ಹೇಳಿದರು.

ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ರಾಜ್ಯ ಸಮ್ಮೇಳನ ಚಿಕ್ಕಬಳ್ಳಾಪುರ ಜಿಲ್ಲೆಯ ಬಾಗೇಪಲ್ಲಿಯಲ್ಲಿ ಮೂರು ದಿನಗಳು(ನವೆಂಬರ್ 29-30, ಡಿಸೆಂಬರ್ 1, 2022) ಹಮ್ಮಿಕೊಂಡಿತ್ತು. ನವೆಂಬರ್ 29 ರಂದು ಬೃಹತ್ ಬಹಿರಂಗ ಸಭೆಯೊಂದಿಗೆ ಸಮ್ಮೇಳನ ಉದ್ಘಾಟನೆಯಾಯಿತು.

ಬಹಿರಂಗ ಸಭೆಯನ್ನು ಉದ್ದೇಶಿಸಿ ವಿ. ಗೋಪಾಲಗೌಡ ಅವರು ಮಾತನಾಡಿ, ಭಾರತ ಸರ್ಕಾರ ಜಾರಿಗೊಳಿಸಿರುವ ನರೇಗಾ ಯೋಜನೆ, ಬಡ, ದಲಿತ, ಹಿಂದುಳಿದ ವರ್ಗದ ಜನರಿಗೆ ಉತ್ತಮ ವೇತನ ನೀಡಬೇಕು. ಇಂತಹ ಮಹತ್ವದ ಯೋಜನೆಯಡಿ ನಮ್ಮ ಆಳುವ ವ್ಯವಸ್ಥೆ ನಿಮಗೆ ಉದ್ಯೋಗವನ್ನು ನೀಡಲು, ನಿಮ್ಮನ್ನು ಸದೃಢರನ್ನಾಗಿ ಮಾಡಲು ರಾಜ್ಯ ಮತ್ತು ಕೇಂದ್ರ ಸರ್ಕಾರ ವಿಫಲವಾಗಿವೆ. ರಾಜಕೀಯ ಪಕ್ಷಗಳಾದ ಕಾಂಗ್ರೆಸ್ ಮತ್ತು ಬಿಜೆಪಿ ನಿಮಗೆ ಉದ್ಯೋಗ ಸೃಷ್ಟಿ ಮಾಡಿಕೊಟ್ಟಿಲ್ಲ ಎಂದರು.

ಕೃಷಿ ಕಾರ್ಮಿಕರು ಯಾರೆಂದರೆ ಅವರು ತಮ್ಮ ಸ್ವಂತ ಭೂಮಿಯಲ್ಲಿ ವ್ಯವಸಾಯ ಮಾಡುವ ಜನರಲ್ಲ. ಬೇರೆಯವರ ಜಮೀನಿನಲ್ಲಿ ಕೆಲಸ ಮಾಡುವ ಕೃಷಿ ಕಾರ್ಮಿಕರೇ. ಕೃಷಿ ಕಾರ್ಮಿಕರ ಮಕ್ಕಳೆಲ್ಲರೂ ಶಾಲೆಗೆ ಹೋಗುವುದಿಲ್ಲ. ಆ ವ್ಯವಸ್ಥೆಯೂ ಇಲ್ಲ. ನರೇಗಾದಲ್ಲಿ ಕೇವಲ 150 ದಿನ ಕೆಲಸ ಕೊಟ್ಟರೆ ಸಾಲದು. ವರ್ಷದ 365 ದಿನವೂ ಕೃಷಿ ಕಾರ್ಮಿಕರಿಗೆ ಕೆಲಸ ಕೊಡಬೇಕು. ಆ ಕೆಲಸವನ್ನು ಭಾರತ ಸರ್ಕಾರ ನೀಡಬೇಕು ಎಂದು ಆಗ್ರಹಿಸಿದರು.

ಕೃಷಿ ಕೂಲಿಕಾರರಿಗೆ ಸಾಮಾಜಿಕ ನ್ಯಾಯ ಸಿಗುತ್ತಿಲ್ಲ. ಭಾರತದಲ್ಲಿ ಕೊರೊನಾ ದಾಳಿ ನಡೆದಾಗ ನಿಮಗೆ ಉತ್ತಮ ಸೇವೆ ಸಿಗಲಿಲ್ಲ. ನಿಮ್ಮಿಂದಲೇ ಸರಕಾರದ ಅಧಿಕಾರ ಹಿಡಿದಿರುವ ಶಾಸಕರು, ಸಂಸದರು, ಸಚಿವರುಗಳು ಅವರೆಲ್ಲ ಚೆನ್ನಾಗಿದ್ದರು. ಆದರೆ, ಕೃಷಿ ಕಾರ್ಮಿಕರ ಪರಿಸ್ಥಿತಿ ಮಾತ್ರ ಅತಂತ್ರವಾಗಿತ್ತು ಎಂದು ಹೇಳಿದರು.

ನಾನು ಸುಪ್ರೀಂ ಕೋರ್ಟ್ ನಿಂದ ನಿವೃತ್ತಿಯಾಗಿದ್ದೇನೆ. ಅಲ್ಲಿ ನನಗೆ ಒಂದು ಹೆಸರು ಇಟ್ಟಿದ್ದರು ಅದೇನಂದರೆ ಪ್ರಜಾ ನ್ಯಾಯ ಮೂರ್ತಿ ಅಂತ. ನಾನು ಕರ್ನಾಟಕದ ಹೈಕೋರ್ಟಿನಲ್ಲಿ ಕಾರ್ಯನಿರ್ವಹಿಸುತ್ತಿದ್ದಾಗ ನನ್ನ ಮುಂದೆ ಈ ಪ್ರಕರಣ ಬಂದಿತು. ಆಗ ಸರ್ಕಾರಕ್ಕೆ ತಿಳಿ ಹೇಳಿ ಜನಕ್ಕೆ ಉದ್ಯೋಗ ಕೊಡಿ ಎಂದು ಪ್ರಸ್ತಾಪಿಸಿದ ಎಂದು ತಿಳಿಸಿದರು.

ಆದರೆ ಇದೇನಾ ಪ್ರಜಾಪ್ರಭುತ್ವ, ಇದೆಂತ ಪ್ರಜಾಪ್ರಭುತ್ವ ಸರಕಾರ ಯಾತ್ರೆ ಮಾಡುತ್ತದೆ. ಅದಕ್ಕೆ ಖರ್ಚು ಮಾಡುತ್ತಾರೆ ಆದರೆ ನಿಮಗೆ ನೀಡುವುದಿಲ್ಲ. ಭಾರತ ಸರಕಾರದ ಶಾಸನ ಸಭೆಯಲ್ಲಿ ಎಷ್ಟು ಜನ ಸಂಸದರು ಇದ್ದಾರೆ ಯಾರ್ಯಾರು ಬಂದು ನಿಮ್ಮ ಕಷ್ಟ ಕೇಳಿದ್ದಾರೆ. ಇನ್ನು ಕೇವಲ 4 ತಿಂಗಳು ಉಳಿದಿದೆ. ನಿಮಗಾಗಿ ಯಾರೂ ಶಾಸನ ಸಭೆಯಲ್ಲಿ ಹೋರಾಡುತ್ತಾರೋ ಅವರನ್ನು ನೀವು ಗೆಲ್ಲಿಸಬೇಕು. ನಿಮಗೆ ಸಂವಿಧಾನದಲ್ಲಿ ಕಾನೂನು ಇದೆ. ಅದನ್ನು ಬಳಸಿಕೊಳ್ಳಿ ನಿಮ್ಮ ಮಕ್ಕಳಿಗೆ ಉದ್ಯೋಗ, ಶಿಕ್ಷಣ ಸಿಗಬೇಕು ಎಂದು ವಿ.ಗೋಪಾಲಗೌಡ ತಿಳಿಸಿದರು.

ನಾವು ತಿನ್ನುವ ಎಲ್ಲ ಆಹಾರ ತರಕಾರಿ ಎಲ್ಲ ನಿಮ್ಮ ಪರಿಶ್ರಮದ ಫಲ. ನಿಮ್ಮ ತ್ಯಾಗದಿಂದ ನಗರದ ಜನಗಳು ಬದುಕುತ್ತಿದ್ದಾರೆ. ಆದರೆ ನಿಮಗೆ ಏನೂ ಇಲ್ಲ, ನೀವು ಮೊದಲು ಶಕ್ತಿಯುತರಾಗಿರಬೇಕು. ಇಂದಿಗೂ ಬಹಳಷ್ಟು ಕೃಷಿ ಕಾರ್ಮಿಕರ ಕುಟುಂಬಗಳಿಗೆ ಶೌಚಾಲಯ ಇಲ್ಲ, ಮನೆ ಇಲ್ಲ, ಯಾವುದೇ ವ್ಯವಸ್ಥೆ ಇಲ್ಲವಾಗಿದೆ. ದೇಶಕ್ಕೆ ಸ್ವತಂತ್ರ ಬಂದು 75 ವರ್ಷಗಳು ಕಳೆದರೂ ನಿಮಗೆ ಇನ್ನೂ ಒದಗಿಬಂದಿಲ್ಲ. ಉದ್ಯೋಗ ಇಲ್ಲ, ಶಿಕ್ಷಣ ಇಲ್ಲ. ಇವುಗಳೆಲ್ಲವನ್ನೂ ಸರಕಾರ ನಿಮಗೆ ಕೊಡಬೇಕು ಎಂದರು.

ಇಲ್ಲಿ ಆಯೋಜಿಸಲಾಗಿರುವ ಇಂಥಹ ಸಭೆಗಳು ನಿಮಗೆ ಇರುವ ಸೌಲಭ್ಯ ಮತ್ತು ನಿಮ್ಮ ಹಕ್ಕುಗಳ ಬಗ್ಗೆ ವಿಚಾರಗಳನ್ನು ತಿಳಿಸುತ್ತಿವೆ. ಈ ಮೂರು ದಿನಗಳ ಕಾಲ ನಡೆಯುವ ರಾಜ್ಯ ಸಮ್ಮೇಳನದಲ್ಲಿ ಕೂಲಿಕಾರರ ಬಗ್ಗೆ ಚರ್ಚೆಯಾಗಲಿ, ಸಂಘಟನೆ ಬಲಗೊಳಿಸುವ ಕೆಲಸಗಳು ನಡೆಯಲಿ ಎಂದು ಕರೆ ನೀಡಿದರು.

ಪ್ರಧಾನ ಮಂತ್ರಿಯೋ ಇಲ್ಲ ಪ್ರಧಾನ ಪೂಜಾರಿಯೋ

-ವಿಜಯರಾಘವನ್ ವ್ಯಂಗ್ಯ



ವಿಜಯರಾಘವನ್ ಮಾತನಾಡುತ್ತಿರುವುದು

ಕೂಲಿಕಾರರ ಸಂಘದ 8ನೇ ರಾಜ್ಯ ಸಮ್ಮೇಳನವನ್ನು ಸಂಘದ ರಾಷ್ಟ್ರೀಯ ಅಧ್ಯಕ್ಷ ವಿಜಯರಾಘವನ್ ಉದ್ಘಾಟಿಸಿ ಪ್ರಧಾನಿ ನರೇಂದ್ರ ಮೋದಿ ಅವರ ಜನ ವಿರೋದಿ ನೀತಿಗಳ ವಿರುದ್ಧ ಕಿಡಿಕಾರಿದರು.

ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ಸಮ್ಮೇಳನವು ಚಿಕ್ಕಬಳ್ಳಾಪುರ ಜಿಲ್ಲೆಯ ಬಾಗೇಪಲ್ಲಿಯಲ್ಲಿ ಹಮ್ಮಿಕೊಳ್ಳಲಾಗಿದ್ದು, ನವೆಂಬರ್ 29-30 ಮತ್ತು ಡಿಸೆಂಬರ್ 1 ರಂದು ಮೂರು ದಿನ ನಡೆದಿದೆ. ಬಹಿರಂಗ ಸಭೆಯನ್ನು ಉದ್ದೇಶಿಸಿ ಮಾತನಾಡಿದ ವಿಜಯರಾಘವನ್, ಬಾಗೇಪಲ್ಲಿಗೆ ಹೋರಾಟದ ದೊಡ್ಡ ಪರಂಪರೆ ಇದೆ. ಹಲವು ದಶಕಗಳಿಂದ ಈ ಭಾಗದಲ್ಲಿ ಹಲವು ಹೋರಾಟಗಳು ನಡೆದಿವೆ. ಈ ಭಾಗದಲ್ಲಿ ಮೂರ್ನಾಲ್ಕು ಬಾರಿ ಕಮ್ಯುನಿಸ್ಟ್ ಪಕ್ಷದ ಶಾಸಕರನ್ನು ಗೆಲ್ಲಿಸಿದ್ದಿರಿ. ಕೇರಳದ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರು ಇದೇ ಸ್ಥಳಕ್ಕೆ ಇತ್ತೀಚೆಗೆ ಬಂದು ಸಾವಿರಾರು ಮಂದಿಯನ್ನು ಉದ್ದೇಶಿಸಿ ಮಾತನಾಡಿದ್ದಾರೆ. ಬಿಜೆಪಿ ಪಕ್ಷ, ಕುದುರೆ ವ್ಯಾಪಾರದ ಮೂಲಕ ಶಾಸಕರನ್ನು ಕೊಂಡುಕೊಂಡು ಕರ್ನಾಟಕದಲ್ಲಿ ಸರ್ಕಾರ ರಚಿಸಿ ಆಡಳಿತ ಮಾಡುತ್ತಿದೆ. ಜನರ ಸಂಕಷ್ಟಗಳನ್ನು ನಿವಾರಿಸುವಲ್ಲಿ ಬಿಜೆಪಿ ಸರ್ಕಾರ ವಿಫಲವಾಗಿದೆ. ಬಾಗೇಪಲ್ಲಿ ಇಡೀ ಕರ್ನಾಟಕಕ್ಕೆ ಕೆಂಪು ನಕ್ಷತ್ರವಾಗಿ ಗೋಚರಿಸುತ್ತಿದೆ. ದುಡಿಯುವ ಜನರ ಧ್ವನಿಯಾಗಿ ಬಾಗೇಪಲ್ಲಿ ಮಾರ್ಪಟ್ಟಿದೆ.



ಬಿಜೆಪಿಯ ಕೇಂದ್ರ ಮತ್ತು ರಾಜ್ಯದ ಎರಡು ಸರ್ಕಾರಗಳು ಜನಾ ವಿರೋಧಿ ನೀತಿಗಳನ್ನು ಅನುಸರಿಸುತ್ತಿವೆ. ಕೃಷಿ ಕೂಲಿಕಾರರು, ಕಾರ್ಮಿಕರು, ಬಡವರಿಗೆ ತೀವ್ರತರವಾದ ಸಂಕಟ ಉಂಟುಮಾಡಿದೆ.

ಇತ್ತೀಚಿನ ದಿನಗಳಲ್ಲಿ ಬಾರಿ ಪ್ರಮಾಣದಲ್ಲಿ ಬೆಲೆ ಏರಿಕೆಯಾಗುತ್ತಿದೆ. ಬಡವರ ಬದುಕಿನ ಪರಿಸ್ಥಿತಿ, ಮಕ್ಕಳ ಶಿಕ್ಷಣದ ಪರಿಸ್ಥಿತಿ, ಆರೋಗ್ಯದ ಸ್ಥಿತಿ ಕೈಗೆ ಎಟಕದಂತಾಗಿದೆ. ಕೋವಿಡ್ ಮಹಾ ಸಂಕಷ್ಟದಲ್ಲಿ ಬೊಮ್ಮಾಯಿ ಸರ್ಕಾರ ಪರಿಸ್ಥಿತಿಯನ್ನು ನಿಭಾಯಿಸುವಲ್ಲಿ ಸಂಪೂರ್ಣವಾಗಿ ವಿಫಲವಾಗಿತ್ತು. ಕೋವಿಡ್ ಸಂದರ್ಭದಲ್ಲಿ ಯಾವುದೇ ಆರ್ಥಿಕ ಸಹಾಯ ನೀಡದೆ ಬಡವರನ್ನು ಜರ್ಜರಿತ ಮಾಡಿತ್ತು. ಜನರು ಸರಿಯಾದ ಆರೋಗ್ಯದ ವ್ಯವಸ್ಥೆ ಇಲ್ಲದೆ ಪರದಾಡಿದರು. ಆಸ್ಪತ್ರೆಗಳ ಖರ್ಚು ಹೆಚ್ಚಾಗಿ ಜನಸಾಮಾನ್ಯರು ನರಳಾಡಿದರು. ಎಲ್ಲಿ ಹೋದರು ನಮ್ಮದು ಡಬಲ್ ಇಂಜಿನ್ ಸರ್ಕಾರ ಎಂದು ಹೇಳಿಕೊಳ್ಳುತ್ತಾರೆ. ಬಿಜೆಪಿಯ ಡಬಲ್ ಇಂಜಿನ್ ಸರ್ಕಾರ ಎಂದರೆ ಒಂದು ಇಂಜಿನ್ ಬಡತನ ಮತ್ತೊಂದು ಹಸಿವು ಇಂತಹ ಡಬ್ಬಲ್ ಇಂಜಿನ್ ಸರ್ಕಾರವನ್ನು ನಡೆಸುತ್ತಿದೆ. ಇದರಿಂದ ಸಾಮಾನ್ಯ ಜನರಿಗೆ ಯಾವುದೇ ಬೆಂಬಲ ಸಹಕಾರ ಸಿಗುತ್ತಿಲ್ಲ. ಸರ್ಕಾರಗಳು ಎಲ್ಲಾ ವಿಚಾರದಲ್ಲೂ ಜನ ವಿರೋಧಿ ಧೋರಣೆಯನ್ನು ಅನುಸರಿಸುತ್ತದೆ. ವಿದ್ಯಾರ್ಥಿ, ಯುವಜನ, ಮಹಿಳೆ, ಕಾರ್ಮಿಕ, ರೈತ ಮತ್ತು ಕೂಲಿಕಾರ ಈ ಸರ್ಕಾರಗಳ ನೀತಿಯಿಂದ ವೇದನೆಪಡುವಂತಾಗಿದೆ. ಸರ್ಕಾರದ ಜನ ವಿರೋಧಿ ನೀತಿಗಳ ಬಗ್ಗೆ ಜನಾಂದೋಲ ಮಾಡಬೇಕಾಗಿದೆ. ರಾಜ್ಯ ಮತ್ತು ಮುಂದೆ ನಡೆಯುವ ರಾಷ್ಟ್ರ ಸಮ್ಮೇಳನದಲ್ಲಿ ಈ ಬಗ್ಗೆ ನಿರ್ಣಯಗಳನ್ನು ಕೈಗೊಳ್ಳಲಿದೆ.

ಹಸಿವಿನ ಸೂಚ್ಯಂಕದಲ್ಲಿ ವಿಶ್ವದ 121 ದೇಶದಲ್ಲಿ ಭಾರತ 107 ನೇ ಸ್ಥಾನದಲ್ಲಿದೆ. ದಿನದಿಂದ ದಿನಕ್ಕೆ ಭಾರತ ದೇಶದಲ್ಲಿ ಹಸುವಿನ ಸಮಸ್ಯೆ ಹೆಚ್ಚಾಗುತ್ತಿದೆ. ಕಾರಣ ಒಂದೆಡೆ ನಿರುದ್ಯೋಗ ಸಮಸ್ಯೆ ಆದರೆ ಮತ್ತೊಂದೆಡೆ ಬೆಲೆ ಹೆಚ್ಚಾಗುತ್ತಿರುವುದು. ಗ್ರಾಮೀಣ ಭಾಗದಲ್ಲಿ ನಿರುದ್ಯೋಗದ ಸಮಸ್ಯೆ ವಿಪರೀತ ಹೆಚ್ಚಾಗಿ ಹಸಿವಿನಿಂದ ನರಳುವವರ ಸಂಖ್ಯೆಯು ಹೆಚ್ಚಾಗುತ್ತಿದೆ. ಎಡಪಕ್ಷಗಳ ಸಹಕಾರದಿಂದ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದ ಮನಮೋಹನ್ ಸಿಂಗ್ ಸರ್ಕಾರ ಎಡ ಪಕ್ಷಗಳ ಒತ್ತಡದಿಂದ ಉದ್ಯೋಗ ಖಾತ್ರಿ ಯೋಜನೆಯನ್ನು ಜಾರಿಗೆ ತಂದಿತು. ಪ್ರಸ್ತುತದಲ್ಲಿ ಉದ್ಯೋಗ ಖಾತ್ರಿ ಯೋಜನೆಯನ್ನು ಸಂಪೂರ್ಣ ತೆಗೆದು ಹಾಕಬೇಕು ಎಂಬ ಆಲೋಚನೆ ನಡೆಯುತ್ತಿದೆ. ಉದ್ಯೋಗ ಖಾತ್ರಿ ಯೋಜನೆಯ ರಂಬೆ ಕೊಂಬೆಗಳನ್ನು ಒಂದೊಂದಾಗಿ ಕತ್ತರಿಸುವ ಕೆಲಸವನ್ನು ಸರ್ಕಾರ ಮಾಡುತ್ತಿದೆ. ನರೇಗಾ ಯೋಜನೆ ಅಡಿಯಲ್ಲಿ ಕನಿಷ್ಠ ಕೂಲಿಯನ್ನು ನೀಡುತ್ತಿಲ್ಲ.

ಕೂಲಿಕಾರರು ಮಾಡಿದ ಕೆಲಸಕ್ಕೆ ಸರಿಯಾದ

ಪುಟ 10 ಕ್ಕೆ


ಅಧ್ಯಕ್ಷರು: **ಪುಟ್ಟಮಾದು**


ಪ್ರಧಾನ ಕಾರ್ಯದರ್ಶಿ: **ಚಂದ್ರಪ್ಪ ಹೊಸ್ಕೇರಾ**

ಅಧ್ಯಕ್ಷರು: **ಪುಟ್ಟಮಾದು**

ಉಪಾಧ್ಯಕ್ಷರು: **ನಿತ್ಯಾನಂದಸ್ವಾಮಿ, ಜಿ.ಎಸ್. ನಾಗರಾಜು, ಮುನಿವೆಂಕಟಪ್ಪ ಎಂ.ಪಿ., ಭೀಮಶೆಟ್ಟಿ ಯಂಪಳ್ಳಿ, ಮಲ್ಲಮ್ಮ ಕೋಡ್ಲಿ, ಕರಿಯಪ್ಪ ಅಚ್ಚೊಳ್ಳಿ.**

ಪ್ರಧಾನ ಕಾರ್ಯದರ್ಶಿ: **ಚಂದ್ರಪ್ಪ ಹೊಸ್ಕೇರಾ**

ಜಂಟಿ ಕಾರ್ಯದರ್ಶಿಗಳು: **ದಾವಲ್‌ಸಾಬ್ ನದಾಫ್, ವೆಂಕಟೇಶ್ ಕೋಣಿ, ಸರೋಜಮ್ಮ, ಎಂ. ಬಸವರಾಜ, ಕೆ. ನಾಗರಾಜ, ಸಾವಿತ್ರಮ್ಮ, ಕೆ. ಹನುಮೇಗೌಡ, ಬಿ. ಹನುಮೇಶ್, ಬಿ.ಎಂ. ಶಿವಮಲ್ಲಯ್ಯ**

ಆನಂದ್ ತೇಲ್ತುಂಬ್ಡೆ ಜೈಲಿನಿಂದ ಬಿಡುಗಡೆ: ಡಿಎಚ್‌ಎಸ್ ಸ್ವಾಗತ
ಆನಂದ್ ತೇಲ್ ತುಂಬ್ದೆ 'ನಕಲಿ' ಪ್ರಕರಣದಲ್ಲಿ ಬಂಧನಕ್ಕೆ ಒಳಗಾಗಿದ್ದರು- ಕೋರ್ಟ್ ತೀರ್ಪು

ಎಲ್ಗರ್ ಪರಿಷತ್ ಮಾವೋವಾದಿ ಸಂಪರ್ಕ ಪ್ರಕರಣದಲ್ಲಿ ಆರೋಪಿಯಾಗಿದ್ದ ಖ್ಯಾತ ವಿದ್ವಾಂಸರು ಮತ್ತು ಸಾಮಾಜಿಕ ಕಾರ್ಯಕರ್ತ ಹಾಗೂ ಡಾ. ಅಂಬೇಡ್ಕರ್ ರವರ ಸಂಭಂಧಿಕರು ಆದ, ಆನಂದ್ ತೇಲ್ತುಂಬ್ಡೆ ಅವರನ್ನು ಬಾಂಬೆ ಹೈಕೋರ್ಟ್ ನವೆಂಬರ್ 18 ರಂದು ನೀಡಿದ್ದ ಜಾಮೀನು ಆದೇಶದಂತೆ ಬಿಡುಗಡೆ ಗೊಳಿಸಿದ್ದನ್ನು ಪ್ರಶ್ನಿಸಿ, ರಾಷ್ಟ್ರೀಯ ತನಿಖಾ ದಳ (ಎನ್‌ಐಎ) ಸುಪ್ರಿಂ ಕೋರ್ಟ್ ಗೆ ಸಲ್ಲಿಸಿದ್ದ ಮನವಿಯನ್ನು ಸುಪ್ರೀಂ ಕೋರ್ಟ್ ತಿರಸ್ಕರಿಸಿ, ಬಾಂಬೆ ಹೈಕೋರ್ಟ್ ನ ಆದೇಶ ವನ್ನು ಎತ್ತಿ ಹಿಡಿದಿದೆ. ಇದನ್ನು ಡಿಎಚ್‌ಎಸ್ ಸ್ವಾಗತಿಸಿದೆ.

ಜಾಮೀನಿಗೆ ಸಂಭಂದಿಸಿದ ಎಲ್ಲಾ ಪ್ರಕ್ರಿಯೆಗಳು ಮುಗಿದ ನಂತರ, ಒಂದು ದಿನದ ನಂತರ ನವಿ ಮುಂಬೈನ ತಾಲೋ ಜಾ ಕೇಂದ್ರ ಕಾರಾಗೃಹದಿಂದ ನವೆಂಬರ್ 26 ರಂದು ಶನಿವಾರ ಬಿಡುಗಡೆಯಾಗಿದ್ದಾರೆ.

ಬಿಡುಗೊಂಡ ನಂತರ, ಹೊರಗಡೆ ಬಂದಾಗ, ಪತ್ರಿಕಾ ವರದಿಗಾರರ ಪ್ರಶ್ನೆಗೆ ಪ್ರತಿಕ್ರಿಯೆ ನೀಡುತ್ತಾ, ತೇಲ್ ತುಂಬ್ದೆ ಯವರು, 31 ತಿಂಗಳ ನಂತರ ಜೈಲಿನಿಂದ ಬಿಡುಗಡೆಯಾದ ನಂತರ ನನಗೆ ಸಂತೋಷವಾಗಿದೆ. ಆದರೆ ವಿಷಾದಕರ ಸಂಗತಿ ಏನೆಂದರೆ, ನನ್ನನ್ನು ಒಂದು ನಕಲಿ ಪ್ರಕರಣದ ಮೇಲೆ ಬಂಧಿಸಿದ್ದು ಎಂಬುದು ಇದೀಗ ಬಾಂಬೆ ಹೈ ಕೋರ್ಟ್ ನ ಆದೇಶ ಸ್ಪಷ್ಟಗೊಳಿಸಿದೆ. ಅದನ್ನು ಸುಪ್ರೀಂ ಕೋರ್ಟ್ ಕೂಡಾ ಎತ್ತಿಹಿಡಿದಿದೆ. ಈ ನಕಲಿ ಪ್ರಕರಣದಿಂದಾಗಿ, ನಾನು 31 ತಿಂಗಳ ಕಾಲ ಜೈಲಿನಲ್ಲಿ ಬಂಧಿಸಲ್ಪಟ್ಟಿದ್ದೆ" ಎಂದು ತೇಲ್ ತುಂಬ್ಡೆ ವಿಷಾದ ವ್ಯಕ್ತಪಡಿಸಿದರು.

ತೇಲ್ತುಂಬ್ಡೆಗೆ ಜಾಮೀನು ನೀಡಿರುವ ಬಾಂಬೆ ಹೈಕೋರ್ಟ್ ಆದೇಶವನ್ನು ಪ್ರಶ್ನಿಸಿ ಎನ್‌ಐಎ ಸಲ್ಲಿಸಿದ್ದ ಅರ್ಜಿಯನ್ನು ಶುಕ್ರವಾರ ಸುಪ್ರೀಂ ಕೋರ್ಟ್ ವಜಾಗೊಳಿಸಿತ್ತು.

ಏಪ್ರಿಲ್ 14, 2020 ರಂದು ಕೇಂದ್ರ ಏಜೆನ್ಸಿಯಿಂದ ಬಂಧಿಸಲ್ಪಟ್ಟಿದ್ದ ತೇಲ್ತುಂಬ್ಡೆಗೆ ನ್ಯಾಯಾಲಯವು ಜಾಮೀನು ಮಂಜೂರು ಮಾಡಿತು. ಯಾವುದೇ ಭಯೋತ್ಪಾದಕ ಕೃತ್ಯಗಳಲ್ಲಿ ಅವರು ಭಾಗಿಯಾಗಿರುವ ಬಗ್ಗೆ ಪ್ರಾಥಮಿಕವಾಗಿ ಯಾವುದೇ ಪ್ರಮುಖವಾದ ಪುರಾವೆಗಳಿಲ್ಲ ಎಂದು ಹೈಕೋರ್ಟ್ ಗಮನಿಸಿದೆ.

ಜಾಮೀನಿನ ಮೇಲೆ ಬಿಡುಗಡೆಯಾಗಿರುವ ಪ್ರಕರಣದಲ್ಲಿ ಬಂಧಿತರಾದ 16 ಆರೋಪಿಗಳಲ್ಲಿ ತೇಲ್ತುಂಬ್ಡೆ ಮೂರನೇಯವರು. ಇನ್ನಿಬ್ಬರೆಂದರೆ, ಕವಿ ವರವರ ರಾವ್ ಅವರು ಅನಾರೋಗ್ಯದ ಹಿನ್ನೆಲೆಯಲ್ಲಿ ಜಾಮೀನಿನ ಮೇಲೆ ಈಗಾಗಲೇ ಬಿಡುಗಡೆ ಹೊಂದಿ ಹೊರಗಿದ್ದಾರೆ, ವಕೀಲೆ ಸುಧಾ ಭಾರದ್ವಾಜ್ ಅವರು ಸಾಮಾನ್ಯ ಜಾಮೀನಿನ ಮೇಲೆ ಬಿಡುಗಡೆ ಹೊಂದಿ ಹೊರಗಿದ್ದಾರೆ.

ಈ ಪ್ರಕರಣವು ಡಿಸೆಂಬರ್ 31, 2017 ರಂದು ಪುಣೆಯಲ್ಲಿ ನಡೆದ ಎಲ್ಗರ್ ಪರಿಷತ್ ಸಮಾವೇಶದಲ್ಲಿ ಮಾಡಿದ ಪ್ರಚೋದಕ ಭಾಷಣಗಳಿಗೆ ಸಂಬಂಧಿಸಿದ್ದಾಗಿತ್ತು. ಇದರಲ್ಲಿ, ತೇಲ್ ತುಂಬ್ದೆ ಭಾಗಿಯಾಗಿದ್ದರು ಎಂಬುದು ಪುಣೆ ಪೋಲಿಸರ ಆರೋಪವಾಗಿತ್ತು.

ಮರುದಿನ ಜನವರಿ 1 ರಂದು, ಪಶ್ಚಿಮ ಮಹಾರಾಷ್ಟ್ರ ನಗರದ ಹೊರ ವಲಯದಲ್ಲಿರುವ ಕೋರೆಗಾಂವ್– ಭೀಮಾ ಯುದ್ಧ ವಿಜಯೋತ್ಸವದ ಸಂದರ್ಭದಲ್ಲಿ, ಸ್ಮಾರಕದ ಬಳಿ ಹಿಂಸಾತ್ಮಕ ಪ್ರಚೋದನೆಗೆ ಕಾರಣವಾಗಿತ್ತು ಎಂದು ಪುಣೆ ಪೊಲೀಸರು ಆರೋಪ ಹೊರೆಸಿದ್ದರು. ಮಾವೋವಾದಿ ನಂಟು ಹೊಂದಿರುವ ಕೆಲವು ವ್ಯಕ್ತಿಗಳಿಂದ ಎಲ್ಗರ್ ಪರಿಷತ್ ಸಮಾವೇಶವನ್ನು ಆಯೋಜಿಸಿದ್ದಾರೆ ಎಂಬ ಕಾರಣದ ಹಿನ್ನೆಲೆಯಲ್ಲಿ; ಆ ಪ್ರಚೋದನಕಾರಿ ಸಮಾವೇಶದಲ್ಲಿ ತೇಲ್ತುಂಬ್ದೆ ಭಾಗವಹಿಸಿದ್ದಾಗಿ ಆಪಾದನೆಯ ಮೇಲೆ ಅವರನ್ನು ಬಂಧಿಸಲಾಗಿತ್ತು.

ಜನವರಿ 8, 2018 ರಂದು ಪುಣೆ ಪೊಲೀಸರು ಭಾರತೀಯ ದಂಡ ಸಂಹಿತೆ (IPC) ಮತ್ತು ಕಾನೂನು ಬಾಹಿರ ಚಟುವಟಿಕೆಗಳ (ತಡೆಗಟ್ಟುವಿಕೆ) ಕಾಯಿದೆ (UAPA) ಅಡಿಯಲ್ಲಿ ಪ್ರಥಮ ಮಾಹಿತಿ ವರದಿಯನ್ನು ದಾಖಲಿಸಲಾಗಿತ್ತು.

ಆದರೀಗ ಕೋರ್ಟ್ ನ ಜಾಮೀನು ಬಿಡುಗಡೆ ಆದೇಶದಲ್ಲಿ ತೇಲ್ ತುಂಬ್ದೆ ಆ ಪರಿಷತ್ ಕಾರ್ಯ ಕ್ರಮದಲ್ಲಿ ಭಾಗವಹಿಸಿದ್ದರು ಎಂಬುದಕ್ಕೆ ಯಾವುದೇ ಪುರಾವೆಗಳು ಇಲ್ಲ ಎಂದು ಕೋರ್ಟ್ ಪ್ರತಿಪಾದಿಸಿದೆ. ಹಾಗಾಗಿ ಆನಂದ್ ರ ಮೇಲೆ ನಕಲಿ ಪ್ರಕರಣ ದಾಖಲಿಸಿ ಬಂಧಿಸಲಾಗಿತ್ತು ಎಂಬುದು ಸ್ಪಷ್ಟ ಗೊಂಡಂತ್ತಾಗಿದೆ.

ಡಿಎಚ್‌ಎಸ್/ಡಿಎಸ್‌ಎಂಎಂ ತೇಲ್ ತುಂಬ್ದೆ ಯವರನ್ನು ಬಂಧಿಸಿದ ನಂತರ, ಹಲವಾರು ಬಗೆಯ ಪ್ರತಿಭಟನೆ ಗಳನ್ನು ದೇಶದಾದ್ಯಂತ ನಡೆಸಿದೆ. ಕರ್ನಾಟಕದಲ್ಲಿ ನಮ್ಮ ಎಲ್ಲಾ ತಾಲೂಕು ಮತ್ತು ಜಿಲ್ಲಾ ಕೇಂದ್ರಗಳಲ್ಲಿ ಹೋರಾಟ ನಡೆಸಿದ್ದೆವು ಎಂಬುದನ್ನು ನಾವೀಗ ನೆನಪು ಮಾಡಿಕೊಳ್ಳುತ್ತವೆ.

ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಬಿಜೆಪಿ ಆಡಳಿತದಲ್ಲಿ,ಅಭಿವ್ಯಕ್ತಿ ಸ್ವಾತಂತ್ರ್ಯ ಅಪಾಯಕ್ಕೆ ಸಿಕ್ಕಿ, ದ್ವೇಷದ ಮೇಲೆ ಯುಎಪಿಎ ಕಾಯಿದೆಯ ಅಡಿಯಲ್ಲಿ ಕಳೆದ ಹಲವು ವರ್ಷಗಗಳಿಂದ ಅನೇಕ ಸಾಮಾಜಿಕ ಕಾರ್ಯ ಕರ್ತರನ್ನು ಈ ರೀತಿಯಲ್ಲಿ ಬಂಧಿಸಿರುವ ಉದಾಹರಣೆಗಳು ಸಾಕಷ್ಟಿರುವುದನ್ನು ಡಿಎಚ್‌ಎಸ್ ಗಮನಿಸಿದೆ. ಕೇಂದ್ರ ಸರ್ಕಾರದ ಇಂತಹ ಜನ ವಿರೋಧಿ ಮತ್ತು ಸಂವಿಧಾನ ವಿರೋಧಿ ಕ್ರಮಗಳನ್ನು ಡಿಎಚ್‌ಎಸ್ ತನ್ನ ವಿರೋಧವನ್ನು ವ್ಯಕ್ತಪಡಿಸಿದೆ.

ಹಾಗೆಯೇ, ಆನಂದ್ ತೇಲ್ ತುಂಬ್ದೆ ಯವರ ಜಮೀನನ್ನು ಎತ್ತಿ ಹಿಡಿದು, ಅವರನ್ನು ಬಿಡುಗಡೆ ಗೊಳಿಸಿದ ಕೋರ್ಟ್ ನ ಆದೇಶವನ್ನು ಸ್ವಾಗತಿಸಿದೆ.

ವರದಿ: ಗೋಪಾಲಕೃಷ್ಣ ಹರಳಹಳ್ಳಿ, ರಾಜ್ಯ ಸಂಚಾಲಕರು, ನಾಗರಾಜ ನಂಜುಂಡಯ್ಯ ರಾಜ್ಯ ಸಹ ಸಂಚಾಲಕರು ಡಿಎಚ್‌ಎಸ್, ಕರ್ನಾಟಕ

ಪ್ರಧಾನ ಮಂತ್ರಿಯೋ ಇಲ್ಲ ಪ್ರಧಾನ ಪೂಜಾರಿಯೋ... ಪುಟ 9 ರಿಂದ

ಸಮಯಕ್ಕೆ ಕೂಲಿ ಹಣವನ್ನು ಪಾವತಿಸುತ್ತಿಲ್ಲ. ಅಲ್ಲದೆ ಕೂಲಿಕಾರರಿಗೆ ಹೆಜ್ಜೆ ಹೆಜ್ಜೆಗೂ ಸಮಸ್ಯೆಯನ್ನು ಉಂಟುಮಾಡಲು ಪ್ರಾರಂಭ ಮಾಡಿದೆ. ಉದ್ಯೋಗ ಖಾತ್ರಿಯನ್ನು ನಾಶಪಡಿಸುವ ಉದ್ದೇಶಕ್ಕಾಗಿ ಪರಿಶೀಲನಾ ಸಮಿತಿಯನ್ನು ರಚನೆ ಮಾಡಲಾಗಿದೆ. ಕೇರಳದಲ್ಲಿ ನರೇಗಾ ಯೋಜನೆ ಪರಿಣಾಮಕಾರಿಯಾಗಿ ಜಾರಿಯಾಗುತ್ತಿದೆ. ಯೋಗಿ ಆದಿತ್ಯನಾಥ್ ಅವರು ಮುಖ್ಯಮಂತ್ರಿ ಆಗಿರುವ ಉತ್ತರ ಪ್ರದೇಶದಲ್ಲಿ ಬಹಳ ಕಳಪೆ ಮಟ್ಟದ ಸಾಧನೆಯಲ್ಲಿದೆ. ಕೇಂದ್ರ ಸರ್ಕಾರಕ್ಕೆ ಉದ್ಯೋಗ ಖಾತ್ರಿ ಯೋಜನೆ ಯಾಕೆ ಬೇಕು ಎಂದು ಯೋಚಿಸುತ್ತಿದೆ. ಮುಂದಿನ ದಿನಗಳಲ್ಲಿ ಇಡೀ ದೇಶಾದ್ಯಂತ ಇದರ ಬಗ್ಗೆ ಹೋರಾಟವನ್ನು ಮಾಡಬೇಕಾಗಿದೆ. ಉದ್ಯೋಗ ಖಾತ್ರಿ ಯೋಜನೆಯನ್ನು ಉಳಿಸಿ ಬೆಳೆಸಬೇಕು ಬೆಳೆಸಲು ನಾವೆಲ್ಲ ಪಣತೊಡಬೇಕಾಗಿದೆ.

ಬಡವರಿಗೆ ನಿರಂತರವಾಗಿ ತೊಂದರೆ ಕೊಡುತ್ತಿರುವ ಬಿಜೆಪಿ ಸರ್ಕಾರಗಳು ಶ್ರೀಮಂತರ ಪರವಾದ ಧೋರಣೆಗಳನ್ನು ಅನುಸರಿಸುತ್ತಿವೆ. ಶ್ರೀಮಂತರ ಸಾಲವನ್ನು ಮನ್ನಾ ಮಾಡುವ ಪ್ರವೃತ್ತಿಯನ್ನು ಮುಂದುವರಿಸುತ್ತಿವೆ. ಬಡವರು ದಿನನಿತ್ಯ ಬಳಸುವ ಅಕ್ಕಿ ಬೇಳೆ ಸೇರಿದಂತೆ ದಿನನಿತ್ಯ ವಸ್ತುಗಳಿಗೆ ಜಿಎಸ್ಟಿ, ತೆರಿಗೆ ವಿಧಿಸಲು ಮುಂದಾಗಿದೆ. ಕೃಷಿ ಕೂಲಿಕಾರರ ಜನ ವಿರೋಧಿ ನೀತಿಗಳ ವಿರುದ್ಧ ಹೋರಾಟ ಮಾಡಲು ಸಜ್ಜಾಗಬೇಕಾಗಿದೆ.

ಮೋದಿ ಆಡಳಿತದಲ್ಲಿ ಶ್ರೀಮಂತರ ಧನ ಕನಕ ಹೆಚ್ಚಾಗುತ್ತಿದೆ. ಆದರೆ ಬಡವರನ್ನು ವಿಭಜಿಸುವ ಕೆಲಸ ನಡೆಯುತ್ತಿದೆ. ಅಲ್ಪಸಂಖ್ಯಾತರ ಮಸೀದಿ ಮತ್ತು ಚರ್ಚ್ ಗಳ ಮೇಲೆ ನಿರಂತರವಾಗಿ ದಾಳಿ ನಡೆಯುತ್ತಿದೆ. ಕರ್ನಾಟಕ ಈ ವಿಚಾರವಾಗಿ ಹಿಂದುತ್ವದ ದೊಡ್ಡ ಪ್ರಯೋಗ ಶಾಲೆಯಾಗಿದೆ. ಹಿಜಾಬ್ ಎಂಬ ವಿಚಾರ ದೊಡ್ಡ ಸದ್ದು ಮಾಡಿದೆ. ಕೋಮು ದ್ವೇಷವನ್ನು ಗ್ರಾಮೀಣ ಭಾಗದಲ್ಲಿ ಬಿತ್ತುವ ಕೆಲಸವನ್ನು ಕರ್ನಾಟಕ ಬಿಜೆಪಿ ಸರ್ಕಾರ ಮಾಡುತ್ತಿದೆ. ದೇವಸ್ಥಾನವನ್ನು ಕಟ್ಟಲು ಪ್ರಧಾನ ಮಂತ್ರಿಯೇ ಭೂಮಿ ಪೂಜೆ ಮಾಡುತ್ತಾರೆ. ಅಂದರೆ ಇವರು ಪ್ರಧಾನಮಂತ್ರಿಯೋ ಅಥವಾ ದೇಶದ ಪ್ರಧಾನ ಪೂಜಾರಿಯೋ ಎಂದು ವ್ಯಂಗ್ಯವಾಡಿದರು.

ಕೇರಳದಲ್ಲಿ ಬಿಜೆಪಿ ಅಭ್ಯರ್ಥಿಯನ್ನು ಸೋಲಿಸುವ ಮೂಲಕ ಜನ್ ಧನ್ ಖಾತೆಯನ್ನು ಕೂಡ ಕ್ಲೋಸ್ ಮಾಡಿಸಿದ್ದಾರೆ. ಕೇರಳದಲ್ಲಿ ಸರ್ಕಾರಿ ಶಾಲೆಗಳನ್ನ ಹೈಟೆಕ್ ಮಾಡಲಾಗಿದೆ. ಸರ್ಕಾರಿ ಶಾಲೆಗಳನ್ನು ಉನ್ನತಿಕರಿಸಲಾಗಿದೆ ಸರ್ಕಾರಿ ಶಾಲೆಗಳಿಗೆ ಕೇರಳದಲ್ಲಿ ಹೆಚ್ಚಿನ ಬೇಡಿಕೆ ಇದೆ ಆದರೆ ಕರ್ನಾಟಕದಲ್ಲಿ ಶಿಕ್ಷಣದ ಕಥೆ ಏನಾಗಿದೆ. ನಿರಂತರವಾಗಿ ಕನ್ನಡ ಮತ್ತು ಸರ್ಕಾರಿ ಶಾಲೆಗಳನ್ನು ಮುಚ್ಚಲಾಗುತ್ತಿದೆ. ಭಾರತವನ್ನು ಹೊರತುಪಡಿಸಿದರೆ ಉಳಿದೆಲ್ಲ ರಾಷ್ಟ್ರಗಳಲ್ಲೂ ಬೇಡಿಕೆಗೆ ಅನುಗುಣವಾಗಿ ಕೋವಿಡ್ ಉತ್ತಮ ಗುಣಮಟ್ಟದ ಚಿಕಿತ್ಸೆಯನ್ನು ನೀಡಿದವು. ಜನರಿಗೆ ಒಳ್ಳೆಯದನ್ನು ಮಾಡಿ ಅನುಕೂಲ ಕಲ್ಪಿಸಿಕೊಟ್ಟು ಅಧಿಕಾರಿಕೆ ಬರಬೇಕು ಎಂಬ ಹಂಬಲ ಬಿಜೆಪಿಗಿಲ್ಲ. ಶಾಸಕರನ್ನು ಕುದುರೆ ವ್ಯಾಪಾರದಲ್ಲಿ ಖರೀದಿ ಮಾಡಿಕೊಂಡು ಅಧಿಕಾರಕ್ಕೆ ಬಂದರೆ ಸಾಕು ಎಂದು ಭಾವಿಸಿದ್ದಾರೆ. ಇಂಥವರನ್ನು ರಾಜ್ಯ ದೇಶದಿಂದ ಓಡಿಸಬೇಕಿದೆ. ಹೋರಾಟ ಮಾಡುವ ಜನರನ್ನು ಕೊಂಡುಕೊಳ್ಳಲು ಸಾಧ್ಯವಿಲ್ಲ ಎಂದರು.

ರಾಜ್ಯಗಳಿಗೆ ಹೆಚ್ಚು ಅಧಿಕಾರ ಕೊಡಬೇಕು ಎಂಬುದನ್ನು ಕೇಂದ್ರ ಸರ್ಕಾರ ಮೊಟಕುಗೊಳಿಸುತ್ತುದೆ. ನಮ್ಮ ಸಂವಿಧಾನದ ತಿರುಚಿವ ಕೆಲಸ ನಡೆಯುತ್ತಿದೆ. ಬ್ರಿಟಿಷರನ್ನು ಹೇಗೆ ಜನರು ಭಾರತ ಬಿಟ್ಟು ಓಡಿಸಿದೇವೋ ಹಾಗೆ ದೊಡ್ಡ ದೊಡ್ಡ ಕಂಪನಿಯ ಮಾಲೀಕರು ಮತ್ತು ಕೋಮು ದ್ವೇಷವನ್ನು ಹಾಗೂ ಸರ್ಕಾರ ಜನ ವಿರೋಧಿ ನೀತಿಗಳನ್ನು ಓಡಿಸಿ ಬಿಜೆಪಿಯನ್ನು ನಾವು ಮಣಿಸಬೇಕಾಗಿದೆ ಎಂದರು.

ಉದ್ಘಾಟನೆಗೂ ಮೊದಲು ಬೃಹತ್ ಮೆರವಣಿಗೆ ನಡೆಯಿತು. ಕೂಲಿಕಾರರು ಬಾಗೇಪಲ್ಲಿಯ ಪ್ರಮುಖ ನಗರಗಳಲ್ಲಿ ಘೋಷಣೆ, ಹಾಡುಗಳ ಮೂಲಕ ಜನಮನ ಸೆಳೆದರು. ನಂತರ ನಡೆದ ಬೃಹತ್ ಬಹಿರಂಗೆ ಸಭೆಯಲ್ಲಿ ಸಾವಿರಾರು ಜನ ಭಾಗಿಯಾಗಿದ್ದರು.

ವೇದಿಕೆಯ ಮೇಲೆ ರಾಜ್ಯಸಭಾ ಸದಸ್ಯರಾದ ಶಿವದಾಸನ್, ಕೃಷಿ ಕೂಲಿಕಾರರ ಸಂಘಟನೆಯ ಪ್ರಧಾನ ಕಾರ್ಯದರ್ಶಿ ಬಿ.ವೆಂಕಟ್, ಮುಖಂಡರಾದ ಕೆ.ಎಸ್.ಲಕ್ಷ್ಮೀ, ಜಿ. ಎನ್.ನಾಗರಾಜ್, ಚಂದ್ರಪ್ಪ ಹೋಸ್ಕೇರಾ, ಡಾ. ಅನೀಲ್ ಕುಮಾರ್, ಸಾವಿತ್ರಮ್ಮ, ಜಯರಾಮರೆಡ್ಡಿ, ಎಂ.ಪಿ.ಮುನಿವೆಂಕಟಪ್ಪ ಇದ್ದರು. ಸಭೆಯ ಅಧ್ಯಕ್ಷತೆಯನ್ನು ಪ್ರಾಂತ ಕೃಷಿ ಕೂಲಿಕಾರರ ಸಂಘದ ರಾಜ್ಯಾಧ್ಯಕ್ಷರಾದ ನಿತ್ಯಾನಂದ ಸ್ವಾಮಿ ವಹಿಸಿದ್ದರು.

ವರದಿ: ಬಿ.ಎ.ಮಧುಕುಮಾರ

ರಸ್ತೆ ಬಳಕೆದಾರರಿಂದ ಟೋಲ್ ಸಂಗ್ರಹವೇ.... ಪುಟ 8 ರಿಂದ

ಮೂರು ದಶಕಗಳಿಗಿಂತ ಹೆಚ್ಚು ಸಮಯ ತೆಗೆದುಕೊಂಡರೂ ಇದನ್ನು ಮುಂದುವರಿಸ ಲಾಗುತ್ತದೆ ಎಂದು ಅದು ಹೇಳಿದೆ.

ತಿರುಚ್ಚಿ ಮೂಲದ ವಕೀಲ ಎ. ಜೋಸೆಫ್ ಸಗಾಯರಾಜ್ ಅವರು ಸಲ್ಲಿಸಿದ ಸಾರ್ವಜನಿಕ ಹಿತಾಸಕ್ತಿ ಅರ್ಜಿಗೆ ಪ್ರತಿಕ್ರಿಯೆಯಾಗಿ ಪೆಬ್ರವರಿ, 4, 2020ರಲ್ಲಿ ಎನ್‌ಎಚ್‌ಎಐ ಈ ರೀತಿ ಹೇಳಿದೆ. ತಾಂಬರಂ–ತಿಂಡಿವನಂ ವಿಭಾಗದ ಆತೂರ್ ಮತ್ತು ಪರನೂರ್ ಟೋಲ್ ಪ್ಲಾಜಾಗಳಲ್ಲಿ ಟೋಲ್ ಟೋಲ್ ಸಂಗ್ರಹದ ಅವಧಿ ನವೆಂಬರ್ 2019 ರಲ್ಲಿ ಕೊನೆಗೊಳ್ಳುತ್ತದೆ. ಆದರೂ ಅದನ್ನು ಮುಂದುವರಿಸಿರುವುದನ್ನು ಪ್ರಶ್ನಿಸಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಲಾಗಿತ್ತು. ಈ ಸಂದ್ರಭದಲ್ಲಿ ವಕೀಲ ಎಂ.ಜೆ. ಜಸೀಮ್ ಮೊಹಮ್ಮದ್ ಅವರು ಟೋಲ್ ನ ಅಂತ್ಯವಿಲ್ಲದ ಸಂಗ್ರಹವು "ತೆರಿಗೆ ಭಯೋತ್ಪಾದನೆ" ಎಂದು ವಾದಿಸಿದರು.

ಜಿಲ್ಲಾಧಿಕಾರಿಗೆ ಮನವಿ ಪತ್ರ;

ಹೆಜಮಾಡಿ ಟೋಲ್ ಫ್ಲಾಝಾದಲ್ಲಿ ಸುರತ್ಕಲ್ ಟೋಲ್ ನ ಸುಂಕ ಸಂಗ್ರಹಕ್ಕೆ ಅವಕಾಶ ನೀಡಬಾರದು ಹಾಗೂ ತಕ್ಷಣವೇ ಜಿಲ್ಲಾಡಳಿತದ ಸಭೆ ನಡೆಸಬೇಕೆಂದು ಒತ್ತಾಯಿಸಿ, ಉಡುಪಿ ಜಿಲ್ಲಾಧಿಕಾರಿಗೆ ಡಿಸೆಂಬರ್ 3 ರಂದು ಟೋಲ್ ಗೇಟ್ ವಿರೋಧಿ ಹೋರಾಟ ಸಮಿತಿಯ ನಿಯೋಗ ಮನವಿ ಸಲ್ಲಿಸಿತು.

ಸುರತ್ಕಲ್ ಟೋಲ್ ಗೇಟ್ ನಲ್ಲಿ ಸಂಗ್ರಹಿಸುತ್ತಿದ್ದ ಸುಂಕವನ್ನು ಇನ್ನು ಮುಂದೆ ಹೆಜಮಾಡಿಯ ಟೋಲ್ ಕೇಂದ್ರದಲ್ಲಿ ಸಂಗ್ರಹಿಸಲು ಆದೇಶ ಹೊರಡಿಸಿರುವುದು ಆತಂಕಕಾರಿಯಾಗಿದೆ. ಇದು ಜನರ ಆಕ್ರೋಶಕ್ಕೆ ಕಾರಣವಾಗಿದೆ. ಹೆಜಮಾಡಿಯ ನವಯುಗ್ ಟೋಲ್ ಗೇಟ್ ನಲ್ಲಿ ಸುರತ್ಕಲ್ ಟೋಲ್ ಸಂಗ್ರಹದ ಆದೇಶ ಜಾರಿಯಾದಲ್ಲಿಎರಡೂ ಜಿಲ್ಲೆಯ ಜನರಿಗೆ ತೊಂದರೆಯಾಗಲಿದೆ. ಅದರಲ್ಲೂ ಉಡುಪಿ ಜಿಲ್ಲೆಯ ಜನರ ಮೇಲೆ ಸುಂಕದ ಭಾರ ಅತ್ಯಂತ ಹೆಚ್ಚು ಭಾದಿಸಲಿದೆ ಎಂದು ಮನವಿಯಲ್ಲಿಆರೋಪಿಸಲಾಗಿದೆ.

ಪಡುಬಿದ್ರೆಯಿಂದ ಮೂಲ್ಕಿಯ ಆರು ಕಿ.ಮೀ. ಏಕ ಮುಖ ಪ್ರಯಾಣಕ್ಕೆ ಕಾರಿನಲ್ಲಿ100 ರೂ. ಪಾವತಿಸಬೇಕಾಗುತ್ತದೆ. ಇನ್ನು ಸ್ಥಳೀಯ ಕೆಂಪು ಕಲ್ಲು, ಜಲ್ಲಿ ಮುಂತಾದ ನಿರ್ಮಾಣ ಸಾಮಗ್ರಿಗಳನ್ನು ಸುರತ್ಕಲ್, ಪಡುಬಿದ್ರೆ, ಕಾಪು, ಕಾರ್ಕಳ ಮಧ್ಯೆ ದಿನ ನಿತ್ಯ ಸಾಗಾಟ ಮಾಡುವ ವಾಹನಗಳ ಮೇಲೆ ಬೀಳುವ ದುಬಾರಿ ಟೋಲ್ ಸಾಮಾನ್ಯ ಜನರಿಗೆ ದೊಡ್ಡ ಹೊಡೆತ ಬೀಳಲಿದೆ. ಜಿಲ್ಲಾಡಳಿತ ಈ ಎಲ್ಲಾ ಅಂಶಗಳನ್ನು ಪರಿಗಣಿಸಿ ಹೆದ್ದಾರಿ ಪ್ರಾಧಿಕಾರದ ಆದೇಶ ತಕ್ಷಣಕ್ಕೆ ಜಾರಿಗೆ ಅವಕಾಶ ನೀಡಬಾರದು. ಈಗಿನ ಆದೇಶ ಹಿಂಪಡೆಯಲು ಪ್ರಯತ್ನಗಳನ್ನು ನಡೆಸಬೇಕು ಎಂದು ನಿಯೋಗ ಒತ್ತಾಯಿಸಿದೆ.

ಹೆಜಮಾಡಿಯಲ್ಲಿ ಹೆಚ್ಚುವರಿ ಸುಂಕ ಸಂಗ್ರಹ ಆರಂಭಿಸಿದಲ್ಲಿ ಸುರತ್ಕಲ್ ಮಾದರಿಯಲ್ಲಿ ಹೋರಾಟ ನಡೆಸಲಾಗುವುದು. ಎಂದು ನಿಯೋಗ ಎಚ್ಚರಿಕೆ ನೀಡಿತು.

ನಿಯೋಗದಲ್ಲಿ ಮಾಜಿ ಸಚಿವ ವಿನಯ ಕುಮಾರ್ ಸೊರಕೆ, ಟೋಲ್ ಗೇಟ್ ವಿರೋಧಿ ಹೋರಾಟ ಸಮಿತಿ ಸಂಚಾಲಕ ಮುನೀರ್ ಕಾಟಿಪಳ್ಳ, ಸಹ ಸಂಚಾಲಕ ಶೇಖರ ಹೆಜಮಾಡಿ, ಮಾಜಿ ಶಾಸಕ ಗೋಪಾಲ ಪೂಜಾರಿ, ಪ್ರಮುಖರಾದ ಕಿಶನ್ ಹೆಗ್ಡೆ ಕೊಳ್ಕೆ ಬೈಲು, ರಮೇಶ್ ಕಾಂಚನ್, ಪ್ರಖ್ಯಾತ್ ಶೆಟ್ಟಿ, ಕವಿರಾಜ್ ಎಸ್., ಪ್ರಶಾಂತ್ ಪೂಜಾರಿ, ಶರತ್ ಶೆಟ್ಟಿ, ಶ್ರೀನಿವಾಸ್ ಹೆಬ್ಬಾರ್, ಸಾಯಿರಾಜ್ ಕಿದಿಯೂರು, ಯತೀಶ್ ಕರ್ಕೇರ ಮೊದಲಾದವರು ಉಪಸ್ಥಿತರಿದ್ದರು. ■

50 ಲಕ್ಷ ಮಂದಿ ಭಾಗವಹಿಸಿದ ನವಂಬರ್ 26ರ ದೇಶವ್ಯಾಪಿ 'ರಾಜಭವನ ಚಲೋ' ಕಾರ್ಯಾಚರಣೆ

ರೈತರ ಮುಂದಿನ ಹಂತದ ಪ್ರತಿಭಟನೆಯ ಆರಂಭದ ಸೂಚನೆ–ಎಸ್‌ಕೆಎಂ



ಸಂಯುಕ್ತ ಕಿಸಾನ್ ಮೋರ್ಚಾದ(ಎಸ್‌ಕೆಎಂ) ಕರೆಯ ಮೇರೆಗೆ ನವಂಬರ್ 26 ರಂದು ದೇಶಾದ್ಯಂತ ರೈತರು, ಕಾರ್ಮಿಕರು, ವಿದ್ಯಾರ್ಥಿಗಳು, ಯುವಕರು, ಮಹಿಳೆಯರು ಮತ್ತು ಸಾಮಾನ್ಯ ಜನರ ಬೆಂಬಲದೊಂದಿಗೆ ಮೆಗಾ ಪಾದಯಾತ್ರೆ ಮತ್ತು ರ್‍ಯಾಲಿಗಳನ್ನು ನಡೆಸಿದರು. 25 ರಾಜ್ಯಗಳ ರಾಜಧಾನಿಗಳು, 300 ಕ್ಕೂ ಹೆಚ್ಚು ಜಿಲ್ಲಾ ಕೇಂದ್ರಗಳು ಮತ್ತು ಹಲವಾರು ತಾಲ್ಲೂಕು ಕೇಂದ್ರಗಳಲ್ಲಿ ಪ್ರತಿಭಟನಾ ಸಭೆಗಳನ್ನು ನಡೆಸಲಾಯಿತು. ಒಟ್ಟಾರೆಯಾಗಿ, ಭಾರತದಾದ್ಯಂತ 3000 ಕ್ಕೂ ಹೆಚ್ಚು ಪ್ರತಿಭಟನೆಗಳು ನಡೆದಿವೆ ಎಂದು ಅಂದಾಜಿಸಲಾಗಿದೆ. ರೈತ ವಿರೋಧಿ ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರದ ವಿರುದ್ಧ ತಮ್ಮ ಪ್ರತಿಭಟನೆಯನ್ನು ದಾಖಲಿಸಲು ಮತ್ತು ರೈತರ ಬೇಡಿಕೆಯ ಜ್ಞಾಪಕ ಪತ್ರವನ್ನು ಕಳುಹಿಸಲು 'ರಾಜ್ ಭವನ ಚಲೋ'ಗಳಲ್ಲಿ 50 ಲಕ್ಷಕ್ಕೂ ಹೆಚ್ಚು ಜನರು ಬೀದಿಗಿಳಿದರು. ಕೇಂದ್ರದಲ್ಲಿ ಆಡಳಿತ ನಡೆಸುತ್ತಿರುವ ಪಕ್ಷದ ರೈತ ವಿರೋಧಿ ಚಟುವಟಿಕೆಯನ್ನು ಮಧ್ಯಪ್ರವೇಶಿಸಿ ನಿಲ್ಲಿಸುವಂತೆ ರಾಜ್ಯಪಾಲರ ಮೂಲಕ ರಾಷ್ಟ್ರಪತಿಗಳಿಗೆ ಮನವಿ ಸಲ್ಲಿಸಲಾಯಿತು.

ಚಂಡೀಗಢ, ಲಕ್ನೋ, ಪಾಟ್ನಾ, ಕೋಲ್ಕತ್ತಾ, ತಿರುವನಂತಪುರ, ಚೆನ್ನೈ, ಹೈದರಾಬಾದ್, ಭೋಪಾಲ್, ಜೈಪುರ ಮತ್ತು ಇತರ ಹಲವು ರಾಜ್ಯಗಳ ರಾಜಧಾನಿಗಳಲ್ಲಿ ಲಕ್ಷಾಂತರ ಜನರ ಬೃಹತ್ ಸಮಾವೇಶಗಳು ನಡೆದವು.



ಎಲ್ಲಾ ರೈತರಿಗೆ ಎಲ್ಲಾ ಉತ್ಪನ್ನಗಳಿಗೆ ಸಿ2+50% ಸೂತ್ರದಂತೆ ಕಾನೂನುಬದ್ಧವಾಗಿ ಖಾತರಿಪಡಿಸಿದ ಕನಿಷ್ಟ ಬೆಂಬಲ ಬೆಲೆ (ಎಂಸ್‌ಪಿ), ಸಮಗ್ರ ಸಾಲ ಮನ್ನಾ ಯೋಜನೆಯ ಮೂಲಕ ಋಣಭಾರದಿಂದ ಮುಕ್ತಿ ,ವಿದ್ಯುತ್ ತಿದ್ದುಪಡಿ ಮಸೂದೆ 2022 ರ ವಾಪಸಾತಿ, ಲಖಿಂಪುರಖೇರಿ ರೈತರ ಹತ್ಯಾಕಾಂಡದಲ್ಲಿ ಆರೋಪಿಯಾಗಿರುವ ಕೇಂದ್ರ ಗೃಹ ವ್ಯವಹಾರಗಳ ರಾಜ್ಯ ಸಚಿವ ಅಜಯ್ ಮಿಶ್ರಾಟೆನಿ ವಿರುದ್ಧ ಕಾನೂನು ಕ್ರಮ, ನೈಸರ್ಗಿಕ ವಿಕೋಪಗಳಿಂದ ಬೆಳೆ ನಷ್ಟಕ್ಕೆ ರೈತರಿಗೆ ತ್ವರಿತವಾಗಿ ಪರಿಹಾರ ನೀಡಲು ಸಮಗ್ರ ಮತ್ತು ಪರಿಣಾಮಕಾರಿ ಬೆಳೆ ವಿಮಾಯೋಜನೆ, ಎಲ್ಲಾ ಅತಿ ಸಣ್ಣ, ಸಣ್ಣ ಮತ್ತು ಮಧ್ಯಮ ಪ್ರಮಾಣದ ರೈತರು ಮತ್ತು ಕೃಷಿ ಕಾರ್ಮಿಕರಿಗೆ ಮಾಸಿಕ 5,000 ರೂ.ಗಳ ರೈತ ಪಿಂಚಣಿ, ರೈತ ಚಳವಳಿಯ ಸಂದರ್ಭದಲ್ಲಿ ರೈತರ ವಿರುದ್ಧ ದಾಖಲಾಗಿರುವ ಎಲ್ಲಾ ಸುಳ್ಳು ಪ್ರಕರಣಗಳನ್ನು ಹಿಂಪಡೆಯುವುದು, ರೈತರ ಚಳುವಳಿಯಲ್ಲಿ ಹುತಾತ್ಮರಾದ ಎಲ್ಲಾ ರೈತರ ಕುಟುಂಬಗಳಿಗೆ ಪರಿಹಾರ ಪಾವತಿ ಮತ್ತು ಆಯಾ ರಾಜ್ಯಗಳ ಪ್ರಮುಖ ಸ್ಥಳೀಯ ಬೇಡಿಕೆಗಳನ್ನು ಈ ಕಾರ್ಯಾಚರಣೆಯಲ್ಲಿ ಆಗ್ರಹಿಸಲಾಯಿತು ಎಂದು ಎಸ್‌ಕೆಎಂ ನೀಡಿರುವ ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದೆ.

ನವೆಂಬರ್ 26, 73 ವರ್ಷಗಳ ಹಿಂದೆ ನಮಗೆ ನಮ್ಮ ಸಂವಿಧಾನವನ್ನು ಅರ್ಪಿಸಿಕೊಂಡ ದಿನ, ಇದು ನಂತರ ದೇಶದ ಕಾನೂನುಗಳ ಅಡಿಪಾಯವಾಯಿತು ಎಂದಿರುವ ಎಸ್‌ಕೆಎಂ ಪತ್ರಿಕಾ ಹೇಳಿಕೆ, 2020 ರಲ್ಲಿ ಎಸ್‌ಕೆಎಂನ ಐತಿಹಾಸಿಕ "ದೆಹಲಿ ಚಲೋ" ಆಂದೋಲನ ಪ್ರಾರಂಭವಾದದ್ದು ಕೂಡ ಇದೇ ದಿನದಂದು ಎಂದು ನೆನಪಿಸಿದೆ. ಇದು ವಿಶ್ವದ ಅತಿದೊಡ್ಡ ಮತ್ತು ದೊಡ್ಡ ರೈತ ಚಳವಳಿಯಾಗಿದೆ ಮತ್ತು ರೈತರನ್ನು ತಮ್ಮ ಭೂಮಿಯಿಂದ ಮತ್ತು ಜೀವನಾಧಾರದಿಂದ ಹೊರದಬ್ಬುವ ಕಾರ್ಪೊರೇಟ್–ರಾಜಕೀಯ ನಂಟಿನ ವಿರುದ್ಧ ರೈತರ ಅದ್ಭುತ ವಿಜಯಕ್ಕೆ ದಾರಿ ಮಾಡಿಕೊಟ್ಟಿತು. ಈ ವರ್ಷದ ನವೆಂಬರ್ 26 ರಂದು ನಡೆದಿರುವ ರಾಷ್ಟ್ರವ್ಯಾಪಿ "ರಾಜಭವನ ಚಲೋ" ರೈತರ ಮುಂದಿನ ಹಂತದ ಪ್ರತಿಭಟನೆಯ ಆರಂಭವನ್ನು ಸೂಚಿಸುತ್ತದೆ ಎಂದು ಅದು ಹೇಳಿದೆ.

ಈ ಕಾರ್ಯಕ್ರಮದ ಭವ್ಯ ಯಶಸ್ಸಿಗಾಗಿ ಎಲ್ಲಾ ರೈತರು, ಕೃಷಿ ಕೂಲಿಕಾರರು, ಕಾರ್ಮಿಕರು, ವಿದ್ಯಾರ್ಥಿಗಳು, ಯುವಕರು, ಮಹಿಳೆಯರು ಮತ್ತು ಇತರ ಸಂಬಂಧಪಟ್ಟ ನಾಗರಿಕರನ್ನು ಅಭಿನಂದಿಸಿರುವ ಸಂಯುಕ್ತ ಕಿಸಾನ್ ಮೋರ್ಚಾ, ಬೇಡಿಕೆಗಳು ಈಡೇರುವವರೆಗೆ ದೇಶಾದ್ಯಂತ ಎಲ್ಲರೂ ಅವಿರತ, ಕಟಿಬದ್ಧ ರಾಷ್ಟ್ರವ್ಯಾಪಿ ಹೋರಾಟಗಳಿಗೆ ಸಿದ್ಧರಾಗಬೇಕು, ಮತ್ತು ಈ ಹೋರಾಟಗಳಲ್ಲಿ ಭಾಗಿಯಾಗಬೇಕು ಎಂದು ಮನವಿ ಮಾಡಿದೆ. ■

ಜಿಯಾಂಗ್‌ಝೆಮಿನ್ ನಿಧನ



ಚೀನಾ ಕಮ್ಯುನಿಸ್ಟ್ ಪಕ್ಷ(ಸಿಪಿಸಿ)ದ ಮಾಜಿ ಪ್ರಧಾನ ಕಾರ್ಯದರ್ಶಿ ಮತ್ತು ಚೀನಾ ಜನತಾ ಗಣತಂತ್ರದ ಅಧ್ಯಕ್ಷ ಕಾಮ್ರೇಡ್ ಜಿಯಾಂಗ್ ಜೆಮಿನ್ ಅವರ ನಿಧನದ ಸುದ್ದಿಯ ಬಗ್ಗೆ ಸಿಪಿಐ(ಎಂ) ಪೊಲಿಟ್‌ಬ್ಯುರೊ ದುಃಖ ವ್ಯಕ್ತಪಡಿಸಿದೆ. ಅವರಿಗೆ 96 ವರ್ಷ ವಯಸ್ಸಾಗಿತ್ತು.

ಕಾಮ್ರೇಡ್ ಜಿಯಾಂಗ್ ಜೆಮಿನ್ ಅವರು ಸಿಪಿಸಿ ಯ ಮೂರನೇ ಪೀಳಿಗೆಗೆ ಸೇರಿದ ಪ್ರಮುಖ ನಾಯಕರಾಗಿದ್ದರು. ಅವರ 'ಥಿಯರಿ ಆಫ್ ತ್ರೀ ರೆಪ್ರೆಸೆಂಟ್ಸ್' (ಮೂರು ಪ್ರಾತಿನಿಧ್ಯಗಳ ಸಿದ್ಧಾಂತ) ಗೆ ಅವರನ್ನು ಸ್ಮರಿಸಿಕೊಳ್ಳಲಾಗುತ್ತಿದೆ. ಅವರು ವಿವಿಧ ಜವಾಬ್ದಾರಿಗಳಲ್ಲಿ ಪಕ್ಷ ಮತ್ತು ದೇಶಕ್ಕೆ ಸೇವೆ ಸಲ್ಲಿಸಿದರು ಮತ್ತು 1990 ರ ದಶಕದಲ್ಲಿ ಚೀನಾ ಅಸಾಧಾರಣ ಆರ್ಥಿಕ ಶಕ್ತಿಯಾಗಿ ಬೆಳೆಯಲು ಅಡಿಪಾಯ ಹಾಕಿದರು.

ಕಾಮ್ರೇಡ್ ಜಿಯಾಂಗ್ ಝೆಮಿನ್ ಅವರ ನಿಧನಕ್ಕೆ ಸಿಪಿಐ(ಎಂ) ತನ್ನ ಆಳವಾದ ದುಃಖವನ್ನು ಮತ್ತು ಸಿಪಿಸಿ ಮತ್ತು ಚೀನಾದ ಜನರಿಗೆ ತನ್ನ ಹೃತ್ಪೂರ್ವಕ ಸಹಾನುಭೂತಿಯನ್ನು ವ್ಯಕ್ತಪಡಿಸಿದೆ.

ವಿದ್ಯುತ್ ತಿದ್ದುಪಡಿ ಮಸೂದೆ ಮತ್ತು ಖಾಸಗೀಕರಣದ ವಿರುದ್ಧ

ವಿದ್ಯುತ್ ಕಾರ್ಮಿಕರು ಮತ್ತು ಎಂಜಿನಿಯರ್‌ಗಳ ಬೃಹತ್ ರ್‍ಯಾಲಿ


ವಿದ್ಯುತ್ ನೌಕರರು ಮತ್ತು ಎಂಜಿನಿಯರ್‌ಗಳ ರಾಷ್ಟ್ರೀಯ ಸಮನ್ವಯ ಸಮಿತಿಯ (ಎನ್‌ಸಿಸಿಒಇಇಇ) ಕರೆಯ ಮೇರೆಗೆ ರಾಜಧಾನಿ ದೆಹಲಿಯಲ್ಲಿ ನವೆಂಬರ್ 23 ರಂದು ದೇಶದ ವಿವಿಧ ರಾಜ್ಯಗಳ ವಿದ್ಯುತ್ ನೌಕರರು ಮತ್ತು ಎಂಜಿನಿಯರ್‌ಗಳ ಬೃಹತ್ ರ್‍ಯಾಲಿ ಮತ್ತು ಮತಪ್ರದರ್ಶನ ಜಂತರ್ ಮಂತರ್‌ನಲ್ಲಿ ನಡೆಯಿತು.

ಆಲ್ ಇಂಡಿಯಾ ಪವರ್ ಇಂಜಿನಿಯರ್ಸ್ ಫೆಡರೇಶನ್, ಎಲೆಕ್ಟ್ರಿಸಿಟಿ ಎಂಪ್ಲಾಯೀಸ್ ಫೆಡರೇಶನ್ ಆಫ್ ಇಂಡಿಯಾ, ಆಲ್ ಇಂಡಿಯಾ ಪವರ್ ಡಿಪ್ಲೋಮಾ ಇಂಜಿನಿಯರ್ಸ್ ಫೆಡರೇಶನ್, ಆಲ್ ಇಂಡಿಯಾ ಫೆಡರೇಶನ್ ಆಫ್ ಎಲೆಕ್ಟ್ರಿಸಿಟಿ ಎಂಪ್ಲಾಯೀಸ್, ಇಂಡಿಯನ್ ನ್ಯಾಷನಲ್ ಇಲೆಕ್ಟ್ರಿಸಿಟಿ ಎಂಪ್ಲಾಯೀಸ್ ಫೆಡರೇಶನ್ ಮತ್ತು ರಾಜ್ಯಗಳಲ್ಲಿನ ವಿವಿಧ ಸ್ವತಂತ್ರ ಒಕ್ಕೂಟಗಳು ಎನ್‌ಸಿಸಿಒಇಇಇ ಅಡಿಯಲ್ಲಿವೆ.

ವಿದ್ಯುತ್ (ತಿದ್ದುಪಡಿ) ಮಸೂದೆಯು ಪ್ರಜಾಪ್ರಭುತ್ವಕ್ಕೆ ವಿರುದ್ಧವಾಗಿದೆ ಎಂದು ಹೇಳಿದರು. ಲೋಕಸಭೆಯಲ್ಲಿ ಇದನ್ನು ಮುಂಗಾರು ಅಧಿವೇಶನದಲ್ಲಿ ಮಂಡಿಸಿರುವುದಕ್ಕೆ ದೇಶಾದ್ಯಂತ ವಿದ್ಯುತ್ ನೌಕರರಲ್ಲಿ ತೀವ್ರ ಆಕ್ರೋಶ ವ್ಯಕ್ತವಾಗಿದೆ. ದಾದ್ರಾ ನಗರ ಹವೇಲಿ, ದಮನ್ ಮತ್ತು ದಿಯುನಲ್ಲಿನ ವಿದ್ಯುತ್ ಇಲಾಖೆಯನ್ನು ಕೇಂದ್ರ ಸರ್ಕಾರವು ಖಾಸಗೀಕರಣಗೊಳಿಸಿರುವುದು ಮತ್ತು ಖಾಸಗೀಕರಣದ ಚಂಡೀಗಢ ಮತ್ತು ಪುದುಚೇರಿ ಕೇಂದ್ರಾಡಳಿತ ಪ್ರದೇಶಗಳಲ್ಲಿ ಪ್ರದೇಶಗಳಲ್ಲಿ ಖಾಸಗೀಕರಣದ ಪ್ರಕ್ರಿಯೆ ನಡೆಯುತ್ತಿರುವ ರೀತಿಗೆ ದೇಶದ ವಿವಿಧ ರಾಜ್ಯಗಳ ಸಾವಿರಾರು ವಿದ್ಯುತ್ ನೌಕರರು ಒಟ್ಟಾಗಿ ತಮ್ಮ ಆಕ್ರೋಶವನ್ನು ವ್ಯಕ್ತಪಡಿಸಿದ್ದಾರೆ.

ಇದರಿಂದಾಗಿ ಪ್ರತಿಭಟನೆಯಲ್ಲಿ ಭಾಗವಹಿಸಲು ಸಾವಿರಾರು ಸಂಖ್ಯೆಯಲ್ಲಿ ವಿದ್ಯುತ್ ನೌಕರರು ದೆಹಲಿಗೆ ಬಂದಿದ್ದರು. ವಿದ್ಯುತ್ (ತಿದ್ದುಪಡಿ) ಮಸೂದೆ 2022 ಹಿಂಪಡೆಯುವುದು ಮತ್ತು ಖಾಸಗೀಕರಣ ಪ್ರಕ್ರಿಯೆಯನ್ನು ಸಂಪೂರ್ಣವಾಗಿ ಹಿಂಪಡೆಯುವುದು, ವಿದ್ಯುತ್ ನಿಗಮಗಳ ಸಮಗ್ರೀಕರಣ ಮತ್ತು ಕೇರಳದ ಕೆಎಸ್‌ಇಬಿ ಲಿಮಿಟೆಡ್ ಮತ್ತು ಹಿಮಾಚಲದ ಎಚ್‌ಪಿಎಸ್‌ಇಬಿ ಲಿಮಿಟೆಡ್ ರೀತಿಯಲ್ಲಿ ಎಲ್ಲಾ ರಾಜ್ಯಗಳಲ್ಲಿ ಎಸ್‌ಇಬಿ ಲಿಮಿಟೆಡ್‌ನ ಪುನರ್ರಚನೆ ಎಲ್ಲಾ ವಿದ್ಯುತ್ ಕಾರ್ಮಿಕರಿಗೆ ಹಳೆಯ ಪಿಂಚಣಿ ಮರುಸ್ಥಾಪಿಸಬೇಕು, ತೆಲಂಗಾಣ ಮತ್ತು ಪಂಜಾಬ್‌ನಂತೆ ಎಲ್ಲಾ ರಾಜ್ಯಗಳಲ್ಲಿ ಎಲ್ಲಾ ಹೊರಗುತ್ತಿಗೆ ಮತ್ತು ಗುತ್ತಿಗೆ ವಿದ್ಯುತ್ ನೌಕರರನ್ನು ಕಾಯಂಗೊಳಿಸಬೇಕು, ನಿಯಮಿತ ಹುದ್ದೆಗಳಲ್ಲಿ ನಿಯಮಿತ ನೇಮಕಾತಿ ಮಾಡಬೇಕು ಮತ್ತು ವಿದ್ಯುತ್ ಮೂಲಭೂತ ಹಕ್ಕು ಎಂದು ಘೋಷಿಸಬೇಕು ಇವು ವಿದ್ಯುತ್ ಕಾರ್ಮಿಕರ ಪ್ರಮುಖ ಬೇಡಿಕೆಗಳು.

ಸಿಐಟಿಯು ಪ್ರಧಾನ ಕಾರ್ಯದರ್ಶಿ ತಪನ್ ಸೇನ್ ಮತ್ತು ಅಖಿಲಭಾರತ ಕಿಸಾನ್ ಸಭಾ ಪ್ರಧಾನ ಕಾರ್ಯದರ್ಶಿ ರ್‍ಯಾಲಿಯನ್ನುದ್ದೇಶಿಸಿ ಮಾತನಾಡಿ ವಿದ್ಯುತ್ ನೌಕರರ ಈ "ವಿದ್ಯುತ್ ವಲಯ ಉಳಿಸಿ–ದೇಶ ಉಳಿಸಿ' ಚಳುವಳಿಗೆ ಬೆಂಬಲ ವ್ಯಕ್ತಪಡಿಸಿದರು. ಕೇಂದ್ರ ಸರ್ಕಾರವು ವಿದ್ಯುತ್ (ತಿದ್ದುಪಡಿ) ಮಸೂದೆ 2022 ಅನ್ನು ಅಂಗೀಕರಿಸುವ ಯಾವುದೇ ಏಕಪಕ್ಷೀಯ ಪ್ರಕ್ರಿಯೆಯನ್ನು ಮುಂದುವರೆಸಿದರೆ. ಅದು ಗಂಭೀರ ಪರಿಣಾಮಗಳನ್ನು ಬೀರುತ್ತದೆ. ಅದರ ವಿರುದ್ಧ ರಾಷ್ಟ್ರವ್ಯಾಪಿ ಆಂದೋಲನ ನಡೆಯಲಿದೆ, ಅದರ ಎಲ್ಲಾ ಜವಾಬ್ದಾರಿ ಕೇಂದ್ರ ಸರ್ಕಾರದ್ದಾಗುತ್ತದೆ ಎಂದು ರ್‍ಯಾಲಿ ಎಚ್ಚರಿಸಿತು. ■





ಚುನಾವಣಾ ಬಾಂಡ್‌ಗಳ ಮುದ್ರಣ, ಕಮಿಷನ್ ಮತ್ತು ಜಿಎಸ್‌ಟಿಗೆ ತೆರಿಗೆದಾರರ 9.5 ಕೋಟಿ ರೂ.

ಇದು ಅಮೃತ ಕಾಲ

ಡಿಸೆಂಬರ್ 6 ರಂದು ಸರ್ವೋಚ್ಚ ನ್ಯಾಯಾಲಯ ಜನವರಿ 2018ರಲ್ಲಿ ಆರಂಭಿಸಿದ ಚುನಾವಣಾ ಬಾಂಡ್‌ಗಳ ಅಪಾರದರ್ಶಕ ವ್ಯವಸ್ಥೆಗೆ ಸವಾಲು ಹಾಕಿರುವ ಅರ್ಜಿಗಳನ್ನು ಕೊನೆಗೂ ವಿಚಾರಣೆಗೆ ಎತ್ತಿಕೊಳ್ಳಲಿದೆ. ಈ ನಡುವೆ 22 ಹಂತಗಳಲ್ಲಿ ರಾಜಕೀಯ ಪಕ್ಷಗಳು ಈ ಬಾಂಡ್‌ಗಳ ಮೂಲಕ ಮೂಲಕ 10,791.50 ಕೋಟಿ ರೂಪಾಯಿಗಳಷ್ಟು ಅನಾಮಧೇಯ ದಾನಿಗಳಿಂದ ಸಂಗ್ರಹಿಸಿವೆ ಎಂದು ಮಾಹಿತಿ ಹಕ್ಕು ಅರ್ಜಿ ಮೂಲಕ ಸಿಕ್ಕಿರುವ ಮಾಹಿತಿ ತೋರಿಸುತ್ತದೆ.

ಅಲ್ಲದೆ, ಈ ಅಪಾರದರ್ಶಕ ಬಾಂಡ್‌ಗಳನ್ನು ಮುದ್ರಿಸಲು ಮತ್ತು ಕಮಿಷನ್ ಕೊಡಲು ಕೇಂದ್ರ ಸರಕಾರವೇ ಸುಮಾರು 9.5 ಕೋಟಿ ರೂ. ವೆಚ್ಚ ಮಾಡಿದೆ. ಇದು ತೆರಿಗೆದಾರರ ಹಣ ಎಂದು ಬೇರೆ ಹೇಳಬೇಕಾಗಿಲ್ಲ. ಇದು ಆರ್.ಟಿ.ಐ. ಕಾರ್ಯಕರ್ತ ಕಮೊಡೋರ್ (ನಿವೃತ್ತ) ಲೋಕೇಶ್ ಕೆ ಬಾತ್ರಾ ಅವರು ಸಲ್ಲಿಸಿದ ಮಾಹಿತಿ ಹಕ್ಕು (ಆರ್‌ಟಿಐ) ಅರ್ಜಿಗೆ ಕೇಂದ್ರ ಹಣಕಾಸು ಸಚಿವಾಲಯದ ಆರ್ಥಿಕ ವ್ಯವಹಾರಗಳ ಇಲಾಖೆಯಿಂದ ಸಿಕ್ಕ ಉತ್ತರದಿಂದ ತಿಳಿದು ಬಂದಿರುವ ಸಂಗತಿ.

ವಿಪರ್ಯಾಸವೆಂದರೆ, ಇತರ ವ್ಯವಹಾರಗಳಂತೆ ಈ ಬಾಂಡ್‌ಗಳನ್ನು ಖರೀದಿಸುವ 'ದಾನಿ'ಗಳು ಯಾವುದೇ ಶುಲ್ಕವನ್ನು (ಕಮಿಷನ್), ಇವುಗಳನ್ನು ವಿತರಿಸಲು ಅಧಿಕಾರ ಹೊಂದಿರುವ ಏಕೈಕ ಬ್ಯಾಂಕ್ -ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾಕ್ಕೆ ಪಾವತಿಸುವ ಅಗತ್ಯವಿಲ್ಲ. ಇವನ್ನು ವಿತರಿಸುವ ಕೆಲಸ ಮಾಡಿದಕ್ಕಾಗಿ ಬ್ಯಾಂಕಿಗೆ ಕಮಿಷನನ್ನು ಕೇಂದ್ರ ಸರಕಾರವೇ ಪಾವತಿ ಮಾಡುತ್ತದೆ ಮತ್ತು ಅವನ್ನು ಮುದ್ರಿಸುವ ವೆಚ್ಚವನ್ನೂ ಭರಿಸುತ್ತದೆ. ಅಂದರೆ ಅಂತಿಮವಾಗಿ, ತೆರಿಗೆದಾರರೇ ಈ ವೆಚ್ಚವನ್ನು ಭರಿಸುತ್ತಾರೆ.

ಸಿಂಹಪಾಲು 1 ಕೋಟಿ ರೂ. ಬಾಂಡ್‌ಗಳದ್ದು

ಇನ್ನೊಂದು ಗಮನಾರ್ಹ ಸಂಗತಿಯೆಂದರೆ ಇವುಗಳಲ್ಲಿ 93.67% ಬಾಂಡುಗಳು ತಲಾ 1 ಕೋಟಿ ರೂ.ಯವು. ಅಂದರೆ 1 ಕೋಟಿ ರೂ. ಅದಕ್ಕಿಂತ ಹೆಚ್ಚು ಕೊಡುವ ಈ 'ದಾನಿ'ಗಳು ಯಾರಿರಬಹುದು ಎಂದು ಯಾರಾದರೂ ಊಹಿಸಿಕೊಳ್ಳಬಹುದು.. ಈ ಬಾಂಡ್‌ಗಳನ್ನು 1000ರೂ., 10,000ರೂ., 1ಲಕ್ಷ ರೂ ಮತ್ತು 10ಲಕ್ಷ ರೂ. ಮುಖಬೆಲೆಯಲ್ಲೂ ಮುದ್ರಿಸಲಾಗುತ್ತದೆ. ಆದರೆ ಖರೀದಿಯಾಗುವುದು 1 ಕೋಟಿ ರೂ. ಅಥವ ಕೆಲವು 10 ಲಕ್ಷ ರೂ.ಗಳ ಮುಖಬೆಲೆಗಳದ್ದು ಮಾತ್ರ ಎಂದು ಹೇಳಲಾಗಿದೆ.

ಇದನ್ನು ಮುಂಗಂಡೇ ಈ ಅಪಾರದರ್ಶಕ ವ್ಯವಸ್ಥೆಗೆ ಭಾರೀ ವಿರೋಧ ಬಂದಿತ್ತು. ಆದರೂ ನಾಲ್ಕು ವರ್ಷಗಳ ನಂತರ ಇದರ ವಿಚಾರಣೆ ಡಿಸೆಂಬರ್ 6 ರಂದು ಆರಂಭವಾಗುತ್ತಿದೆ. ಅಸೋಸಿಯೇಷನ್ ಆಫ್ ಡೆಮಾಕ್ರಟಿಕ್ ರಿಫಾರ್ಮ್ಸ್(ಎಡಿಆರ್), ಸಿಪಿಐ(ಎಂ) ಮತ್ತು ಕಾಂಗ್ರೆಸ್ ಸೇರಿದಂತೆ ಹಾಕಿರುವ ಎಲ್ಲಾ ಅರ್ಜಿಗಳನ್ನು ಸುಪ್ರೀಂ ಕೋರ್ಟ್ ವಿಚಾರಣೆಗೆ ಎತ್ತಿಕೊಳ್ಳುವುದಾಗಿ ಹೇಳಿದೆ.

ಹಿಮಾಚಲ ಪ್ರದೇಶ ಮತ್ತು ಗುಜರಾತ್ ವಿಧಾನಸಭೆ ಚುನಾವಣೆಗೆ ಮುನ್ನ ಅಕ್ಟೋಬರ್ 1 ಮತ್ತು 10 ರ ನಡುವೆ ಈ ಬಾಂಡುಗಳ 22 ನೇ ಮಾರಾಟದಲ್ಲಿ ರಾಜಕೀಯ ಪಕ್ಷಗಳು 545 ಕೋಟಿ ರೂಪಾಯಿಗಳನ್ನು ಪಡೆದಿವೆ, ಇದಕ್ಕೆ ಮೊದಲು ಜುಲೈ ಮಾರಾಟದಲ್ಲಿ ಪಡೆದ ಹಣ 389.50 ಕೋಟಿ ರೂ. ಎಂದು ಬಾತ್ರಾ ಅವರು ಎಸ್‌ಬಿಐನಿಂದ ಪಡೆದ ಈ ಹಿಂದಿನ ಆರ್‌ಟಿಐ ಉತ್ತರ ತೋರಿಸಿತ್ತು.

10,791 ಕೋಟಿ ರೂ.ಗಳಲ್ಲಿ ರೂ. 10,767.88 ಕೋಟಿ ಮೌಲ್ಯದ ಬಾಂಡ್‌ಗಳನ್ನು ನಗದೀಕರಿಸಲಾಗಿದೆ, ಉಳಿದ ರೂ. 23.59 ಕೋಟಿಯನ್ನು ಪ್ರಧಾನ ಮಂತ್ರಿಗಳ ರಾಷ್ಟ್ರೀಯ ಪರಿಹಾರ ನಿಧಿಗೆ ವರ್ಗಾಯಿಸಲಾಗಿದೆ. ಇದರಲ್ಲಿ ದೆಹಲಿ (285.15 ಕೋಟಿ ರೂ.) ಅಗ್ರಸ್ಥಾನದಲ್ಲಿದ್ದರೆ, ಕೋಲ್ಕತ್ತಾ (ರೂ. 143.10 ಕೋಟಿ) ಮತ್ತು ಹೈದರಾಬಾದ್ (ರೂ. 67 ಕೋಟಿ) ನಂತರದ ಸ್ಥಾನದಲ್ಲಿವೆ. ಗ್ಯಾಂಗ್ಟಾಕ್ (2 ಕೋಟಿ ರೂ.), ಚೆನ್ನೈ (ರೂ. 10 ಕೋಟಿ) ಮತ್ತು ಭುವನೇಶ್ವರ (ರೂ. 35 ಕೋಟಿ)ದಲ್ಲಿರುವ ಎಸ್‌ಬಿಐ ಶಾಖೆಗಳಿಂದ ಈ ಬಾಂಡ್‌ಗಳ ನಗದೀಕರಣ ನಡೆದಿದೆ.

ಚುನಾವಣಾ ಆಯೋಗದ ಅಂಕಿ-ಅಂಶಗಳ ಪ್ರಕಾರ 2019-20ರಲ್ಲಿ ಕೇಂದ್ರದಲ್ಲಿ ಮತ್ತು ಬಹಳಷ್ಟು ರಾಜ್ಯಗಳಲ್ಲಿ ಆಳುವ ಬಿಜೆಪಿ 75% ಕ್ಕಿಂತ ಹೆಚ್ಚು ಬಾಂಡ್‌ಗಳನ್ನು ಗಿಟ್ಟಿಸಿಕೊಂಡಿದೆ.

ಗುಜರಾತಿನಲ್ಲಿ 94% ಬಿಜೆಪಿಗೆ

ಎ.ಡಿ.ಆರ್.ಕಲೆ ಹಾಕಿದ ಮಾಹಿತಿಗಳ ಪ್ರಕಾರ, ಮಾರ್ಚ್ 2018ರಿಂದ ಅಕ್ಟೋಬರ್ 2022ರ ನಡುವೆ ಸುಮಾರು 5 ವರ್ಷಗಳಲ್ಲಿ ಗುಜರಾತಿನಲ್ಲಿ ಸಂಗ್ರಹವಾದ 1571 ಬಾಂಡ್ ಕೊಡುಗೆಗಳ ಮೊತ್ತ 174 ಕೋಟಿ ರೂ. ಇದರಲ್ಲಿ 163 ಕೋಟಿ ರೂ. ಮೊತ್ತದ 1519 ಬಾಂಡ್‌ಗಳು ಬಿಜೆಪಿಗೆ ದಕ್ಕಿವೆ. ಅಂದರೆ 94% ದಷ್ಟು!

ಎರಡನೇ ಸ್ಥಾನದಲ್ಲಿರುವ ಕಾಂಗ್ರೆಸಿಗೆ ಸಿಕ್ಕಿರುವುದು 10.5 ಕೋಟಿ ರೂ. ಮತ್ತು ನಂತರದ ಸ್ಥಾನದಲ್ಲಿರುವ ಎಎಪಿಗೆ 32ಲಕ್ಷ ರೂ. ಇತರ ಎಲ್ಲ ಪಕ್ಷಗಳಿಗೆ ಸೇರಿ ಸಿಕ್ಕಿದ್ದು ಕೇವಲ 20 ಲಕ್ಷರೂ.

ರಾಷ್ಟ್ರೀಯ ಮಟ್ಟದಲ್ಲಿ 2017-18ರಿಂದ ಖರೀದಿಯಾದ ಚುನಾವಣಾ ಬಾಂಡುಗಳಲ್ಲಿ ಕನಿಷ್ಟ 65%ದಷ್ಟು ಬಿಜೆಪಿಗೆ ಸಿಕ್ಕಿದೆ ಮತ್ತು ಅದರಲ್ಲಿ ಅರ್ಧಕ್ಕೂ ಹೆಚ್ಚು ಒಂದೇ ಚುನಾವಣಾ ಟ್ರಸ್ಟಿನಿಂದ ಸಿಕ್ಕಿದೆ ಎಂದು ಹೇಳಲಾಗಿದೆ.

ಜಿಡಿಪಿ ಬೆಳವಣಿಗೆ ದರ 6.3% ಕ್ಕೆ ಇಳಿಕೆ ನಿರುದ್ಯೋಗ ದರ 8%ಕ್ಕೆ ಏರಿಕೆ ಜಿಎಸ್‌ಟಿ ಸಂಗ್ರಹದಲ್ಲಿ 11% ಏರಿಕೆ

ರಾಷ್ಟ್ರೀಯ ಅಂಕೆ-ಸಂಖ್ಯೆಗಳ ಕಚೇರಿ (ಎನ್‌ಎಸ್‌ಒ) ಬಿಡುಗಡೆ ಮಾಡಿರುವ ಇತ್ತೀಚಿನ ಅಂಕಿ-ಅಂಶಗಳ ಪ್ರಕಾರ ಅಕ್ಟೋಬರ್ ತಿಂಗಳಲ್ಲಿ ಜಿಡಿಪಿ ಬೆಳವಣಿಗೆ ದರ 6.3%ಕ್ಕೆ ಇಳಿದಿದೆ. ಎಂಟು ಪ್ರಧಾನ ವಲಯಗಳಲ್ಲಿ ಬೆಳವಣಿಗೆ ದರ ಈ ವರ್ಷದಲ್ಲೇ ಅತ್ಯಂತ ನಿಧಾನ ಗತಿಗೆ ಇಳಿದು ಕೇವಲ 0.1%ಕ್ಕೆ ಬಂದು ನಿಂತಿದೆ. ಹಿಂದಿನ ತಿಂಗಳು ಇದು 7.8% ಇತ್ತು.

ಜುಲೈ-ಸೆಪ್ಟಂಬರ್ ಅವಧಿಯಲ್ಲಿ ತಯಾರಿಕೆ ಮತ್ತು ಗಣಿಗಾರಿಕೆ ವಲಯದಲ್ಲಿ ಒಟ್ಟು ಮೌಲ್ಯ ಸೇರ್ಪಡೆ (ಜಿವಿಎ) ನಿರೀಕ್ಷೆಗಿಂತ ನಿಧಾನಗೊಂಡು 5.6% ದಾಖಲಿಸಿದೆ. ಭಾರೀ ಹಣದುಬ್ಬರ ಮತ್ತು ದುರ್ಬಲ ರಫ್ತುಗಳು ಇದರೊಡನೆ ಸೇರಿಕೊಂಡು ಜಿಡಿಪಿ ಬೆಳವಣಿಗೆ ದರವನ್ನು 6.3% ಕ್ಕೆ ಇಳಿಸಿವೆ. ಈ ಹಣಕಾಸು ವರ್ಷದ ಮೊದಲ ತ್ರೈಮಾಸಿಕದಲ್ಲಿ ಜಿವಿಎ ದರ 12.7% ಇತ್ತು ಮತ್ತು ಜಿಡಿಪಿ ಬೆಳವಣಿಗೆ ದರ 13.5%. ಇದರಿಂದಾಗಿಯಾದರೂ ವಾರ್ಷಿಕ ಬೆಳವಣಿಗೆ ದರ 6.8%ಕ್ಕಿಂತ ಕಡಿಮೆ ಇರಲಾರದು ಎಂದು ಕೇಂದ್ರ ಸರಕಾರದ ಮುಖ್ಯ ಆರ್ಥಿಕ ಸಲಹೆಗಾರರು ನಿರೀಕ್ಷೆ ಇಟ್ಟುಕೊಂಡಿದ್ದಾರೆ.

ಇದಾದ ನಂತರ ಬಂದಿರುವ ನಿರುದ್ಯೋಗದ ಅಂಕಿ-ಅಂಶಗಳು ಇನ್ನೂ ಆತಂಕಕಾರಿಯಾಗಿವೆ. ನವಮಬರ್ ತಿಂಗಳಲ್ಲಿ ನಿರುದ್ಯೋಗ ದರ 8%ಕ್ಕೇ ಏರಿದೆ. ಹಿಂದಿನ ತಿಂಗಳು ಇದು 7.7% ಇತ್ತು. ಅದರಲ್ಲೂ ನಗರಗಳಲ್ಲಿನ ನಿರುದ್ಯೋಗ ಇನ್ನೂ ತೀವ್ರವಾಗಿ ಏರಿದೆ. ಕಳೆದ ತಿಂಗಳ 7.21%ದಿಂದ 8.96%ಕ್ಕೆ ಏರಿದೆ7.77%ಕ್ಕೆ ಏರಿತ್ತು.

ಮುಂಬೈಯ ಸಿಎಂಐಇ. ಸಂಸ್ಥೆ ಈ ಅಂಕಿ-ಅಂಶಗಳನ್ನು ಬಿಡುಗಡೆ ಮಾಡಿದೆ. ಈ ನಡುವೆ ಕೇಂದ್ರ ಸರಕಾರದ ಎನ್‌ಎಸ್‌ಒ ಕೂಡ ಅಂಶಗಳನ್ನು ಪ್ರಕಟಿಸಿದೆ ಇದರ ಪ್ರಕಾರ ಜುಲೈ-ಸೆಪ್ಟಂಬರ್ ಅವಧಿಯಲ್ಲಿ 15 ವರ್ಷದ ಮೇಲ್ಪಟ್ಟವರ ನಿರುದ್ಯೋಗ ದರ 7.2%ಕ್ಕೆ ಇಳಿದಿದೆ.

ಆದರೆ ನವಂಬರ್ ತಿಂಗಳಲ್ಲಿ ಜಿಎಸ್‌ಟಿ ಸಂಗ್ರಹದಲ್ಲಿ 11% ಏರಿಕೆ ಕಂಡು ಬಂದಿದೆ. ಇದರಲ್ಲಿ ಜನಗಳ ಮೇಲೆ ಹೇರಿದ ಹೆಚ್ಚುವರಿ ಜಿಎಸ್‌ಟಿ ದರಗಳ ಪಾಲು ಎಷ್ಟು ಎಂದು ತಿಳಿದಿಲ್ಲ.

ಐಟಿ ಸೆಲ್ ಮುಖ್ಯಸ್ಥರ ಪ್ರದಕ್ಷಿಣೆ-ಅಪ್ರದಕ್ಷಿಣೆ ಗೊಂದಲವೂ ಮತ್ತು ಪ್ರಧಾನಿಗಳ ಫೇಕ್‌ನ್ಯೂಸ್ ಫಾರ್ವರ್ಡ್ ಉಪದೇಶವೂ

ಮಧ್ಯಪ್ರದೇಶದ ಓಂಕಾರೇಶ್ವರದಲ್ಲಿರುವ ನರ್ಮದಾ ಘಾಟ್‌ನಲ್ಲಿ ಭಾರತ್ ಜೋಡೋ ಯಾತ್ರೆಯ ಸಂದರ್ಭದಲ್ಲಿ ರಾಹುಲ್ ಮತ್ತು ಪ್ರಿಯಾಂಕಾ ಗಾಂಧಿ ದೇವರ ಮೂರ್ತಿಗೆ ಆರತಿ ಮಾಡಿದರಂತೆ. ಇದರ ಬೆನ್ನಲ್ಲೇ, ಬಿಜೆಪಿಯ ರಾಷ್ಟ್ರೀಯ ಮಾಹಿತಿ ಮತ್ತು ತಂತ್ರಜ್ಞಾನ ವಿಭಾಗದ ಉಸ್ತುವಾರಿ ಮತ್ತು ಆ ಪಕ್ಷದ ರಾಷ್ಟ್ರೀಯ ಕಾರ್ಯಕಾರಿಣಿ ಸದಸ್ಯ ಅಮಿತ್ ಮಾಳವಿಯಾ ಅವರು ರಾಹುಲ್ ಗಾಂದಿ ಆರತಿ ಮಾಡುವ ಹಿಂದೂ ಸಂಪ್ರದಾಯದ ಬಗ್ಗೆ ತಮ್ಮ ಅಜ್ಞಾನವನ್ನು ಪ್ರದರ್ಶಿಸುವ, 'ಚುನಾವೀ ಹಿಂದೂ' ಎಂದು ಲೇವಡಿ ಮಾಡುವ ಟ್ವೀಟ್ ಹಾಕಿದರಂತೆ. ಅಷ್ಟಕ್ಕೇ ನಿಲ್ಲದೆ ಭೂಮಿಯು ಪ್ರದಕ್ಷಿಣಾಕಾರವಾಗಿ ತಿರುಗುತ್ತದೆ ಎಂದೂ ಸೇರಿಸಿದರಂತೆ.

ಇದನ್ನು ಪರಿಶೀಲಿಸಿದ ಹುಸಿ ಸುದ್ದಿಗಳ ಪತ್ತೆ -ವಿಶ್ಲೇಷಣೆಗೆ ಮೀಸಲಾದ **ಆಲ್ಟ್ ನ್ಯೂಸ್ ಒಂದೆಡೆ ಇದು ಬಿಜೆಪಿ ಮುಖಂಡರ ಇನ್ನೊಂದು ಫೇಕ್ ನ್ಯೂಸ್, ಜತೆಗೇ ರಾಹುಲ್ ಗಾಂಧಿ ಅಜ್ಞಾನಿ ಎಂದು ಹೇಳುವ ಭರದಲ್ಲಿ ಐಟಿ ಸೆಲ್ ಮುಖ್ಯಸ್ಥ ತನ್ನ ಅಜ್ಞಾನವನ್ನೇ ಪ್ರದರ್ಶಿಸಿರುವ ಉದಾಹರಣೆ** ಎಂದು ಬಹಿರಂಗ ಪಡಿಸಿದೆ.

ರಾಹುಲ್ ಗಾಂಧಿ ಜತೆಗಿದ್ದ ಪುರೋಹಿತರಂತೆಯೇ ಸರಿಯಾದ ದಿಕ್ಕಿನಲ್ಲಿ ಅಂದರೆ ಪ್ರದಕ್ಷಿಣಾಕಾರದಲ್ಲಿಯೇ ಆರತಿಯನ್ನು ಮಾಡಿದ್ದರು. ಕ್ಯಾಮರಾ ಅವರ ಎದುರು ಇದ್ದುದರಿಂದ ಅವರ ಬಲಬದಿಯ ಚಲನೆ ವೀಡಿಯೋದಲ್ಲಿ ಎಡಬದಿಯ ಚಲನೆಯಾಗಿ ಕಾಣುತ್ತದೆ.

ಇನ್ನು ಭೂಮಿ ಬಿಜೆಪಿ ಐಟಿ ಸೆಲ್ ಮುಖ್ಯಸ್ಥ ಹೇಳುವ ಹಾಗೆ ಪ್ರದಕ್ಷಿಣಾಕಾರವಾಗಿ ತಿರುಗುತ್ತದೆಯೇ? ಪ್ರಾಥಮಿಕ ಶಾಲೆಗೆ ಹೋದವರಿಗೂ ಇದು ಸುಳ್ಳು ಎಂದು ಗೊತ್ತಿರುತ್ತದೆ ಎಂದು ಆಲ್ಟ್‌ನ್ಯೂಸ್ ಟಿಪ್ಪಣಿಮಾಡಿದೆ.

ಎಂದಿನಂತೆ ಆಳುವ ಪಕ್ಷದ ಸಾಮಾಜಿಕ ಮಾಧ್ಯಮ ಪಡೆಗಳು ಈ ಅಜ್ಞಾನ ಪ್ರದರ್ಶನದಲ್ಲಿ ತಂತಮ್ಮ ಉಗ್ಗರಣೆಗಳನ್ನು ಹಾಕಿ ನಗೆಪಾಟಲನ್ನು ಹೆಚ್ಚಿಸಿಕೊಂಡಿದ್ದಾರೆ. ಉದಾ: ಉತ್ತರಾಖಂಡದ ನೇಹಾ ಶರ್ಮ ಎಂಬವರು "ಕ್ಯಾಥೋಲಿಕ್ ತಾಯಿ ಮತ್ತು ಪಾರ್ಸಿ ತಂದೆಯ ಮಗ ಚುನಾವಣಾ ಲಾಭಕ್ಕಾಗಿ ಹಿಂದೂ ಎಂದು ನಟಿಸಿದಾಗ ಅವನು ಆರತಿ ಅಪ್ರದಕ್ಷಿಣಾಕಾರವಾಗಿ ಮಾಡುತ್ತಾನೆ"ಎಂದು ಸೇರಿಸಿದರಂತೆ. ಭೂಮಿಯ ಚಲನೆಯ ಬಗ್ಗೆ ಮಾತ್ರ ಏನೂ ಹೇಳದೆ ತುಸು ಪಾರಾಗಿದ್ದಾರೆ!

ಕೆಲವೇ ದಿನಗಳ ಹಿಂದೆ ಸ್ವತಃ ಪ್ರಧಾನ ಮಂತ್ರಿಗಳು ನಕಲಿ ಸುದ್ದಿಗಳಿಂದ ಮೋಸ ಹೋಗಬೇಡಿ, ಯಾವುದನ್ನೂ ಇತರರಿಗೆ ಫಾರ್ವರ್ಡ್ ಮಾಡುವ ಮೊದಲು ಪರಿಶೀಲಿಸಿ ಎಂದು ಸಲಹೆ ನೀಡಿದ್ದರು, ವಿಡಿಯೋ ಕಾನ್ಫರೆನ್ಸ್ ಮೂಲಕ ರಾಜ್ಯಗಳ ಗೃಹ ಮಂತ್ರಿಗಳ ಚಿಂತನ್ ಶಿವಿರ್ ಉದ್ದೇಶಿಸಿ ಮಾತನಾಡುವಾಗ, ಅವರು ಸತ್ಯ ಪರಿಶೀಲನೆಯ ಮಹತ್ವವನ್ನು ಒತ್ತಿ ಹೇಳುತ್ತ ಅದರ ಕಾರ್ಯವಿಧಾನಗಳ ಬಗ್ಗೆ ಜನರಿಗೆ ಅರಿವು ಮೂಡಿಸುವ ಅಗತ್ಯವಿದೆ ಎಂದು ಹೇಳಿದ್ದರು ಎಂದು ವರದಿಯಾಗಿದೆ. ಬಹುಶಃ ಈ ತರಬೇತಿ ಅವರದೇ ಪಕ್ಷದ ಐಟಿ ಸೆಲ್‌ನವರಿಗೆ ಸಿಕ್ಕಿಲ್ಲ, ಅಥವ ಅವರಿಗೆ ಇದರಿಂದ ವಿನಾಯ್ತಿ ಇರಬಹುದೇನೋ.

ನೀತಿ ಸಂಹಿತೆ ಉಲ್ಲಂಘಿಸಿದ ಅಮಿತ್ ಶಾ ವಿರುದ್ಧ ಕ್ರಮ-ಚುನಾವಣಾ ಆಯೋಗಕ್ಕೆ ಒತ್ತಾಯ

ಕೇಂದ್ರ ಗೃಹಮಂತ್ರಿ ಅಮಿತ್ ಷಾ ಅವರು ಗುಜರಾತಿನಲ್ಲಿ ಚುನಾವಣಾ ಪ್ರಚಾರದ ವೇಳೆಯಲ್ಲಿ "ಗುಜರಾತ್‌ನಲ್ಲಿ (1995 ರ ಮೊದಲು) ಕಾಂಗ್ರೆಸ್ ಆಡಳಿತದ ಸಮಯದಲ್ಲಿ ಕೋಮು ಗಲಭೆಗಳು ವಿಪರೀತವಾಗಿದ್ದವು. ಕಾಂಗ್ರೆಸ್ ವಿವಿಧ ಸಮುದಾಯಗಳು ಮತ್ತು ಜಾತಿಗಳ ಜನರನ್ನು ಪರಸ್ಪರ ವಿರುದ್ಧ ಹೋರಾಡಲು ಪ್ರಚೋದಿಸುತ್ತಿತ್ತು. ಅಂತಹ ಗಲಭೆಗಳ ಮೂಲಕ ಕಾಂಗ್ರೆಸ್ ತನ್ನ ಮತಬ್ಯಾಂಕ್ ಅನ್ನು ಬಲಪಡಿಸಿಕೊಂಡು ಸಮಾಜದ ಬಹುದೊಡ್ಡ ವರ್ಗಕ್ಕೆ ಅನ್ಯಾಯ ಮಾಡಿತ್ತು.....ಆದರೆ 2002ರಲ್ಲಿ ಅವರಿಗೆ ಪಾಠ ಕಲಿಸಿದ ನಂತರ ಈ ಅಂಶಗಳು ಆ ಹಾದಿಯನ್ನು ತೊರೆದು 2002ರಿಂದ 2022ರವರೆಗೆ ಹಿಂಸಾಚಾರದಲ್ಲಿ ತೊಡಗುವುದನ್ನು ಬಿಟ್ಟರು. ಬಿಜೆಪಿ ಕೋಮುಗಲಭೆಯಲ್ಲಿ ತೊಡಗುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವ ಮೂಲಕ ಗುಜರಾತ್‌ನಲ್ಲಿ ಶಾಶ್ವತ ಶಾಂತಿ ಸ್ಥಾಪಿಸಿದೆ" ಎಂದು ಹೇಳಿರುವರ ವಿರುದ್ಧ ಆಕ್ಷೇಪ ವ್ಯಕ್ತಪಡಿಸಿಭಾರತ ಸರಕಾರದ ನಿವೃತ್ತ ಕಾರ್ಯದರ್ಶಿ ಇ ಎಎಸ್ ಶರ್ಮ ಮತ್ತು ಸಾಮಾಜಿಕ ಕಾರ್ಯಕರ್ತ ಮತ್ತು ಶಿಕ್ಷಣತಜ್ಞ ಜಗದೀಪ್ ಚೋಕರ್ ಚುನಾವಣಾ ಆಯೋಗಕ್ಕೆ ದೂರು ಸಲ್ಲಿಸಿದ್ದಾರೆ. ಶಾ ಅವರ ಹೇಳಿಕೆಯು ರಾಜಕೀಯ ಪಕ್ಷವು ಕಾನೂನನ್ನು ತಮ್ಮ ಕೈಗೆ ತೆಗೆದುಕೊಳ್ಳುವ ಮೂಲಕ ಇತರರಿಗೆ "ಪಾಠ ಕಲಿಸಿದೆ" ಎಂದು ಸೂಚಿಸುತ್ತದೆ ಎಂದಿರುವ ಶರ್ಮಾ, ಷಾ ಅವರು ಭಾರತೀಯ ದಂಡ ಸಂಹಿತೆಯ ಸೆಕ್ಷನ್ 153A ಅನ್ನು ಉಲ್ಲಂಘಿಸಿದ್ದಾರೆ ಎಂದು ಆರೋಪಿಸಿದ್ದಾರೆ. ನಿರೀಕ್ಷೆಯಂತೆ ಚುನಾವಣಾ ಆಯೋಗ ಏನೂ ಕ್ರಮ ಕೈಗೊಂಡಂತೆ ಕಾಣಿಸುತ್ತಿಲ್ಲ.

2022ರ ಶಾಂತಿದೂತ!



ವ್ಯಂಗ್ಯಚಿತ್ರ ಕೃಪೆ: ಮಂಜುಲ್, ಫೇಸ್‌ಬುಕ್

"ನಮಸ್ಕಾರ್ ಮ್ಯೆಂ ರವೀಶ್‌ಕುಮಾರ್ –ಈ ದನಿ ಇನ್ನು ಟಿವಿ ಚಾನೆಲ್‌ನಲ್ಲಿ ಇರುವುದಿಲ್ಲ"

ಆದರೆ ನೀವು ಗೋದೀ ಮೀಡಿಯಾದ ಗುಲಾಮಿಕೆಯಿಂದ ಹೊರ ಬಂದೇ ಬರುತ್ತೀರಾ, ಇದು ಎಲ್ಲರ ಲಡಾಯಿ" ಎನ್ನುತ್ತಾರೆ ಗೋದೀ ಮೀಡಿಯಾ ಎಂಬ ಈಗ ಜನಜನಿತವಾಗಿರುವ ಪದದ ಸೃಷ್ಟಿಕರ್ತ......



ಕೊನೆಗೂ 'ಮುಖ್ಯಧಾರೆ'ಯ ರಾಷ್ಟ್ರೀಯ ವಾಹಿನಿಗಳಲ್ಲಿ ಸಾಕಷ್ಟು ಪ್ರಮಾಣದಲ್ಲಿ ವಸ್ತುನಿಷ್ಟತೆಯನ್ನು, ಸ್ವಂತಿಕೆಯನ್ನು ಉಳಿಸಿ ಕೊಂಡಿದ್ದ ಎನ್‌ಡಿಟಿವಿ ದೇಶದ ಸೂಪರ್ ಶ್ರೀಮಂತ ಅದಾನಿಯ ಪಾಲಾಗುತ್ತಿದೆ. ಈ ಚಾನಲ್‌ನ ಸಂಸ್ಥಾಪಕರಾದ ಪ್ರಣೊಯ್ ರಾಯ್ ಮತ್ತು ಅವರ ಪತ್ನಿ ಎನ್‌ಡಿಟಿವಿಯ ಪ್ರಾಯೋಜಕ ಸಂಸ್ಥೆ ಆರ್‌ಆರ್‌ಪಿಆರ್‌ನ ನಿರ್ದೇಶಕರ ಹುದ್ದೆಗೆ ರಾಜೀನಾಮೆ ನೀಡಿದ್ದಾರೆ ಎಂಬ ಸುದ್ದಿಯ ಹಿಂದೆಯೇ ಈ ಗುಂಪಿನ ಹಿಂದಿ ಚಾನೆಲ್ ಎನ್‌ಡಿಟಿವಿ ಇಂಡಿಯಾದ ಹಿರಿಯ ಕಾರ್ಯಕಾರೀ ಸಂಪಾದಕರ ಸ್ಥಾನಕ್ಕೆ ಪ್ರಸಿದ್ಧ ಪತ್ರಕರ್ತ ರವೀಶ್ ಕುಮಾರ್ ರಾಜೀನಾಮೆ ನೀಡಿರುವ ಸುದ್ದಿಯೂ ಬಂದಿದೆ.

ಅವರು ತನ್ನ ಯೂ ಟ್ಯೂಬಿನಲ್ಲಿ ಡಿಸೆಂಬರ್1 ರಂದು ಅಪ್‌ಲೋಡ್ ಮಾಡಿರುವ ವೀಡಿಯೋದಲ್ಲಿ ಇದನ್ನು ಪುಷ್ಟೀಕರಿಸಿದ್ದಾರೆ ಮತ್ತು ತನ್ನ ರಾಜೀನಾಮೆಗೆ ಕಾರಣಗಳನ್ನು ಕೊಡುತ್ತ ದೇಶದ ಕಾರ್ಪೊರೇಟ್ ಮಾಧ್ಯಮಗಳ ಈಗಿನ ಶೋಚನೀಯ ಸ್ಥಿತಿಯ ಮೇಲೆ ಬೆಳಕು ಚೆಲ್ಲಿದ್ದಾರೆ.

ದೇಶದಲ್ಲಿ ಈಗ ಏರ್ಪಟ್ಟಿರುವ ಸನ್ನಿವೇಶದಲ್ಲಿ ಇಂತಹದೊಂದು ದಿನ ಬರಲೇಬೇಕಾಗಿತ್ತು ಎನ್ನುವ ಅವರು, ದೇಶದಲ್ಲೀಗ ಬೇರೆ ಬೇರೆ ಹೆಸರಿನಲ್ಲಿ ಬಹಳಷ್ಟು ಚಾನಲ್‌ಗಳಿವೆ, ಆದರೆ ಎಲ್ಲವೂ ಗೋದೀ ಮೀಡಿಯಾಗಳು, ಅಂದರೆ ಆಳುವವರ ಮಡಿಲಲ್ಲಿ ಇರುವ ಮಾಧ್ಯಮಗಳು. ಅವು ಪತ್ರಿಕಾವೃತ್ತಿಯಲ್ಲಿರುವುದಾಗಿ ಹೇಳುತ್ತವೆ, ಆದರೆ ಪತ್ರಿಕಾವೃತ್ತಿಯಲ್ಲಿ ಇರುವುದೆಲ್ಲವನ್ನೂ ಮುಗಿಸಿ ಬಿಟ್ಟಿವೆ, ಅದರ ಮೂಲಭೂತ ನೀತಿಧರ್ಮಗಳನ್ನು ಕೂಡ ಎಂದು ಖೇದ ವ್ಯಕ್ತಪಡಿಸಿದರು.

"ಭಾರತದ ಪತ್ರಿಕೋದ್ಯೋಗದಲ್ಲಿ ಸುವರ್ಣಯುಗ ಎಂಬುದಿರಲಿಲ್ಲ, ನಿಜ. ಆದರೆ ಭಸ್ಮಯುಗವೂ ಇರಲಿಲ್ಲ. ಭಸ್ಮಯುಗ ಎಂದರೆ ನನ್ನ ಪ್ರಕಾರ ಪತ್ರಿಕಾವೃತ್ತಿಯಲ್ಲಿದ್ದ ಒಳ್ಳೆಯ ಅಂಶಗಳೆಲ್ಲವನ್ನೂ ವೇಗವಾಗಿ ಭಸ್ಮ ಮಾಡಲಾಗುತ್ತಿದೆ. ಈ ಮಡಿಲ ಮಾಧ್ಯಮಗಳು ಮತ್ತು ಸರಕಾರ ಪತ್ರಿಕೋದ್ಯಮದ ಕುರಿತ ತಮ್ಮ ಅರ್ಥವನ್ನು ನಿಮ್ಮ ಮೇಲೆ ಹೇರುತ್ತಿದ್ದಾರೆ" ಎಂದ ಅವರು ತನಗೆ ಇದೊಂದು ಎಂತಹ ಸಂಜೆಯೆಂದರೆ ಹಕ್ಕಿಗೆ ತನ್ನ ಗೂಡು ಕಾಣಿಸುತ್ತಿಲ್ಲ, ಬೇರೆ ಯಾರೋ ಅದನ್ನು ಒಯ್ದಿದ್ದಾರೆ, ಆದರೆ ಕಣ್ಣು ದಣಿಯುವವರೆಗೂ ವಿಸ್ತಾರವಾದ ಆಕಾಶ ಕಾಣುತ್ತಿದೆ ಎಂದು ನೋವಿನಿಂದ, ಆದರೆ ತನ್ನ ಎಂದಿನ ಉತ್ಸಾಹದಿಂದಲೇ ಅವರು ಹೇಳುತ್ತಾರೆ.



ಮಾರಾಟಕ್ಕಿಲ್ಲ! ವ್ಯಂಗ್ಯಚಿತ್ರ ಕೃಪೆ: ಸತೀಶ ಆಚಾರ್ಯ, ಮೊಲಿಟಿಕ್ಸ್.ಇನ್

26–27 ವರ್ಷಗಳ ಹಿಂದೆ ದರ್ಶಕರ ಪತ್ರಗಳನ್ನು ಓದಿ ಆ ಬಗ್ಗೆ ಆಂಕರುಗಳಿಗೆ, ಸುದ್ದಿ ತಯಾರಿಸುವರಿಗೆ ವರದಿ ತಯಾರಿಸುವ ಕೆಲಸದಿಂದ ಆರಂಭಿಸಿ, ನಂತರ ಅನುವಾದಕನಾಗಿ, ವರದಿಗಾರನಾಗಿ, ಕೊನೆಗೆ ಹಿರಿಯ ಕಾರ್ಯಕಾರಿ ಸಂಪಾದಕನ ಹುದ್ದೆ ಏರಿದ, ಈಗ ಅದರಿಂದ ಹೊರಬರಬೇಕಾಗಿರುವ ತನ್ನ ಬಗ್ಗೆ ಮರುಕದ, ಸಹಾನುಭೂತಿಯ ದನಿ ಬೇಡ ಎಂದು ಅವರು ಕೇಳಿಕೊಂಡಿದ್ದಾರೆ:

"ಕೆಳಗಿಳಿಯುವುದು ವಿಮಾನದಿಂದ, ಆದರೆ ಮಾತು ಆರಂಭಿಸುವುದು ನಾನು ಚಾಯ್ವಾಲಾ ಎಂದು. ನನಗೆ ಇಂತಹ ಸಹಾನುಭೂತಿ ಕೇಳುವುದು, ಸಂಘರ್ಷವನ್ನು ಮಹಾನ್‌ಗೊಳಿಸುವುದು ಇಷ್ಟವಾಗವುದಿಲ್ಲ. ಈ ದೇಶದಲ್ಲಿ ಪ್ರತಿಯೊಬ್ಬನೂ ಬೆಟ್ಟ ಹತ್ತಲೇಬೇಕಾಗಿದೆ. ಏಮ್ಸ್ (ದಿಲ್ಲಿಯಲ್ಲಿರುವ ಅಖಿಲ ಭಾರತ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಅಸ್ಪತ್ರೆ) ಹೊರಗೆ ಕುಳಿತಿರುವ ತಮ್ಮ ಬಾಂಧವರ ಚಿಕಿತ್ಸೆಗೆ ಬಂದವರು ಎಂತಹ ಸವಾಲುಗಳನ್ನು ಎದುರಿಸಿದ್ದಾರೆ ಕೇಳಿದ್ದೀರಾ..

ಬಹಳ ದಿನ ದ್ವೇಷಕ್ಕೆ ಗುಲಾಮರಾಗಿರಲು ಸಾಧ್ಯವಿಲ್ಲ

"ಪ್ರಸ್ತುತ ಸನ್ನಿವೇಶದಲ್ಲಿ ಕುರ್ಚಿಯಲ್ಲಿ ಕೂತಿರುವ ಪಾತ್ರಧಾರಿಗಳ ಕನಸುಗಳು ಮುರಿಯುವದನ್ನು ನೋಡಿದ್ದೇನೆ, ಎಲ್ಲರೂ ನೋಡಿದ್ದೀರಾ; ಸಂಸ್ಥೆಗಳು ಧ್ವಂಸವಾಗುವತ್ತಿರುವುದನ್ನು ನೀವೂ ನೋಡಿದ್ದೀರಾ; ದ್ವೇಷದ ಸುಂಟರಗಾಳಿಯಲ್ಲಿ ಜನಗಳು ದಾರಿಗಾಣದಾಗಿರುವುದನ್ನು ನೋಡಿದ್ದೀರಾ. ಆದರೆ ಇದೇ ಸಮಯದಲ್ಲಿ ಹಲವು ಹೊಸ ಸಂಸ್ಥೆಗಳು ಹುಟ್ಟಿಕೊಂಡಿರುವುದನ್ನೂ ನೋಡಿದ್ದೇವೆ– ಶಾಹೀನ್ ಬಾಗ್‌ನಲ್ಲಿ, ರೈತರ ಹೋರಾಟದಲ್ಲಿ...... ಜನತೆಯ ಸಂಸ್ಥೆಗಳು, ದರ್ಶಕರ ಸಂಸ್ಥೆಗಳು ಮೂಡಿ ಬರುವುದನ್ನು ಇವೇ ನನ್ನನ್ನು ಬೆಂಬಲಿಸಿದವುಗಳು, ವಿಶ್ವಾಸ ಉಳಿಸಿದವುಗಳು, ಇವುಗಳ ಸಂಖ್ಯೆ ಕಡಿಮೆಯಿರಬಹುದು, ಆದರೆ ಇವು ಜನತೆಯೆಂಬ ಹೆಸರಿನ ಮರ ಒಣಗಿ ಹೋಗದಂತೆ ನೋಡಿಕೊಂಡಿವೆ"ಎಂದು ಅವರು ಈ ಬಗ್ಗೆ ನೆನಪಿಸಿಕೊಳ್ಳುತ್ತ ಹೇಳಿದರು.

ನಿಜ, ಇಂದು ಆಳುವವರು ಇಡೀ ವ್ಯವಸ್ಥೆ ನಮ್ಮ ಕೈಲ್ಲಿದೆ, ಜನತೆಗೇನೂ ಬೆಲೆಯಿಲ್ಲ, ಮಾಧ್ಯಮಗಳು, ಜನತೆ, ವಿಪಕ್ಷ ಎಲ್ಲವನ್ನೂ ಮುಗಿಸಿಬಿಟ್ಟಿದ್ದೇವೆ ಎಂದು ಬೀಗಬಹುದು. ಅದು ನಿಜವೂ ಕೂಡ. ಆದರೆ ಇದೇ ಶಾಶ್ವತವಲ್ಲ. ಒಂದಿಲ್ಲೊಂದು ದಿನ ಜನ ಈ ದ್ವೇಷದಿಂದ ಜರ್ಝರಿತರಾಗಿ ಹೊಸ ನೆಲೆ ಹುಡುಕಲಾರಂಭಿಸುತ್ತಾರೆ, ಆಗ ನೀವು ಇಂತಹ ಪತ್ರಕರ್ತರನ್ನು ನೆನಪಿಸಿಕೊಳ್ಳಿ. ದ್ವೇಷಕ್ಕೆ ಗುಲಾಮರಾಗಿರುವ ಜನರು ಅದರಿಂದ ಹೊರಬರುತ್ತಾರೆ, ಹೊರಬರಲೇ ಬೇಕಾಗುತ್ತದೆ ಎಂಬ ಆಶಾಭಾವನೆಯನ್ನೂ ಅವರು ವ್ಯಕ್ತಗೊಳಿಸುತ್ತಾರೆ.

ಭಯವಿಲ್ಲ ಎಂದು ಸಾರಿ ಹೇಳಿ

ಭಾರತದ ಮಾಧ್ಯಮ ದೃಶ್ಯ ಬದಲಾಗಿದೆ. ಹಲವಾರು ಯುವಜನರು ಲಕ್ಷಾಂತರ ರೂಪಾಯಿ ಖರ್ಚುಮಾಡಿ ಪತ್ರಕರ್ತರಾಗ ಬಯಸುತ್ತಿದ್ದಾರೆ. ಆದರೆ ಅವರು ಪತ್ರಕರ್ತರಾಗುವ ಬದಲು ದಲ್ಲಾಳಿಗಳಾಗಬೇಕಾಗುತ್ತದೆ. ಏಕೆಂದರೆ ಪತ್ರಕರ್ತರಾಗುವ ಸಾಂಸ್ಥಿಕ ಅವಕಾಶ ಉಳಿದಿಲ್ಲ. ಈಗಾಗಲೇ ಈ ರಂಗದಲ್ಲಿರುವವರದ್ದೂ ಅದೇ ಸ್ಥಿತಿಯಿದೆ. ಕೆಲವರು ಈ ವೃತ್ತಿ ಬಿಟ್ಟು ಹೋಗುತ್ತಿದ್ದಾರೆ. ಒಂದು ಸಂಬಳದ ಉದ್ಯೋಗ ಬಿಟ್ಟು ಈ ವೃತ್ತಿಯಲ್ಲಿ ಬೇರೇನೂ ಉಳಿದಿಲ್ಲ. ಉತ್ಸಾಹವೇ ಇಲ್ಲದ ಸನ್ನಿವೇಶದಲ್ಲಿ ನಾವಿದ್ದೇವೆ. ಎಷ್ಟೆಂದರೆ ಒಬ್ಬ ನ್ಯಾಯಾಧೀಶರಿಗೆ ಜಾಮೀನು ಕೊಡಲೂ ಭಯವಾಗುತ್ತದೆಯಂತೆ, ತಮ್ಮನ್ನು ಟಾರ್ಗೆಟ್ ಮಾಡಬಹುದು ಎಂದು.

ಇಂತಹ ಸನ್ನಿವೇಶದಲ್ಲಿ ನನಗೆ ಭಯವಿಲ್ಲ ಎಂದು ಹೇಳುವುದೂ ಅಪರಾಧ! ಆದರೆ ಒಬ್ಬ ಭಯಗ್ರಸ್ತ ಪತ್ರಕರ್ತ ನರಸತ್ತ ನಾಗರಿಕನನ್ನು ಮಾತ್ರ ರೂಪಿಸಲು ಸಾಧ್ಯ. ನೀವು ಬ್ರಿಟಿಷ್ ಸಾಮ್ರಾಜ್ಯಶಾಹಿಯನ್ನು ಬರಿಗಾಲಲ್ಲಿ ಮೊಣಕಾಲೂರುವಂತೆ ಮಾಡಿದ ದೇಶದವರು. ನಮಗೆ ಭಯವಿಲ್ಲ ಎಂದು ಹೇಳಿಕೊಳ್ಳಿ. ಮಡಿಲ ಮಾಧ್ಯಮಗಳ ಗುಲಾಮಿಕೆಯೂ ಕೊನೆಗೊಳ್ಳಲೇ ಬೇಕು, ನೀವು ಈ ಗುಲಾಮಿಕೆಯಿಂದ ಹೊರಗೆ ಬಂದೇ ಬರುತ್ತೀರ. ಇದು ಎಲ್ಲರ ಹೋರಾಟ. ಈ ಹೋರಾಟವಿಲ್ಲದಿದ್ದರೆ ಸ್ವತಂತ್ರ ದೇಶದಲ್ಲಿ ಮಡಿಲ ಮಾಧ್ಯಮಗಳ ಗುಲಾಮರೆಂಬ ಕಳಂಕದಲ್ಲಿರಬೇಕಾಗುತ್ತದೆ ಎಂದು ಎಚ್ಚರಿಸಿದರು.

ಇದೀಗ ಕಾನೂನಿನ ಹೆಸರಿನಲ್ಲಿ ಅಧಿಕಾರಗಳನ್ನು ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ದಮನ ಮಾಡುತ್ತಿರುವ, ಅಕ್ರಮ ಕೆಲಸಗಳು ಸಕ್ರಮ ಎಂದು ಸಾರುತ್ತಿರುವ ಸಮಯ ಎನ್ನುತ್ತ "ನಾನು ರಾಜೀನಾಮೆ ನೀಡಿದ್ದೇನೆ. ಮುಂದಿನ ಮಾರ್ಗ ಸ್ಪಷ್ಟವಾಗಿಲ್ಲ, ಆದರೆ ವಿಶ್ವಾಸ ಉನ್ನತ ಮಟ್ಟದಲ್ಲಿದೆ. ಒಂದು ಯೂ ಟ್ಯೂಬ್ ಮತ್ತು ಫೇಸ್‌ಬುಕ್ ಪೇಜ್ ತೆರೆದಿದ್ದೇನೆ. ನಾನಿನ್ನು ಈ ಯುಟ್ಯೂಬ್‌ನಲ್ಲೇ ಕಾಣಿಸಿಕೊಳ್ಳುತ್ತೇನೆ. ಕೆಂಪು ಮೈಕ್ ನನ್ನ ಕೈಲಿರುವುದಿಲ್ಲ. ನಾನು ರಾಜೀನಾಮೆ ಕೊಟ್ಟಿದ್ದೇನೆ. ನಮಸ್ಕಾರ ನಾನು ರವೀಶ್ ಕುಮಾರ್ ಎಂಬ ದನಿ ಚಾನಲ್‌ನಲ್ಲಿ ಇನ್ನು ಕೇಳುವುದಿಲ್ಲ, ನಮಸ್ಕಾರ ನಾನು ರವೀಶ್ ಕುಮಾರ್" ಎಂದು ಪತ್ರಕರ್ತನಾಗಿ ತಮ್ಮ ಹೊಸ ಘಟ್ಟದ ಆರಂಭದ ಈ ವೀಡಿಯೋದ ಕೊನೆಯಲ್ಲಿ ಹೇಳುತ್ತಾರೆ.

ಕೇರಳ: ವಿಝಿಂಜಂ ಬಂದರು ಪ್ರಾಜೆಕ್ಟ್‌ನಲ್ಲಿ ಪ್ರತಿಭಟನೆ–ಹಿಂಸಾಚಾರ ಏಕೆ?

ಕೇರಳದ ವಿಝಿಂಜಂ ಪ್ರಾಜೆಕ್ಟ್ ಪ್ರದೇಶದಲ್ಲಿ ನಡೆಯುತ್ತಿರುವ ಪ್ರತಿಭಟನೆಗಳು ಮತ್ತು ಗಲಭೆಗಳು ಹಲವರಿಗೆ ಹಲವು ಅಭಿಪ್ರಾಯಗಳನ್ನು ಉಂಟು ಮಾಡಿರುವಂತೆ ಕಾಣುತ್ತದೆ.

ಈ ಯೋಜನೆಯಿಂದ ಸಮುದ್ರ ಕೊರೆತ ಆಗುವುದಿಲ್ಲ ಎಂದು ತಜ್ಞರ ಅಧ್ಯಯನ ತಂಡ ಭಿಪ್ರಾಯ ಕೊಟ್ಟಿದೆ. ಆದ್ದರಿಂದ ಈ ಪ್ರಾಜಕ್ಟನ್ನು ನಿಲ್ಲಿಸುವ ಪ್ರಶ್ನೆಯೇ ಇಲ್ಲ, ಸರಕಾರ ಪ್ರತಿಭಟನಾಕಾರರ 7 ಬೇಡಿಕೆಗಳಲ್ಲಿ 6ನ್ನು ಒಪ್ಪಿಕೊಂಡಿದೆ. 7ನೇ ಯದ್ದು ಈ ಪ್ರಾಜೆಕ್ಟನ್ನು ನಿಲ್ಲಿಸಬೇಕು ಎಂಬುದು. ಇದನ್ನು ಒಪ್ಪಲು ಸಾಧ್ಯವಿಲ್ಲ, ಏಕೆಂದರೆ ಹೀಗೆ ಮಾಡಿದರೆ, ಅಭಿವೃದ್ಧಿ ಕಾರ್ಯಗಳಲ್ಲಿ ಹೂಡಿಕೆಗೆ ಧಕ್ಕೆ ಬರುತ್ತದೆ ಎಂದು ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಮತ್ತೆ ಸ್ಪಷ್ಟಪಡಿಸಿದ್ದಾರೆ.

ಇಲ್ಲಿ ಗಮನಿಸಬೇಕಾದ ಸಂಗತಿಯೆಂದರೆ ಈ ಪ್ರಾಜೆಕ್ಟನ್ನು ಕೇರಳದ ಎಲ್ಲ ರಾಜಕೀಯ ಪಕ್ಷಗಳು ರಾಜ್ಯದ ಅಭಿವೃದ್ಧಿಯ ದೃಷ್ಟಿಯಿಂದ ಬೆಂಬಲಿಸಿದ್ದವು. ಈಗ ಇದನ್ನು ವಿರೋಧಿಸುತ್ತಿರುವ ಲ್ಯಾಟಿನ್ ಕ್ಯಾಥೊಲಿಕ್ ಚರ್ಚ್ ಕೂಡ ಇದನ್ನು ಆರಂಭದಲ್ಲಿ ಬೆಂಬಲಿಸಿತ್ತು. ಆಗಿನ ಆರ್ಚ್‌ಬಿಷಪ್ ಸ್ಥಳೀಯ ಮೀನುಗಾರರಿಗೆ ಇದರಿಂದ ಆಗುವ ಪ್ರಯೋಜನಗಳನ್ನು ಸಂದರ್ಶನವೊಂದರಲ್ಲಿ ಶ್ಲಾಘಿಸಿದ್ದರು ಕೂಡ ಎಂದು ಹೇಳಲಾಗಿದೆ.

ಈ ಪ್ರಾಜೆಕ್ಟನ್ನು ಆರಂಭಿಸಿದ್ದು ಹಿಂದಿನ ಯುಡಿಎಫ್ ಸರಕಾರದ ಅವಧಿಯಲ್ಲಿ ಎಂಬುದೂ ಗಮನಾರ್ಹ. ಆಗ ಇದನ್ನು ಪಿಪಿಪಿ(ಸಾರ್ವಜನಿಕ –ಖಾಸಗಿ ಭಾಗೀದಾರಿಕೆ) ವಿಧಾನಕ್ಕೆ ಬದಲಿಸಿ ಅದಾನಿ ಗುಂಪಿಗೆ ಕೊಡುವುದನ್ನು ವಿರೋಧಿಸಿದ್ದು ಸಿಪಿಐ(ಎಂ) ನೇತೃತ್ವದ ಎಲ್‌ಡಿಎಫ್. ಆದರೆ ಈ ಪ್ರಾಜೆಕ್ಟ್ ಈಗ ಬಹಳಷ್ಟು ಮುಂದುವರೆದ ಘಟ್ಟದಲ್ಲಿ ಇರುವುದರಿಂದ ಅದನ್ನು ನಿಲ್ಲಿಸಲು ಸಾಧ್ಯವಿಲ್ಲ. ಆದ್ದರಿಂದ ಅದೊಂದು ಬೇಡಿಕೆಯನ್ನು ಬಿಟ್ಟು ಈ ಪ್ರಾಜೆಕ್ಟನ್ನು ವಿರೋಧಿಸುವವರ ಮರುವಸತಿಯೂ ಸೇರಿದಂತೆ ಉಳಿದ ಎಲ್ಲ ಬೇಡಿಕೆಗಳನ್ನು ಎಲ್‌ಡಿಎಫ್ ಸರಕಾರ ಒಪ್ಪಿಕೊಂಡಿದೆ ಅಲ್ಲದೆ ಈ ಪ್ರಾಜೆಕ್ಟನ್ನು ವಿರೋಧಿಸುವ ಪಾದ್ರಿಗಳು ಮತ್ತು ಇತರ ಪ್ರತಿಭಟನಾಕಾರರು ನಿರ್ಮಾಣ ಸ್ಥಳಕ್ಕೆ ಬರುವ ಟ್ರಕ್ಕುಗಳನ್ನು ತಡೆಯವುದಿಲ್ಲ, ಸಿಬ್ಬಂದಿಯ ಮೇಲೆ ದಾಳಿ ಮಾಡುವುದಿಲ್ಲ ಎಂದು ಹೈಕೋರ್ಟಿಗೆ ಮುಚ್ಚಳಿಕೆ ಬರೆದು ಕೊಟ್ಟಿದ್ದರು. ಆದರೂ ನಿರ್ಮಾಣ ಕಾರ್ಯ ಪುನರಾರಂಭಗೊಂಡಾಗ ಟ್ರಕ್ಕುಗಳನ್ನು ತಡೆದಿರುವುದು ಮತ್ತು ಸಿಬ್ಬಂದಿಯ ಮೇಲೆ ಪೊಲೀಸರ ಮೇಲೆ ಹಲ್ಲೆ ನಡೆದಿರುವುದು ಸಹಜವಾಗಿಯೇ ಇದರ ಹಿಂದೆ ಯಾರಿದ್ದಾರೆ ಎಂಬ ಪ್ರಶ್ನೆಯನ್ನು ಎತ್ತಿದೆ. ಇದು ಚುನಾಯಿತ ರಾಜ್ಯ ಸರಕಾರವನ್ನು ಅಸ್ಥಿರಗೊಳಿಸಲು ಇತ್ತೀಚೆಗೆ ಹೆಚ್ಚುತ್ತಿರುವ ಪಿತೂರಿಗಳ ಭಾಗವಾಗಿರುವಂತೆ ಕಾಣುತ್ತದೆ ಎಂದು ಸರಕಾರದ ಮತ್ತು ಎಲ್‌ಡಿಎಫ್‌ನ ವಕ್ತಾರರು ಹೇಳುತ್ತಿದ್ದಾರೆ.

ಈ ಪ್ರಾಜೆಕ್ಟನ್ನು ಸ್ವಾಗತಿಸಿದ್ದ ಪಾದ್ರಿಗಳು ಈಗ, ಇದರ ನಿರ್ಮಾಣ ಕಾರ್ಯದ ಗಮನಾರ್ಹ ಭಾಗ ಮುಗಿದಿರುವಾಗ ಮೀನುಗಾರರ ಒಂದು ವಿಭಾಗವನ್ನು ದಾರಿ ತಪ್ಪಿಸುತ್ತಿದ್ದಾರೆ. ಹೈಕೋರ್ಟಿಗೆ ಕೊಟ್ಟಿರುವ ಮುಚ್ಚಳಿಕೆಯನ್ನು ಉಲ್ಲಂಘಿಸಿರುವುದು ಇದಕ್ಕೆ ಒಂದು ಉದಾಹರಣೆ ಎಂದು ಎಲ್‌ಡಿಎಫ್ ವಕ್ತಾರರು ಹೇಳುತ್ತಾರೆ. ಸರಕಾರ ಮತ್ತು ಪೊಲೀಸರು ಇದುವರೆಗೆ ಈ ಚಳುವಳಿಯನ್ನು ಕುರಿತಂತೆ ಮಾತುಕತೆ ನಡೆಸುತ್ತ ಸಂಯಮದಿಂದ ವರ್ತಿಸುತ್ತಿದ್ದರೂ ಈ ಬಾರಿ ಪೊಲೀಸರ ಮೇಲೂ ಮತ್ತು ಪೊಲೀಸ್ ಸ್ಟೇಷನ್ ಮೇಲೂ ದಾಳಿ ನಡೆದಿದೆ. ಈ ಪ್ರತಿಭಟನೆಯನ್ನು ವಿರೋಧಿಸಿ ಪ್ರಾಜೆಕ್ಟನ್ನು ಬೆಂಬಲಿಸುತ್ತಿರುವ ಸ್ಥಳೀಯರ ಮೇಲೂ ಪ್ರತಿಭಟನಾಕಾರರು ಕಾರಣವಿಲ್ಲದೆ ಹಲ್ಲೆ ನಡೆಸಿರುವುದು ಪ್ರತಿಭಟನೆಯ ವೀಡಿಯೋಗಳಲ್ಲಿ ಸ್ಪಷ್ಟವಾಗಿ ಕಾಣುತ್ತಿದೆ ಎಂದು ಹೇಳಲಾಗಿದೆ.

ಈಗ ಸಿಕ್ಕಿರುವ ವೀಡಿಯೋ ಮತ್ತು ಆಡಿಯೋ ಸಂದೇಶಗಳು ಕೂಡ ಇದು ಸ್ವಯಂಸ್ಫೂರ್ತಿಯಿಂದ ನಡೆದ ಪ್ರತಿಭಟನೆ ಅಲ್ಲ, ಪ್ರಾಜೆಕ್ಟನ್ನು ವಿರೋಧಿಸುತ್ತಿರುವವರ ಸಂಖ್ಯೆ ಇಳಿಯುತ್ತಿದೆ, ಅವರು ಜನರಿಂದ ದೂರವಾಗುತ್ತಿದ್ದಾರೆ ಎಂಬ ಸಂಗತಿಯೇ ಇದಕ್ಕೆ ಕಾರಣ. ಪುಥಿತುರ ಪಾರಿಷ್‌ನ ವೈಕಾರ್ ಫಾದರ್ ಸಜು ರೊಲ್ಡೆನ್ ಪೊಲೀಸ್ ಸ್ಟೇಷನ್ನಿಗೆ ಬೆಂಕಿ ಹಚ್ಚುವಂತೆ ಬಹಿರಂಗವಾಗಿಯೇ ಹೇಳುವ ವೀಡಿಯೋ ಓಡಾಡುತ್ತಿದೆ.

ಅಲ್ಲದೆ ಸನ್ನಿವೇಶವನ್ನು ಕೋಮುಗ್ರಸ್ತಗೊಳಿಸುವ

ಪುಟ 14 ನೋಡಿ

ಕಾಟಾಚಾರದ ಬಜೆಟ್-ಪೂರ್ವ ಸಮಾಲೋಚನೆಯ ಆಹ್ವಾನ- ಕೇಂದ್ರ ಕಾರ್ಮಿಕ ಸಂಘಟನೆಗಳ ಬಲವಾದ ಪ್ರತಿಭಟನೆ





ಕಾರ್ಮಿಕ ಸಂಘಟನೆಗಳೊಡನೆ ಬಜೆಟ್-ಪೂರ್ವ ಸಮಾಲೋಚನೆಗೆಂದು ಹಣಕಾಸು ಇಲಾಖೆಯ ಹಿರಿಯ ಸಲಹಾಕಾರರು ನವಂಬರ್ 28 ರಂದು ಬೆಳಿಗ್ಗೆ 11ರಿಂದ 12-15 ರವರೆಗಿನ ಕೇವಲ 75 ನಿಮಿಷಗಳ ವರ್ಚುವಲ್ ಸಭೆಯನ್ನು ಗೊತ್ತುಪಡಿಸಿ ಕಳಿಸಿದ ಆಹ್ವಾನಕ್ಕೆ 10 ಕೇಂದ್ರೀಯ ಕಾರ್ಮಿಕ ಸಂಘಟನೆಗಳು ತೀವ್ರ ಆಕ್ಷೇಪವನ್ನು ವ್ಯಕ್ತಪಡಿಸಿವೆ. ಈ ಬಗ್ಗೆ ಒಂದು ಕಟುವಾದ ಜಂಟಿ ಪತ್ರವನ್ನು ಅವು ಕೇಂದ್ರ ಹಣಕಾಸು ಮಂತ್ರಿಗಳಿಗೆ ಕಳಿಸಿವೆ.

ಕಾರ್ಮಿಕ ಇಲಾಖೆಯ ಪ್ರಕಾರವೇ 12 ಕೇಂದ್ರೀಯ ಕಾರ್ಮಿಕ ಸಂಘಟನೆಗಳಿವೆ. ಇವುಗಳ ಅಭಿಪ್ರಾಯಗಳನ್ನು ಕೇಳಲು ಕೇವಲ 75 ನಿಮಿಷಗಳ, ಅದೂ ಕೊವಿಡ್ ಸಂಬಂಧಿ ನಿರ್ಬಂಧಗಳನ್ನು ಸಂಪೂರ್ಣವಾಗಿ ತೆಗೆದ ಮೇಲೂ ವರ್ಚುವಲ್ ಸಭೆಯನ್ನು ಏರ್ಪಡಿಸಲಾಗಿದೆ. ಅಂದರೆ ಇಂತಹ ಒಂದು ಗಹನವಾದ ವಿಷಯದ ಮೇಲೆ ತಮ್ಮ ಅಭಿಪ್ರಾಯ, ಸಲಹೆ-ಸೂಚನೆಗಳನ್ನು ಸಲ್ಲಿಸಲು ಈ ಸಂಘಟನೆಗಳಿಗೆ ಕೇವಲ 5 ನಿಮಿಷ ಸಾಕು ಎಂದು ಸರಕಾರ ಬಗೆದಂತಿದೆ. ಆದ್ದರಿಂದ ಈ ಬಗ್ಗೆ ತೀವ್ರ ನಿರಾಸೆಯನ್ನು ಈ ಪತ್ರದಲ್ಲಿ ವ್ಯಕ್ತಪಡಿಸಲಾಗಿದೆ.

ಕಾರ್ಮಿಕರು ದೇಶದ ಜಿಡಿಪಿಯನ್ನು ನಿರ್ಮಿಸುವ, ಇಡೀ ಅರ್ಥವ್ಯವಸ್ಥೆಯ ಮೌಲ್ಯವನ್ನು ಸೃಷ್ಟಿಸುವ ಅತ್ಯಂತ ಉತ್ಪಾದಕ ವಿಭಾಗ. ಇದನ್ನು ಪ್ರತಿನಿಧಿಸುವ ಕಾರ್ಮಿಕ ಸಂಘಟನೆಗಳು ಇಂತಹ ಸಮಾಲೋಚನೆಯ ಪ್ರಕ್ರಿಯೆಯಲ್ಲಿ ಪ್ರಧಾನ ಭಾಗೀದಾರರಾಗಬೇಕು. ಇಂತಹವರೊಡನೆ ಈ ರೀತಿಯ ವರ್ತನೆ ಒಂದು ಪ್ರಜಾಸತ್ತಾತ್ಮಕ ಆಡಳಿತಕ್ಕೆ ಒಪ್ಪುವ ಅಥವ ನ್ಯಾಯ ಒದಗಿಸುವ ವರ್ತನೆಯಲ್ಲ. ಆದ್ದರಿಂದ ಹಣಕಾಸು ಇಲಾಖೆಯ/ಸರ್ಕಾರದ ಇಂತಹ ಕಾಟಾಚಾರದ ನಿಲುವನ್ನು ತಾವು ಬಲವಾಗಿ ಪ್ರತಿಭಟಿಸುವುದಾಗಿ ಪತ್ರಕ್ಕೆ ಸಹಿ ಹಾಕಿರುವ ಐಎನ್‌ಟಿಯುಸಿ, ಎಐಟಿಯುಸಿ, ಹೆಚ್‌ಎಂಎಸ್, ಸಿಐಟಿಯು, ಎಐಯುಟಿಯುಸಿ, ಟಿಯುಸಿಸಿ, ಎಸ್‌ಇಡಬ್ಲ್ಯುಎ, ಎಐಸಿಸಿಟಿಯು, ಎಲ್‌ಪಿಎಫ್ ಮತ್ತು ಯುಟಿಯುಸಿ ಹೇಳಿವೆ.

ಹಣಕಾಸು ಇಲಾಖೆ ಕೇಂದ್ರೀಯ ಕಾರ್ಮಿಕ ಸಂಘಟನೆಗಳೊಂದಿಗೆ ಒಂದು ಪರಿಣಾಮಕಾರಿ ಬಜೆಟ್-ಪೂರ್ವ ಸಮಾಲೋಚನೆ ನಡೆಸುವ ಬಗ್ಗೆ ಗಂಭೀರ ಪುನರಾಲೋಚನೆ ನಡೆಸಿ, ತರ್ಕಬದ್ಧ ಸಮಯಾವಕಾಶ ವನ್ನು ನೀಡುವ ಒಂದು ಭೌತಿಕ ಸಭೆಯನ್ನು ಕರೆಯಬೇಕು ಎಂದು ಈ 10 ಕಾರ್ಮಿಕ ಸಂಘಟನೆಗಳು ಆಗ್ರಹಿಸಿವೆ.



ತ್ರಿಪುರಾದಲ್ಲಿ ಮತ್ತೊಂದು ಮಾರಣಾಂತಿಕ ಹಲ್ಲೆ-ಸಿಪಿಐ(ಎಂ) ಪೊಲಿಟ್‌ಬ್ಯುರೊಖಂಡನೆ

"ರಾಜ್ಯದಲ್ಲಿ ಪ್ರಜಾಪ್ರಭುತ್ವ ಮತ್ತು ಪ್ರಜಾಸತ್ತಾತ್ಮಕ ಹಕ್ಕುಗಳನ್ನು ಸಂಪೂರ್ಣವಾಗಿ ಮರುಸ್ಥಾಪಿಸಬೇಕು"

ನವೆಂಬರ್ 30 ರಂದು ತ್ರಿಪುರಾದ ಚಾರಿಲಂನಲ್ಲಿ ಸಿಪಿಐ(ಎಂ) ನಾಯಕರು ಮತ್ತು ಕಾರ್ಯಕರ್ತರ ಮೇಲೆ ನಡೆದ ಭೀಕರ ಹಲ್ಲೆಯನ್ನು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಬಲವಾಗಿ ಖಂಡಿಸಿದೆ. ಇದರಲ್ಲಿ ಪಕ್ಷದ ಸದಸ್ಯ ಶಾಹಿದ್ ಮಿಯಾ ಹತ್ಯೆಯಾಗಿದೆ ಮತ್ತು ಇತರ ಹಲವರಿಗೆ ಗಾಯಗಳಾಗಿವೆ.

ಕಳೆದ ನಾಲ್ಕೂವರೆ ವರ್ಷಗಳಿಂದ ಬಲವಂತವಾಗಿ ಮುಚ್ಚಲಾಗಿದ್ದ ಸೆಪಹಿಜಾಲಾ ಜಿಲ್ಲೆಯ ಚಾರಿಲಂನಲ್ಲಿರುವ ಸ್ಥಳೀಯ ಸಮಿತಿ ಕಚೇರಿಯನ್ನು ಪುನಃ ತೆರೆಯಲು ಪಕ್ಷದ ಕಾರ್ಯಕರ್ತರು ತೆರಳಿದ್ದ ವೇಳೆ ಬಿಜೆಪಿ ಗೂಂಡಾಗಳ ಹಿಂಸಾತ್ಮಕ ದಾಳಿ ನಡೆದಿದೆ.

ಬಿಜೆಪಿ ಗೂಂಡಾಗಳ ಈ ಭೀಕರ ದಾಳಿಯಲ್ಲಿ, ಶಾಹಿದ್ ಮಿಯಾ ಸಾವನ್ನಪ್ಪಿದ್ದಲ್ಲದೆ, ಹಿರಿಯ ನಾಯಕ, ಶಾಸಕ ಮತ್ತು ಮಾಜಿ ಹಣಕಾಸು ಸಚಿವ ಭಾನು ಲಾಲ್ ಸಾಹಾ ಸೇರಿದಂತೆ ಹಲವರು ಗಂಭೀರವಾಗಿ ಗಾಯಗೊಂಡರು. ಫೆಬ್ರವರಿ 2018 ರಲ್ಲಿ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದಾಗಿನಿಂದ ತ್ರಿಪುರಾದಲ್ಲಿ ನಿರ್ಮಾಣಗೊಂಡಿರುವ ಹಿಂಸಾಚಾರದ ಸ್ಥಿತಿಯನ್ನು ಇದು ತೋರಿಸುತ್ತದೆ. ಸಿಪಿಐ(ಎಂ) ಮತ್ತು ಇತರ ವಿರೋಧ ಪಕ್ಷಗಳು ಮುಕ್ತವಾಗಿ ಕಾರ್ಯನಿರ್ವಹಿಸಲು, ತಮ್ಮ ಕಚೇರಿಗಳನ್ನು ನಡೆಸಲು ಅಥವಾ ಸಾಮಾನ್ಯ ರಾಜಕೀಯ ಚಟುವಟಿಕೆಗಳನ್ನು ನಡೆಸಲು ಬಿಡುತ್ತಿಲ್ಲ. ವಿಧಾನಸಭೆ ಚುನಾವಣೆಗೆ ಇನ್ನೆರಡು ತಿಂಗಳು ಬಾಕಿ ಇರುವಾಗ ಆಡಳಿತ ಮತ್ತು ಪೊಲೀಸರ ಶಾಮೀಲಿನೊಂದಿಗೆ ಆಡಳಿತ ಪಕ್ಷ ರಾಜಕೀಯ ವಿರೋಧಿಗಳನ್ನು ಭಯಭೀತರನ್ನಾಗಿಸುತ್ತಿದೆ ಎಂದು ಪೊಲಿಟ್‌ಬ್ಯುರೊ ಹೇಳಿದೆ.

ಹತ್ಯೆ ಮತ್ತು ಹಿಂಸಾಚಾರಕ್ಕೆ ಕಾರಣರಾದ ದುಷ್ಕರ್ಮಿಗಳನ್ನು ಬಂಧಿಸಲು ಮತ್ತು ಅವರ ವಿರುದ್ಧ ಕಠಿಣಕ್ರಮ ಕೈಗೊಳ್ಳಲು ಪೊಲೀಸರು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು, ಮುಕ್ತ ಮತ್ತು ನ್ಯಾಯಸಮ್ಮತ ಚುನಾವಣೆ ನಡೆಯಬೇಕಾದರೆ ತ್ರಿಪುರಾದಲ್ಲಿ ಪ್ರಜಾಪ್ರಭುತ್ವ ಮತ್ತು ಪ್ರಜಾಸತ್ತಾತ್ಮಕ ಹಕ್ಕುಗಳನ್ನು ಸಂಪೂರ್ಣವಾಗಿ ಮರುಸ್ಥಾಪಿಸಬೇಕು ಎಂದು ಸಿಪಿಐ(ಎಂ) ಪೊಲಿಟ್ ಬ್ಯೂರೋ ಆಗ್ರಹಿಸಿದೆ.

65 ವರ್ಷದ ರೈತ ಶಾಹಿದ್ ಮಿಯಾ ಹತ್ಯೆ ತ್ರಿಪುರಾದಲ್ಲಿ ಪ್ರಜಾಪ್ರಭುತ್ವದ ಸಮರವನ್ನು ತೀಕ್ಷ್ಣಗೊಳಿಸಿದೆ, ಇದುವರೆಗೆ ಈ ಸಮರದಲ್ಲಿ ಸಿಪಿಐ(ಎಂ) 24 ಮಂದಿ ಹುತಾತ್ಮರಾಗಿದ್ದಾರೆ. ಈ ಬಾರಿಯ ಹಲ್ಲೆಯಲ್ಲಿ ಭಾಗವಹಿಸಿದ ಕಿಡಿಗೇಡಿಗಳೆಲ್ಲರೂ ರಾಜ್ಯದ ಉಪಮುಖ್ಯಮಂತ್ರಿ ಜಿಷ್ಣುದೇಬ್‌ಬರ್ಮ ಅವರ ಬೆಂಬಲಿಗರು ಎಂದು ಈ ಹಲ್ಲೆಯನ್ನು ಬಲವಾಗಿ ಖಂಡಿಸುತ್ತ ರಾಜ್ಯ ಸಿಪಿಐ(ಎಂ) ಕಾರ್ಯದರ್ಶಿ ಜಿತೇಂದ್ರಚೌಧುರಿ ಹೇಳಿದ್ದಾರೆ.

ಡಿಸೆಂಬರ್ 1 ರಂದು ಈ ಹಲ್ಲೆಯನ್ನು ಖಂಡಿಸಿ ರಾಜ್ಯಾದ್ಯಂತ ಪ್ರತಿಭಟನೆಗಳು ನಡೆದಿವೆ.

ವಿಝಿಂಜಂ ಬಂದರು

ಪುಟ 13 ರಿಂದ

ಪ್ರಯತ್ನವೂ ಕಾಣ ಬಂದಿದೆ. ಮೀನುಗಾರಿಕಾ ಮಂತ್ರಿ ಇ.ಅಬ್ದುರ್‌ರಹಿಮಾನ್ ಹೆಸರಲ್ಲೇ ಭಯೋತ್ಪಾದಕನೊಬ್ಬ ಇದ್ದಾನೆ ಎಂದು ಫಾದರ್ ಥಿಯೊಡೊಸಿಯಸ್ ಡಿ ಕ್ರುಝ್ ಹೇಳಿರುವುದು ದಾಖಲಾಗಿದೆ.

ಪ್ರತಿಭಟನಾಕಾರರು ಅನುಸರಿಸುತ್ತಿರುವ ಕಾರ್ಯವಿಧಾನವೂ ಇತ್ತೀಚಿನ ಎಲ್‌ಡಿಎಫ್ ಸರಕಾರದ ವಿರುದ್ಧ ನಡೆಸಿರುವ ಕಾರ್ಯತಂತ್ರಗಳಂತೆಯೇ ಇದೆ. ಇದರಲ್ಲಿ ಒಂದು ಅಭಿವೃದ್ಧಿ ಕಾಮಗಾರಿಗಳಿಗೆ ತಡೆಯೊಡ್ಡುವುದು. ಈ ಪ್ರಾಜೆಕ್ಟನ್ನು ಆರಂಭಿಸಿದ್ದ, ಬೆಂಬಲಿಸಿದ್ದ ವಿರೋಧ ಪಕ್ಷಗಳು ಸಮಯ ಸಾಧಕತನದಿಂದ ಇದಕ್ಕೆ ಬೆಂಬಲ ಕೊಡುತ್ತಿದ್ದಾರೆ, ಅಕೋಮುವಾದಿಗಳು ಮತ್ತು ಪರಿಸರದ ಹೆಸರಲ್ಲಿ ರಾಜಕೀಯ ನಡೆಸುವವರು ಅರೊಡನೆ ಸೇರಿಕೊಂಡಿದ್ದಾರೆ. ಕೆಲವರಂತೂ ಪ್ರತಿಭಟನೆಗಳನ್ನು ನಿಲ್ಲಿಸಲು ಕೇಂದ್ರೀಯ ಪಡೆಗಳ ಮಧ್ಯಪ್ರವೇಶ ಅಗತ್ಯ ಎನ್ನುವ ವರೆಗೂ ಹೋಗಿದ್ದಾರೆ. ಇದರಿಂದಾಗಿ ಈ ಪ್ರತಿಭಟನೆಯ ಹೆಸರಿನಲ್ಲಿ ಹಿಂಸಾಚಾರ ಎಲ್‌ಡಿಎಫ್ ಸರಕಾರವನ್ನು ಉರುಳಿಸುವ ತಂತ್ರವನ್ನು ಒಂದು ಹೆಜ್ಜೆ ಮುಂದೆ ಒಯ್ದಿದೆ. ಇದು 60 ವರ್ಷಗಳ ಹಿಂದೆ ರಾಜ್ಯದಲ್ಲಿ ಶಿಕ್ಷಣವನ್ನು ಜನಪರಗೊಳಿಸುವುದನ್ನು ತಡೆಯಲು 'ವಿಮೋಚನಾ ಸಮರಂ' ಹೆಸರಿನಲ್ಲಿ ನಡೆಸಿದ್ದನ್ನು ಪುನರಾವರ್ತಿಸುವ ಪ್ರಯತ್ನ ನಡೆಯುತ್ತಿರುವುದನ್ನು ಸೂಚಿಸುತ್ತದೆ. ಆದರೆ ಇದಕ್ಕೆ ಅವಕಾಶ ಕೊಡುವುದಿಲ್ಲ ಎಂದು ಎಲ್‌ಡಿಎಫ್ ಮುಖಂಡರು ಹೇಳುತ್ತಿದ್ದಾರೆ.



ಜಗದ ಸುತ್ತ

ವಸಂತರಾಜ ಎನ್.ಕೆ.

ಈಜಿಪ್ಟ್ ನಲ್ಲಿ ಹವಾಮಾನ ಬದಲಾವಣೆ ಸಮ್ಮೇಳನ COP27

‘ನಷ್ಟ ಮತ್ತು ಪರಿಹಾರ ನಿಧಿ’ ಸ್ಥಾಪನೆಯತ್ತ ಪ್ರಗತಿ, ಆದರೆ ಹೆಚ್ಚಿನ ‘ನಷ್ಟ’ ಕಾದಿದೆಯೆ?

ಹವಾಮಾನ ಬದಲಾವಣೆಯಿಂದ ಬಡದೇಶಗಳಿಗೆ ಆಗುತ್ತಿರುವ ‘ನಷ್ಟ’ಕ್ಕೆ, ಅದಕ್ಕೆಕಾರಣವಾದ ಕೈಗಾರಿಕೀಕೃತ ಮುಂದುವರೆದ ದೇಶಗಳು ‘ಪರಿಹಾರ’ ಕೊಡಲು ನಿಧಿ ಸ್ಥಾಪಿಸಬೇಕೆಂಬ ನಿರ್ಧಾರ ಈಜಿಪ್ಟ್ ನ ಶರ್ಮ್–ಎಲ್–ಶೇಕ್ ನಲ್ಲಿ ನಡೆದ ಹವಾಮಾನ ಬದಲಾವಣೆ ಸಮ್ಮೇಳನದ (COP2) ಏಕಮಾತ್ರ ಮಹತ್ವದ ಸಕಾರಾತ್ಮಕ ಬೆಳವಣಿಗೆ. ಆದರೆ ಹವಾಮಾನ ಬದಲಾವಣೆಯ ಪ್ರಕೋಪ ತಡೆಯುವ ಜಾಗತಿಕ ಕಾರ್ಯಾಚರಣೆಯಲ್ಲಿ ಒಟ್ಟಾರೆಯಾಗಿ ಹಿನ್ನಡೆಯೇ ಆಗಿದೆ ಎನ್ನಬೇಕು. ಇದು ಮುಂದೆ ಇನ್ನಷ್ಟು ಹೆಚ್ಚಿನ ‘ನಷ್ಟ’ಕ್ಕೆ ಕಾರಣವಾಗಬಹುದೇ?

ಈಜಿಪ್ಟ್ ನ ಶರ್ಮ್–ಎಲ್–ಶೇಕ್ ನಲ್ಲಿ ನವೆಂಬರ್ 6–18 ರ ವರೆಗೆ ನಡೆದು ಎರಡು ದಿನ ‘ಓವರ್ ಟೈಮ್’ ಕೆಲಸ ಮಾಡಿದ ಹವಾಮಾನ ಬದಲಾವಣೆ 27ನೆಯ ಸಮ್ಮೇಳನದ (COP27) ಕುರಿತು ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಮತ್ತಿತರ ಸಂಘಟಕರು ತೃಪ್ತಿ ವ್ಯಕ್ತಪಡಿಸಿದ್ದಾರೆ. ಆದರೆ ‘ನಷ್ಟ ಮತ್ತು ಪರಿಹಾರ ನಿಧಿ’ ಯ (ಲಾಸ್ ಅಂಡ್ ಡ್ಯಾಮೇಜ್ ಫಂಡ್) ಕುರಿತು ಒಪ್ಪಂದ ಬಿಟ್ಟರೆ, ಸಮಸ್ಯೆಯ ಗಂಭೀರತೆಯನ್ನು ಪರಿಗಣಿಸಿದರೆ ಉಳಿದಂತೆ ನಿರಾಶಾದಾಯಕವೇ ಆಗಿತ್ತು.

ಕಳೆದ ಮೂರು ದಶಕಗಳಿಂದಲೂ ಆಭಿವೃದ್ಧಿಶೀಲ ದೇಶಗಳು ‘ನಷ್ಟ ಮತ್ತು ಪರಿಹಾರ ನಿಧಿ’ಗೆ (ಲಾಸ್ ಅಂಡ್ ಡ್ಯಾಮೇಜ್ ಫಂಡ್) ಈ ಸಮಸ್ಯೆಯನ್ನು ಸೃಷ್ಟಿಸುವಲ್ಲಿ ಸಿಂಹಪಾಲು ಪಡೆದ ಅಭಿವೃದ್ಧಿ ಹೊಂದಿದ ಶ್ರೀಮಂತ ದೇಶಗಳು ದೇಣಿಗೆ ಕೊಡಬೇಕೆಂದು ಒತ್ತಾಯಿಸುತ್ತಿದ್ದವು. ಈಗಾಗಲೇ ಕಂಡು ಬಂದಿರುವ ಭಾರೀ ಚಂಡಮಾರುತ, ತೀವ್ರ ನೆರೆ, ಶೀತ ಮತ್ತು ಉಷ್ಣ ಅಲೆಗಳಲ್ಲದೆ, ನಿಧಾನವಾಗಿ ಆದರೆ ಮತ್ತೆ ಸರಿಹೋಗದ ಪ್ರಮಾಣದಲ್ಲಿ ಆಗುತ್ತಿರುವ ಸಮುದ್ರ ಮಟ್ಟದ ಏರಿಕೆ, ಮರುಭೂಮಿಕರಣ ಇತ್ಯಾದಿಗಳಿಂದ ಆಗುತ್ತಿರುವ ನಷ್ಟವನ್ನು ಪರಿಹರಿಸಲೂ ಅಗತ್ಯವಾಗಿದೆ. ಈ ಸಮಸ್ಯೆಯನ್ನು ಕೆಲವು ಸಂತ್ರಸ್ತ ಸಣ್ಣ ದ್ವೀಪ ದೇಶಗಳು ಅತ್ಯಂತ ಬಡ ದೇಶಗಳು ಈಗಾಗಲೇ ಎದುರಿಸುತ್ತಿದ್ದು ತೀವ್ರ ನಷ್ಟ–ಹಾನಿ ಅನುಭವಿಸಿವೆ.

ಅವುಗಳ ಸತತ ಒತ್ತಡದಿಂದಾಗಿ ಈ ಕುರಿತು 19ನೆಯ ಸಮ್ಮೇಳನದಲ್ಲಿ (COP19) ಚರ್ಚೆಗೆ ಬಂದು ಒಂದು ಚೌಕಟ್ಟನ್ನು ಪ್ರಸ್ತಾವಿಸಲಾಯಿತು. ಆದರೆ ಶ್ರೀಮಂತ ದೇಶಗಳು, ವಿಶೇಷವಾಗಿ ಯು.ಎಸ್ ಮತ್ತು ಯುರೋ ಕೂಟ. ಈ ಒತ್ತಾಯವನ್ನು ಅಂಗೀಕರಿಸುವುದು ಎಂದರೆ ಶ್ರೀಮಂತ ದೇಶಗಳು ‘ಅಪರಾಧ’ಗಳನ್ನು ಎಸಗಿದ್ದಕ್ಕೆ ಇದು ‘ಶಿಕ್ಷೆ’ ಎಂದು ಒಪ್ಪಿಕೊಂಡಂತೆ. ಇಂತಹ ‘ಪರಿಹಾರ’ ಮಿತಿಯಿಲ್ಲದೆ ಹೋಗಬಹುದು ಎಂದು ಭಾವಿಸಿದವು. COP19 ಪ್ರಸ್ತಾವಿಸಿದ ಚೌಕಟ್ಟು ಸ್ಪಷ್ಟವಾಗಿ ಇಂತಹ ನಿಲುವನ್ನುಹೊಂದಿರಲಿಲ್ಲವಾದರೂ, ಈ ಪ್ರಸ್ತಾವಕ್ಕೆ ಪ್ರತಿರೋಧ ಒಡ್ಡುತ್ತಾ ಬಂದವು. 2021ರಲ್ಲಿ ಶ್ರೀಮಂತ ದೇಶಗಳು ಪ್ರತಿ ವರ್ಷ 100 ಶತಕೋಟಿ ಡಾಲರುಗಳನ್ನು ನೀಡುವವು ಎಂಬ ಅಸ್ಪಷ್ಟ ವಾಗ್ದಾನ ಬಿಟ್ಟರೆ ಏನೂ ಈ ವರೆಗೆ ಸಾಧಿತವಾಗಿರಲಿಲ್ಲ. ಈಗ ಆ ಪ್ರಸ್ತಾವ ಒಂದು ವಿದ್ಯುಕ್ತ ಒಪ್ಪಂದದಲ್ಲಿ ಸೇರಿರುವುದು ಮಹತ್ವದ ಪ್ರಗತಿ. ಇದಕ್ಕಾಗಿ ಭಾರತ, ಚೀನಾ ಸೇರಿದಂತೆ ಜಿ–77 ದೇಶಗಳು ಐಕ್ಯ ಹೋರಾಟ ನಡೆಸಿದ್ದು ಗಮನಾರ್ಹವಾಗಿತ್ತು.



ಇದಲ್ಲದೆ ಜಿ–77 ದೇಶಗಳು ಸಾರ್ವಜನಿಕ ನಿಧಿ ಬಳಸುವ ಜಾಗತಿಕ ಹಣಕಾಸು ಸಂಸ್ಥೆಗಳ ಸುಧಾರಣೆಗೆ ಒತ್ತಡ ಹೇರಿದ್ದೂ ಗಮನಾರ್ಹ ಪ್ರಗತಿಯಾಗಿತ್ತು. ಜಾಗತಿಕ ಹಣಕಾಸು ಸಂಸ್ಥೆಗಳು ಬಡ ಮತ್ತು ಅಭಿವೃದ್ಧಿಶೀಲ ದೇಶಗಳಿಗೆ ಹವಾಮಾನ ಬದಲಾವಣೆ ಶಮನಕ್ಕೆ ಮಾತ್ರವಲ್ಲ, ಇತರ ಅಭಿವೃದ್ಧಿ ಕಾರ್ಯಕ್ರಮಗಳಿಗೂ ಹಣಕಾಸು ಒದಗಿಸುವುದರಲ್ಲಿ ವಿಫಲವಾಗಿವೆ. ಈ ಸ್ಥಿತಿ ಬದಲಾಯಿಸಬೇಕು. ಈ ಸಂಸ್ಥೆಗಳ ಸುಧಾರಣೆ ಬೇಕು ಎಂದು ಒತ್ತಾಯಿಸಿದವು. ಈ ಕುರಿತು ಒಪ್ಪಂದದಲ್ಲಿ ಬರದಿದ್ದರೂ ಭವಿಷ್ಯದಲ್ಲಿ ಇದು ಪ್ರಮುಖ ವಿಷಯವಾಗಲಿದೆ ಎಂಬ ನಿರೀಕ್ಷೆ ಹುಟ್ಟಿಸಿದೆ.

‘ನಷ್ಟ ಮತ್ತು ಪರಿಹಾರ ನಿಧಿ’ಯ ವಿವರಗಳು ಅಸ್ಪಷ್ಟ

ಆಭಿವೃದ್ಧಿಶೀಲ ದೇಶಗಳಿಗೆ ಹವಾಮಾನ ಬದಲಾವಣೆ ಪರಿಣಾಮಗಳನ್ನು ಶಮನಗೊಳಿಸುವ ಮತ್ತು ಅವುಗಳಿಗೆ ಸರಿಹೊಂದಿಕೊಳ್ಳುವ ನಿಧಿಗಿಂತ ಇದು ಭಿನ್ನವಾದ್ದು ಎಂದು ಗಮನಿಸಬೇಕು. ಇದು ಅತ್ಯಂತ ಗಮನಾರ್ಹ ಪ್ರಗತಿ. ಆದರೆ ನಿಧಿಯಲ್ಲಿ ಎಷ್ಟು ಹಣ ಇರುತ್ತದೆ, ಯಾವಾಗ ಈ ನಿಧಿ ಸಂಗ್ರಹವಾಗುತ್ತದೆ? ಯಾವ ದೇಶಗಳು ಎಷ್ಟು ಈ ನಿಧಿಗೆ ದೇಣಿಗೆ ನೀಡುತ್ತವೆ? ಸರಕಾರಗಳಲ್ಲದೆ ಇತರ ಯಾವ ಸಂಸ್ಥೆಗಳು ದೇಣಿಗೆ ಕೊಡುತ್ತವೆ? ಯಾವ ದೇಶಗಳಿಗೆ ಯಾವ ಮಾನದಂಡದ ಮೇಲೆ ಈ ನಿಧಿಯ ಭಾಗವನ್ನು ಕೊಡಲಾಗುತ್ತದೆ? ಇದು ಸಾಲದ ಅಥವಾ ಅನುದಾನದ ರೂಪದಲ್ಲಿರುತ್ತದಾ? ಈ ನಿಧಿಯ ನಿರ್ವಹಣೆಗೆ ಯಾವ ರೀತಿಯ ಸಂಸ್ಥೆ ರಚಿಸಲಾಗುತ್ತದೆ? ಎಂಬಿತ್ಯಾದಿ ಪ್ರಮುಖ ಪ್ರಶ್ನೆಗಳು ಇತ್ಯರ್ಥವಾಗಿಲ್ಲ ಅಥವಾ ಚರ್ಚೆಯೇ ಆಗಿಲ್ಲವಾದ್ದರಿಂದ ಈ ಕುರಿತು ಹೆಚ್ಚು ಸಂಭ್ರಮಪಡುವುದು ತಪ್ಪಾದೀತು. ಮಾರ್ಚ್ 2023ರೊಳಗೆ ಒಂದು ‘ತಾತ್ಕಾಲಿಕ ಸಮಿತಿ’ ರಚಿಸಿ ಈ ವಿವರಗಳ ಕುರಿತು ನಿರ್ದಿಷ್ಟ ಪ್ರಸ್ತಾವಗಳನ್ನು ಸಿದ್ಧಪಡಿಸಲಾಗುವುದು. ಮುಂದಿನ ಅಂದರೆ ನವೆಂಬರ್–ಡಿಸೆಂಬರ್ 2028ರಲ್ಲಿ ನಡೆಯಲಿರುವ COP28 ಸಮ್ಮೇಳನದಲ್ಲಿ ಇದನ್ನು ಅಂತಿಮಗೊಳಿಸಲಾಗುವುದು ಎಂದು ಒಪ್ಪಂದದಲ್ಲಿ ಹೇಳಲಾಗಿದೆ. ಈ ನಿಧಿಗೆ ಸರಕಾರಗಳು ಅಥವಾ ಸಾರ್ವಜನಿಕ ಸಂಸ್ಥೆಗಳಿಂದ ಮಾತ್ರ ದೇಣಿಗೆ ಬರುವುದಿಲ್ಲವೆಂಬುದನ್ನು ಸ್ಪಷ್ಟಪಡಿಸಲಾಗಿದೆ. ಅಂದರೆ ಶ್ರೀಮಂತ ದೇಶಗಳ ಸರಕಾರಗಳು ತಾವು ಉಂಟು ಮಾಡಿದ ‘ನಷ್ಟ’ಕ್ಕೆ ‘ಪರಿಹಾರ’ ಕೊಡಲು ಒಪ್ಪಿವೆ ಎಂದು ಹೇಳುವಂತಿಲ್ಲ.

ಶರ್ಮ್–ಎಲ್–ಶೇಕ್ COP27 ಜಾರಿ ಯೋಜನೆಯಲ್ಲಿ ಹವಾಮಾನ ಬದಲಾವಣೆಯ ಪರಿಣಾಮಗಳನ್ನು ಎದುರಿಸಲು ಆಭಿವೃದ್ಧಿಶೀಲ ದೇಶಗಳಿಗೆ ಸುಮಾರು 5.8–5.9 ಲಕ್ಷ ಕೋಟಿ ಡಾಲರು ಹಣಕಾಸು ನೆರವು ಕೊಡಬೇಕಾಗುತ್ತದೆ ಎಂದು ಅಂದಾಜು ಮಾಡಿದೆ. ಇದು ಬಹುಶಃ ಶಮನ ಮತ್ತು ಸರಿಹೊಂದಿಕೊಳ್ಳುವ ಕ್ರಮಗಳು ಹಾಗೂ ನಷ್ಟ–ಪರಿಹಾರವನ್ನು ಒಳಗೊಂಡಿರುತ್ತವೆ. 2021ರಲ್ಲಿ ಶ್ರೀಮಂತ ದೇಶಗಳು ಮಾಡಿದ 100 ಶತಕೋಟಿ ಡಾಲರುಗಳ ಸಹಾಯಧನದ ವಾಗ್ದಾನ ಜಾರಿಯಾಗಿಲ್ಲವೆಂದು ಈ ದಸ್ತಾವೇಜು ‘ಗಂಭೀರ ಆತಂಕ’ ವ್ಯಕ್ತಪಡಿಸಿದೆ. ಹೀಗಾಗಿ ಯಾವುದೇ ಹೆಸರಲ್ಲಿ ಕರೆಯಲಿ, ಹವಾಮಾನ ಬದಲಾವಣೆಯ ಪರಿಣಾಮಗಳನ್ನು ಎದುರಿಸಲು ಆಭಿವೃದ್ಧಿಶೀಲ ದೇಶಗಳಿಗೆ ಸಹಾಯಧನ ಕೊಡುವ ಈ ಮಹತ್ವದ ಸಕಾರಾತ್ಮಕ ಬೆಳವಣಿಗೆಯೂ ಬರಿಯ ಮರೀಚಿಕೆ ಆಗುವ ಅಪಾಯ ಇನ್ನೂ ಇದೆ. COP28ರ ನಂತರವಷ್ಟೇ ಈ ಕುರಿತು ವಿಶ್ವಾಸ ಮೂಡೀತು.

ಶಮನದ ಕಾರ್ಯಯೋಜನೆಯಲ್ಲಿ ತೀವ್ರ ಹಿನ್ನಡೆ

ಹವಾಮಾನ ಬದಲಾವಣೆಯ ಶಮನಕ್ಕೆ ಬೇಕಾಗಿದ್ದ ತುರ್ತು ಕಾರ್ಯಯೋಜನೆಯಲ್ಲಿ COP27ರಲ್ಲಿ ಪ್ರಗತಿಯಾಗಿಲ್ಲ. ಮಾತ್ರವಲ್ಲ, ಹಿನ್ನಡೆಯಾಗಿದೆ ಎಂಬುದು ಗಂಭೀರ ಬೆಳವಣಿಗೆ. ಇದಕ್ಕಾಗಿ ಕಾರ್ಬನ್ ಸೂಸುವಿಕೆಯಲ್ಲಿ ಕಡಿತವನ್ನು ಹೆಚ್ಚಿಸಲಿಲ್ಲ. ಮಾತ್ರವಲ್ಲ, ವೈಜ್ಞಾನಿಕ ವರದಿಗಳು ಸೂಚಿಸಿದ ಗಂಭಿರ ಪರಿಸ್ಥಿತಿಯನ್ನು ಗಣನೆಗೆ ತೆಗೆದುಕೊಳ್ಳಲು ವಿಫಲವಾಗಿದೆ. ಗ್ಲಾಸ್ಗೊದ COP26ರಲ್ಲಿ ವಿಧಿಸಿದ ಸೂಸುವಿಕೆಯಲ್ಲಿ ಕಡಿತಗಳು ಮತ್ತು ಕಾರ್ಬನ್ ಬಜೆಟ್ ತಾಪಮಾನ ಹೆಚ್ಚಳವನ್ನು 2 ಡಿಗ್ರಿ ಸೆಂ. ಗೆ ಮಿತಿಗೊಳಿಸುವ ಗುರಿ ಹೊಂದಿದ್ದಾಗಿತ್ತು. ಈ ವರೆಗೆ ಕಂಡು ಬಂದ ಹವಾಮಾನ ವೈಪರೀತ್ಯದ ಅನಾಹುತಗಳ ನಿರ್ದಿಷ್ಟ ಉದಾಹರಣೆಗಳು ಮತ್ತು ಹೊಸ ವೈಜ್ಞಾನಿಕ ಅಂದಾಜುಗಳು 1.5 ಡಿಗ್ರಿ ಸೆಂ. ಏರಿಕೆಯ ಗುರಿಯಿಟ್ಟುಕೊಂಡು ತಕ್ಕ ಸೂಸುವಿಕೆ ಕಡಿತಗಳು ಮತ್ತು ಕಾರ್ಬನ್ ಬಜೆಟ್ ರೂಪಿಸುವ ತುರ್ತಿನತ್ತ ಬೊಟ್ಟು ಮಾಡಿದ್ದವು. ಆದರೆ COP27 ಇದನ್ನು ಗಣನೆಗೆ ತೆಗೆದುಕೊಳ್ಳಲಿಲ್ಲವೆಂಬುದು ಗಂಭೀರ ವೈಫಲ್ಯವೆನ್ನಬೇಕು.

ಈಗಿನ ಸೂಸುವಿಕೆ, ಗ್ಲಾಸ್ಗೊದ COP26ರಲ್ಲಿ ವಿಧಿಸಿದ ಸೂಸುವಿಕೆಯ ಆಧಾರದ ಮೇಲೆ 2010ರ ಮಟ್ಟದಿಂದ 2030ರ ಹೊತ್ತಿಗೆ ಶೇ.10.6 ರಷ್ಟು (ಕಳೆದ ವರ್ಷ ಶೇ.13.7 ಏರಿಕೆಯೆಂದು ಅಂದಾಜು ಇತ್ತು) ಏರಿಕೆ ಕಾಣುವ ಮೂಲಕ ಪರಿಸ್ಥಿತಿ ಉತ್ತಮವಾಗಿದೆ ಎಂದು ಉನ್ನತ ಮಟ್ಟದ ಸಚಿವರ ದುಂಡುಮೇಜಿನ ಸಭೆಯ ವರದಿಯಲ್ಲಿ ಹೇಳಲಾಗಿದೆ. ಆದರೆ ವೈಜ್ಞಾನಿಕ ವರದಿ ಈಗಿನ ಗುರಿ ಮುಟ್ಟಲು 2010 ರ ಮಟ್ಟದಿಂದ ಏರಿಕೆಯನ್ನು 2025ರಲ್ಲೇ ಸ್ಥಗಿತಗೊಳಿಸಿ 2030ರ ಹೊತ್ತಿಗೆ ಶೇ.43ರಷ್ಟು ಕಡಿತಗೊಳಿಸಬೇಕು ಎಂದು ಹೇಳಿದೆ. ಆದರೂ COP27 ಇದನ್ನು ಗಂಭೀರವಾಗಿ ತೆಗೆದುಕೊಂಡು ತಕ್ಕ ಕ್ರಮ ರೂಪಿಸಲು ಮುಂದಾಗಲಿಲ್ಲವೆಂಬುದು ಆತಂಕದ ವಿಷಯ.

ಯು.ಕೆ ಮತ್ತು ಯುರೋ ಕೂಟಗಳ ಪ್ರತಿನಿಧಿಯಾಗಿ COP26ರ ಮುಖ್ಯಸ್ಥ ಆತಂಕ ವ್ಯಕ್ತಪಡಿಸಿದರೂ, ಸೂಸುವಿಕೆ ಕಡಿತಗೊಳಿಸುವುದರಲ್ಲಿ ಆ ದೇಶಗಳ ಸಾಧನೆ ಇದಕ್ಕೆ ತಕ್ಕುದಾಗಿಲ್ಲ. ಯುರೋ ಕೂಟ COP27ರ ಕೊನೆಯಲ್ಲಿ 1990ರ ಸೂಸುವಿಕೆ ಮಟ್ಟದಿಂದ ಕಡಿತವನ್ನು ಈಗಾಗಲೇ ಕೊಟ್ಟ ಆಶ್ವಾಸನೆಯಾದ ಶೇ.55ರಿಂದ ಶೇ57ಕ್ಕೆ ಮಾತ್ರ ಏರಿಸಿತು. ಹವಾಮಾನ ಬದಲಾವಣೆಯ ವೈಜ್ಞಾನಿಕ ಸಮಿತಿ ತನ್ನ 4ನೆಯ ವರದಿಯಲ್ಲೇ (ಇತ್ತೀಚಿನ ವರದಿ 6ನೆಯದು) ಶ್ರೀಮಂತ ದೇಶಗಳು ಶೇ.80–90ರಷ್ಟು ಕಡಿತ ಮಾಡಬೇಕು ಎಂದು ಹೇಳಿತ್ತು. ಆಗ ಅದನ್ನು ಗುರಿಯಾಗಿ ಸ್ವೀಕರಿಸಿತ್ತು. ಈಗ ಮಾತ್ರ ಆ ಬಗ್ಗೆ ಜಾಣಮರೆವು ಪ್ರದರ್ಶಿಸಿದೆ.

ಈ ವರ್ಷದ ಉಕ್ರೇನ್ ಯುದ್ಧ ಮತ್ತು ಅದರಿಂದ ಉಂಟಾಗಿರುವ ಇಂಧನ ಬಿಕ್ಕಟ್ಟು ಇದನ್ನು ಇನ್ನಷ್ಟು ಸಂಕೀರ್ಣಗೊಳಿಸಿದೆ ಎಂಬುದು ನಿಜ. ಆದರೆ ಇಂಧನ ಬಿಕ್ಕಟ್ಟು ಜತೆ ಯುದ್ಧದಲ್ಲೇ ಅನುತ್ಪಾದಕವಾಗಿ ವ್ಯರ್ಥವಾಗುವ ಇಂಧನ ಮತ್ತು ಹೆಚ್ಚಾಗುವ ಸೂಸುವಿಕೆಯೇ ಉಕ್ರೇನ್ ಕದನವಿರಾಮಕ್ಕೆ ಪ್ರಚೋದಕವಾಗಬೇಕಿತ್ತು. ಯುರೋಪಿನಲ್ಲೇ ಈಗಾಗಲೇ ಕಂಡ ಹವಾಮಾನ ಬದಲಾವಣೆಯ ಅನಾಹುತಗಳು ಸಹ ಈ ತುರ್ತು ಮೂಡಿಸಲಿಲ್ಲ. ಬದಲಿಗೆ ಇಂಧನ ಬಿಕ್ಕಟ್ಟು ಪರಿಹರಿಸಲು ಹವಾಮಾನ ಬದಲಾವಣೆಯ ಅನಾಹುತಗಳನ್ನು ಹೆಚ್ಚಿಸುವ ತುರ್ತು ಕ್ರಮಗಳನ್ನು ಯು.ಕೆ ಮತ್ತು ಯುರೋ ಕೂಟ ಕೈಗೊಂಡಿದೆ. ರಶ್ಯಾದ ಪ್ರಾಕೃತಿಕ ಅನಿಲದ ಕೊರತೆಯಿಂದಾಗಿ ಮುಚ್ಚಲು ಸಿದ್ಧವಾಗಿದ್ದ ಕಲ್ಲಿದ್ದಲು ವಿದ್ಯುತ್ ಉತ್ಪಾದನಾ ಕೇಂದ್ರಗಳನ್ನು ಯು.ಕೆ, ಫ್ರಾನ್ಸ್, ಜರ್ಮನಿ, ನಾರ್ವೆ, ಫಿನ್ ಲ್ಯಾಡ್ ಗಳಲ್ಲಿ ಸಕ್ರಿಯಗೊಳಿಸಲಾಗಿದೆ. ಇಂಡೋನೇಶ್ಯಾದಿಂದ ಕಲ್ಲಿದ್ದಲು ಆಮದು ಮಾಡಲಾಗುತ್ತಿದೆ. ದ್ರವೀಕೃತ ಪ್ರಾಕೃತಿಕ ಅನಿಲ (ಎಲ್.ಎನ್.ಜಿ) ಪೂರೈಕೆ, ಶೇಖರಣೆಗೆ ಭಾರೀ ಸ್ಥಾವರಗಳನ್ನು ಸ್ಥಾಪಿಸಲಾಗುತ್ತಿದೆ. ಜರ್ಮನಿ ಇಂತಹ ದೈತ್ಯ ಸ್ಥಾವರವನ್ನು 6 ತಿಂಗಳಲ್ಲೇ ಸ್ಥಾಪಿಸಿದೆ. ಕಟಾರ್ ಎಲ್.ಎನ್.ಜಿ ಪೂರೈಕೆಯ ಹಲವು ದೀರ್ಘ ಒಪ್ಪಂದಗಳನ್ನು ಮಾಡಿಕೊಂಡಿದೆ.

ಕಳೆದ COP ಸಮ್ಮೇಳನದಲ್ಲಿ ಭಾರತ, ಚೀನಾಗಳು ಹೊಸ ಕಲ್ಲಿದ್ದಲು ವಿದ್ಯುತ್ ಕೇಂದ್ರಗಳನ್ನು ಸ್ಥಾಪಿಸಬಾರದು, ಹಳೆಯವನ್ನು ಬೇಗ ಮುಚ್ಚಬೇಕೆಂದು ಶ್ರೀಮಂತ ದೇಶಗಳು ತೀವ್ರ ಒತ್ತಡ ತಂದಿದ್ದವು. ಆದರೆ ಅವು ಬಳಸುವ ತೈಲ, ಪ್ರಾಕೃತಿಕ ಅನಿಲ ಸ್ಥಾವರಗಳಿಗೆ ಇದೇ ನೀತಿ ಅನ್ವಯಿಸಲು ತಯಾರಿಲ್ಲದ ಇಬ್ಬಗೆ ಧೋರಣೆ ತೋರಿಸಿದ್ದವು. ಆದರೆ ಅಭಿವೃದ್ಧಿಶೀಲ ದೇಶಗಳು ಹಸಿರು ಪುನರ್ನವಿಕರಿಸಬಹುದಾದ ಶಕ್ತಿ ಮೂಲಗಳನ್ನು ಮಾತ್ರ ಬಳಸಬೇಕು ಎಂದು ತಾಕೀತು ಮಾಡಿದ್ದವು. ಇದರ ಫಲವಾಗಿಯೇ ಎಂಬಂತೆ ಈ ಬಾರಿ “ಪುನರ್ನವೀಕರಿಸಬಹುದಾದ” ಬದಲು “ಕಡಿಮೆ ಸೂಸುವಿಕೆ”ಯ ಶಕ್ತಿ ಮೂಲಗಳನ್ನು ಬಳಸಬೇಕು ಎಂದು ಹೇಳಿಕೆ ಸೂಚಿಸುತ್ತದೆ. ಸೂಸುವಿಕೆ ಹೆಚ್ಚಿರುವ ಪಳೆಯುಳಿಕೆ ಇಂಧನ ಗಳನ್ನು ಕ್ರಮೇಣ ಕಡಿಮೆ ಮಾಡುವುದನ್ನು ಅಜೆಂಡಾದಿಂದಲೇ ಬಿಟ್ಟಿರುವುದು ತಾಪಮಾನ ಏರಿಕೆ ಮಿತಿಗೊಳಿಸುವ ಅಜೆಂಡಾಕ್ಕೆ ಆಘಾತ ತರಲಿದೆ. ಹವಾಮಾನ ಬದಲಾವಣೆಯ ಪ್ರಕೋಪ ತಡೆಯುವ ಜಾಗತಿಕ ಕಾರ್ಯಾಚರಣೆಯಲ್ಲಿ ಒಟ್ಟಾರೆಯಾಗಿ ಹಿನ್ನಡೆಯೇ ಆಗಿದೆ ಎನ್ನಬೇಕು. ಇದು ಮುಂದೆ ಇನ್ನಷ್ಟು ಹೆಚ್ಚಿನ ‘ನಷ್ಟ’ಕ್ಕೆ ಕಾರಣವಾಗಬಹುದೇ?

NEW No. MAG(3)/NPP/205/2021-2022
JANASHAKTHI KANNADA VARA PATRIKE December 5-11, 2022 Price: Rs. 10/- Date of Publication: 02 December 2022 RNI No. KARKAN /2006/17926 Posted on 05-12-2022
"REGISTERD" Postal Reg. No. RNP/KA/BGS/2078/2019-21 Posted at BG PSO, BG - 560026 Licensed to Post without prepayment License No. PMG/BG/WPP-283/2019-21 **Posted at Periodical Rate -** Rs. 2

ರಾಜ್ಯ ಅಕ್ಷರ ದಾಸೋಹ ನೌಕರರ 5ನೇ ರಾಜ್ಯ ಸಮ್ಮೇಳನ

ಗೌರವಯುತ ಬದುಕಿಗಾಗಿ ಕನಿಷ್ಠ ಸಂಬಳ, ಉದ್ಯೋಗ ಭದ್ರತೆ ಕೊಡಿ



'ಬಡವರು, ಅಸಂಘಟಿತ ಕಾರ್ಮಿಕರು, ಗುತ್ತಿಗೆ ನೌಕರರು ಬದುಕುಳಿಯಲು ಕನಿಷ್ಠ ಸಂಬಳ ಮತ್ತು ಸಮಾಜದಲ್ಲಿ ಗೌರವಯುತ ಜೀವನ ನಡೆಸಲು ಉದ್ಯೋಗದ ಭದ್ರತೆಯಾದರೂ ಕಲ್ಪಿಸಬೇಕು' ಎಂದು ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ಸ್‌ನ(ಸಿಐಟಿಯು) ರಾಜ್ಯ ಸಮಿತಿ ಪ್ರಧಾನ ಕಾರ್ಯದರ್ಶಿ ಮೀನಾಕ್ಷಿ ಸುಂದರಂ ಸರ್ಕಾರಕ್ಕೆ ಮನವಿ ಮಾಡಿದ್ದಾರೆ.

ರಾಜ್ಯ ಅಕ್ಷರ ದಾಸೋಹ ನೌಕರರ 5ನೇ ರಾಜ್ಯ ಸಮ್ಮೇಳನದ ಪ್ರಯುಕ್ತ ಮಾರ್ಕೆಟ್ ಪ್ರದೇಶದಲ್ಲಿ ನವೆಂಬರ್ 29, 2022 ರಂದು ನಡೆದ ಬಹಿರಂಗ ಸಭೆಗೆ ಮುಖ್ಯ ಅತಿಥಿಗಳಾಗಿ ಆಗಮಿಸಿದ ಮೀನಾಕ್ಷಿ ಸುಂದರಂ ಮಾತನಾಡಿದರು.

'ಚುನಾವಣೆಗೂ ಮುನ್ನ ಆಡಳಿತರೂಢ ಪಕ್ಷವು ಸ್ವರ್ಗವನ್ನೇ ಭೂಮಿಗೆ ತರುವಂತಹ ಆಶ್ವಾಸನೆಗಳನ್ನು ನೀಡಿತ್ತು. ಗೆದ್ದ ಬಳಿಕ ಬೇಡಿಕೆಗಳು ಈಡೇರಿಸುವಂತೆ ಜನರು ಕೇಳಿದರೆ, ಅದು ನೆಹರೂ, ಬ್ರಿಟಿಷರತ್ತ ಕೈತೋರಿಸುತ್ತಿದೆ. ನಮಗೆ ಸ್ವರ್ಗ ಬೇಡ, ಬಡವರು ಗೌರವಯುತವಾಗಿ ಬದುಕವಂತಹ ಕನಿಷ್ಠ ಸೌಕರ್ಯಗಳಾದರೂ ಕೊಡಿ' ಎಂದು ಆಗ್ರಹಿಸಿದರು.

'ಇವತ್ತು ದೇವಸ್ಥಾನ, ದೇವರು, ಸರ್ಕಾರಗಳು ನಡೆಯುತ್ತಿರುವುದು ಬಡವರ ಹಣದಿಂದ. ಬಡವರಿಂದ ಹಣ ದೋಚಿ ಅವರಿಗೆ ಜಾತಿ, ಧರ್ಮದ ಬೋಧನೆ ಮಾಡುತ್ತಿವೆ. ಮತ ಪಡೆಯುವಾಗ ಎಲ್ಲರೂ ಒಂದೇ ಎಂದವರು, ಪರಿಹಾರ ಕೇಳಲು ಹೋದವರನ್ನು ಧರ್ಮ, ಜಾತಿ, ನಾಡು, ನುಡಿ, ಪ್ರಾದೇಶಿಕತೆ ಹೆಸರಲ್ಲಿ ವಿಭಜಿಸುತ್ತಿವೆ' ಎಂದು ಟೀಕಿಸಿದರು.

'ನಮ್ಮ ಬದುಕಿನ ಪ್ರತಿ ಕ್ಷಣವನ್ನು ತೆರಿಗೆ ಪಾವತಿ ರೂಪದಲ್ಲಿ ಸವೆಸುತ್ತಿದ್ದೇವೆ. ತಿನ್ನುವ ಅನ್ನ, ಕುಡಿಯುವ ಪದಾರ್ಥಗಳ ಮೇಲೆ ತೆರಿಗೆ ಕಟ್ಟುತ್ತಿದ್ದೇವೆ. ಮುಂದೊಂದು ದಿನ ಉಸಿರಾಡುವ ಗಾಳಿಗೂ ತೆರಿಗೆ ಹಾಕಿದರೆ ಅಚ್ಚರಿಯಿಲ್ಲ. ಆದರೆ, ಸಿರಿವಂತರಿಗೆ ತೆರಿಗೆಯಿಂದ ವಿನಾಯಿತಿ ಕೊಡುವುದು ಮಾತ್ರ ಸರ್ಕಾರ ನಿಲ್ಲಿಸಿಲ್ಲ' ಎಂದು ಆರೋಪಿಸಿದರು.





'ಸರ್ಕಾರದ ಇಂದಿನ ನೀತಿಗಳು ಹೀಗೆಯೇ ಮುಂದುವರಿದರೆ ನಾಳೆಯ ನಮ್ಮ ಮಕ್ಕಳಿಗೆ ಉದ್ಯೋಗ ಸಿಗುವುದಿಲ್ಲ. ಹೀಗಾಗಿ, ನಮ್ಮ ಮಕ್ಕಳ ಶಿಕ್ಷಣ, ಆರೋಗ್ಯ, ಉದ್ಯೋಗ, ಜೀವನ ಸುರಕ್ಷತೆಗಾಗಿ ಹೋರಾಟ ಮಾಡಬೇಕಿದೆ' ಎಂದು ಅವರು ಹೇಳಿದರು.

ರಾಜ್ಯ ಅಕ್ಷರ ದಾಸೋಹ ನೌಕರರ ಸಂಘದ ಗೌರವ ಅಧ್ಯಕ್ಷೆ ಎಸ್. ವರಲಕ್ಷ್ಮಿ ಮಾತನಾಡಿ, 'ಬಿಸಿಯೂಟದ ಅಡುಗೆ ಸಿಬ್ಬಂದಿ ಕನಿಷ್ಠ ವೇತನ ಇಲ್ಲದೆ ಹಲವು ವರ್ಷಗಳಿಂದ ದುಡಿಯುತ್ತಿದ್ದಾರೆ. ದಿನಕ್ಕೆ 6 ಗಂಟೆ ದುಡಿಸಿಕೊಳ್ಳುವ ಸರ್ಕಾರ, 4 ಗಂಟೆಗಳ ಲೆಕ್ಕದಲ್ಲಿ ದಿನಗೂಲಿ ಕೊಡುತ್ತಿದೆ' ಎಂದರು.

'ಶಾಲಾ ಪಠ್ಯಪುಸ್ತಕಗಳ ಬದಲಾವಣೆ, ತರಗತಿಗಳಲ್ಲಿ ಭಗವದ್ಗೀತೆ ಬೋಧನೆಯ ಚಿಂತನೆ, ಸನ್ಯಾಸಿಗಳಿಂದ ಸಲಹೆ ಪಡೆಯುವಲ್ಲಿ ಮುಳುಗಿರುವ ಶಿಕ್ಷಣ ಸಚಿವರಿಗೆ ಬಿಸಿಯೂಟದ ಅಡುಗೆ ಸಿಬ್ಬಂದಿಯ ಕಷ್ಟಗಳು ಕಾಣಿಸುತ್ತಿಲ್ಲ' ಎಂದು ಆಕ್ರೋಶ ವ್ಯಕ್ತಪಡಿಸಿದರು.

'ಧಾರ್ಮಿಕ ಸ್ಥಳಗಳಿಗೆ ತೆರಳುವ ಯಾತ್ರಿಕರ ಪ್ರಯಾಣಕ್ಕೆ, ಸರ್ಕಾರದ ಯೋಜನೆಗಳ ಫಲಾನುಭವಿಗಳಿಗೆ ಸರ್ಕಾರವೇ ಮುಂದೆ ನಿಂತು ಸಬ್ಸಿಡಿಗಳನ್ನು ಕೊಡುತ್ತಿದೆ. ತನ್ನ ಯೋಜನೆಯ ಭಾಗವಾಗಿ ಕೆಲಸ ಮಾಡುತ್ತಿರುವ ಗುತ್ತಿಗೆ ನೌಕಕರಿಗೆ ಕನಿಷ್ಠ ವೇತನ ಕೊಡುತ್ತಿಲ್ಲ. ತನ್ನ ಅನಗತ್ಯ ಖರ್ಚುಗಳನ್ನು ಕೈಬಿಟ್ಟರೆ ಲಕ್ಷಾಂತರ ಗುತ್ತಿಗೆ ನೌಕರರು ನೆಮ್ಮದಿಯ ಬದುಕು ಕಟ್ಟಿಕೊಳ್ಳತ್ತಾರೆ' ಎಂದರು.

ಬಹಿರಂಗ ಸಭೆಯ ಪೂರ್ವಭಾವಿಯಾಗಿ ನಗರದ ಕನ್ನಡ ಭವನದಿಂದ ಡಿಸಿ ಕಚೇರಿ, ಜಗತ್ ವೃತ್ತ ಮಾರ್ಗವಾಗಿ ಸಾವಿರಾರು ಅಕ್ಷರ ದಾಸೋಹ ನೌಕರರು ಮಾರ್ಕೆಟ್ ಪ್ರದೇಶದವರೆಗೆ ಮೆರವಣಿಗೆ ನಡೆಸಿದರು.

ಸಂಘದ ರಾಜ್ಯ ಸಮಿತಿ ಅಧ್ಯಕ್ಷೆ ಲಕ್ಷ್ಮಿದೇವಿ ಅಧ್ಯಕ್ಷತೆ ವಹಿಸಿದ್ದರು. ಜನವಾದಿ ಮಹಿಳಾ ಸಂಘಟನಾ ರಾಜ್ಯ ಉಪಾಧ್ಯಕ್ಷೆ ಕೆ.ನೀಲಾ, ಸಿಐಟಿಯು ಜಿಲ್ಲಾ ಸಮಿತಿ ಅಧ್ಯಕ್ಷೆ ಶಾಂತಾ ಎನ್.ಘಂಟೆ, ಪ್ರಧಾನ ಕಾರ್ಯದರ್ಶಿ ಎಂ.ಬಿ.ಸಜ್ಜನ್, ಸಂಚಾಲಕಿ ಎಚ್.ಎಸ್.ಸುನಂದಾ, ಸಂಘದ ಜಿಲ್ಲಾ ಅಧ್ಯಕ್ಷೆ ಗೌರಮ್ಮ ಪಾಟೀಲ, ಖಜಾಂಚಿ ಮಹಾದೇವಮ್ಮ, ಉಪಾಧ್ಯಕ್ಷೆ ಸಿದ್ದಮ್ಮ, ಪ್ರಧಾನ ಕಾರ್ಯದರ್ಶಿ ಮಾಲಿನಿ ಮೇಸ್ತಾ, ಮುಖಂಡಾರದ ವಿಜಯಲಕ್ಷ್ಮಿ, ಸಂಗೀತಾ ಗುತ್ತೇದಾರ, ರೇಖಾ ರಂಗನ್ ಇದ್ದರು.

ಬಾಗೇಪಲ್ಲಿ–ಪೆಸಲಪರ್ತಿಯಿಂದ ಯುವ ಜನರ ಪಾದಯಾತ್ರೆಗೆ ಡಿ.ವೈ.ಎಫ್.ಐ. ಚಾಲನೆ

ಗ್ರಾಮೀಣ ಭಾಗದ ವಿವಿಧ ಬೇಡಿಕೆ ಈಡೇರಿಕೆಗೆ ಒತ್ತಾಯಿಸಿ ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಶನ್ (ಡಿ.ವೈ.ಎಫ್.ಐ.) ನೇತೃತ್ವದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಯುವಜನರ ಪಾದಯಾತ್ರೆಗೆ ಡಿವೈಎಫ್‌ಐ ಜಿಲ್ಲಾ ಸಂಚಾಲಕ ಡಾ.ಅನಿಲ್ ಕುಮಾರ್ ಚಾಲನೆ ನೀಡಿದರು.

ತಾಲ್ಲೂಕಿನ ಐತಿಹಾಸಿಕ 'ಭೂಮಿ ಹೋರಾಟ'ದ ನೆಲೆಯಾದ ಪೆಸಲಪರ್ತಿ ಗ್ರಾಮದಿಂದ ಪಾದಯಾತ್ರೆಗೆ ಚಾಲನೆ ನೀಡಲಾಯಿತು. ಈ ಭಾಗದಲ್ಲಿ ಯಾವ ಗ್ರಾಮಕ್ಕೂ ಸುಸಜ್ಜಿತ ರಸ್ತೆ ಅಭಿವೃದ್ಧಿಯಾಗಿಲ್ಲ. ಬದಲಾಗಿ ಅಕ್ರಮ ಮದ್ಯ ಮಾರಾಟ, ಕಲ್ಲು ಗಣಿಗಾರಿಕೆ ನಡೆಯುತ್ತಿದೆ. ಗ್ರಾಮೀಣ ಪ್ರದೇಶದಲ್ಲಿ ರಸ್ತೆಗಳು ಸಮರ್ಪಕವಾಗಿಲ್ಲ. ಇದರಿಂದ ಈ ಭಾಗದ ಜನರು, ಮಹಿಳೆಯರು, ಶಾಲಾ ಮಕ್ಕಳು ಸಂಚಾರ ಮಾಡಲು ಆಗುತ್ತಿಲ್ಲ. ಕನಿಷ್ಠ ನಾಗರಿಕ ಸೌಲಭ್ಯಗಳನ್ನು ಒದಗಿಸಿಕೊಡುವಲ್ಲಿ ಸರಕಾರ ಹಾಗೂ ಜನಪ್ರತಿನಿಧಿಗಳು ವಿಫಲರಾಗಿದ್ದಾರೆ. ಇವುಗಳ ನಿವಾರಣೆಗೆ ಸಂಘಟಿತ ಹೋರಾಟವೊಂದೇ ದಾರಿ ಎಂದು ನುಡಿದರು.

ಕೃಷಿ ಕೂಲಿಕಾರರ ಸಂಘದ ಮುಖಂಡ ಎಂ.ಪಿ.ಮುನಿವೆಂಕಟಪ್ಪ ನವರು ಶುಭ ಕೋರಿ ಮಾತನಾಡಿ' ರೈತರು ಕಾರ್ಷಿಕ ಬಿಕ್ಕಟ್ಟಿನ ಭೀಕರ ಪರಿಸ್ಥಿತಿಯಲ್ಲಿ ನರಳುತ್ತಿದ್ದಾರೆ.

'ಕೂಲಿಕಾರ್ಮಿಕರು ಸಂಕಷ್ಟದಲ್ಲಿ ಇದ್ದಾರೆ. ಗೂಳೂರು ಹೋಬಳಿ ವ್ಯಾಪ್ತಿಯಲ್ಲಿ ಇರುವ ಗ್ರಾಮಗಳಿಗೆ ರಸ್ತೆ, ನೀರು, ಮನೆ ನಿವೇಶನ ನೀಡಬೇಕು' ಎಂದು ಒತ್ತಾಯಿಸಿದರು.

ಕ್ಷೇತ್ರದ ಸಿಪಿಐ(ಎಂ) ಶಾಸಕರಾಗಿದ್ದ ಜಿ.ವಿ ಶ್ರೀರಾಮರೆಡ್ಡಿ ಅವಧಿಯಲ್ಲಿ ಮಾಡಿದ ರಸ್ತೆ ಅಭಿವೃದ್ಧಿ, ಶಾಲಾ ಕಾಲೇಜುಗಳ ಆರಂಭ ಸೇರಿದಂತೆ ಕ್ಷೇತ್ರದ ಸಮಗ್ರ ಅಭಿವೃದ್ಧಿ ಕೆಲಸ ಹೊರತುಪಡಿಸಿದರೆ ನಂತರ ಬಂದ ಯಾವ ಶಾಸಕರು ಅಭಿವೃದ್ಧಿ ಮಾಡಿಲ್ಲ. ಈಗಿನ ಜನ ಪ್ರತಿನಿಧಿಗಳು ಬಾರ್ ಗಳನ್ನು ಹೆಚ್ಚಿಸಿ ಸಮಾಜದ ಸ್ವಾಸ್ಥ್ಯ ಹಾಳು ಮಾಡಿದ್ದಾರೆ. ಡಿವೈಎಫ್‌ಐ ಬೇಡಿಕೆಗಳನ್ನು ಸರಕಾರ ಈಡೇರಿಸಬೇಕು ಎಂದು ಒತ್ತಾಯಿಸಿದರು.

ತಾಲ್ಲೂಕಿನ ದೇವಿಕುಂಟೆ, ಮಾಡಪಲ್ಲಿ, ಜಿಲ್ಲಾಲಪಲ್ಲಿ, ಕೊಲಿಂಪಲ್ಲಿ, ಪಿಚ್ಚಲವಾರಪಲ್ಲಿ ಸೇರಿದಂತೆ ವಿವಿಧ ಗ್ರಾಮಗಳ ರಸ್ತೆಗಳಿಗೆ ಡಾಂಬರೀಕರಣ ಮಾಡಬೇಕು. ಸಮರ್ಪಕ ಸಾರಿಗೆ, ಸ್ಥಳೀಯ ಯುವಕರಿಗೆ ಉದ್ಯೋಗ ಸೃಷ್ಟಿಸುವ ಕೈಗಾರಿಕೆಗಳನ್ನು ಆರಂಭಿಸಬೇಕು ಎಂದು ಒತ್ತಾಯಿಸಿದರು.

ಜನವಾದಿ ಮಹಿಳಾ ಸಂಘಟನೆ ತಾಲ್ಲೂಕು ಅಧ್ಯಕ್ಷೆ ಬಿ.ಸಾವಿತ್ರಮ್ಮ, ಡಿವೈಎಫ್‌ಐ ಮುಖಂಡರಾದ ವೈ.ಎನ್ ಹರೀಶ್, ಗುಡಿಬಂಡೆ ಶ್ರೀನಿವಾಸ್, ಸುರೇಶ್ ಮದಕರಿ, ಡಿ.ವಿ ಮುರಳಿ, ನಾಗಭೂಷಣ, ತಿರುಮಲೇಶ್, ಅಶೋಕ್, ಲಕ್ಷ್ಮೀನಾರಾಯಣ, ಬಾಬು, ಗಂಗಾಧರ, ಮುನೇಂದ್ರ, ಎಸ್.ಎಫ್.ಐ ನ ಜಿಲ್ಲಾಧ್ಯಕ್ಷ ಸೋಮಶೇಖರ, ಸುನೀಲ್ ಮುಂತಾದವರು ಉಪಸ್ಥಿತರಿದ್ದರು.

ಈ ಪಾದಯಾತ್ರೆ ಬಾಗೇಪಲ್ಲಿಯ ತಹಶೀಲ್ದಾರ್ ಕಛೇರಿ ತಲುಪಿ ಪ್ರತಿಭಟನೆ ನಡೆಸಿ ಮನವಿ ಪತ್ರ ಸಲ್ಲಿಸಿತ್ತು.



JANASHAKTHI KANNADA VARA PATRIKE: Printed, Published by **U. BASAVARAJ**, No. 37/a, 8th Cross, EMS Bhavan, Mahalakshmi Layout, Bangalore 560086, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Editor : **NITYANANDASWAMI**